
# ದೆಹಲಿ ಕರ್ನಾಟಕ ಸಂಘದ ಅಭಿಮತ

ಮಾರ್ಚ್ 2013
ಬೆಲೆ ರೂ. 1



## ನಿರ್ಭಯದಿ ನಗುತಿರು ನೀ ನಿರಂತರ....

# ಕನ್ನಡ ಸಾಹಿತ್ಯ ಲೋಕಕ್ಕೆ ಹೊಸ ಕಾವ್ಯ ಪರಂಪರೆಯನ್ನು ಸೃಷ್ಟಿಸಿದ ಮಹಾನ್ ಕವಿ ಡಾ.ಎಚ್.ಎಸ್.ಶಿವಪ್ರಕಾಶ್

ಡಾ.ವೀರಪ್ಪ ಮೊಯಿಲಿ



"ಕನ್ನಡದ ಕಾವ್ಯ ಪರಂಪರೆಯಲ್ಲಿ ಕಾವ್ಯವನ್ನು ಜನಸಾಮಾನ್ಯರಿಗೆ ತಲುಪಿಸುವ ಪ್ರಯತ್ನ ಮಾಡಿದವರೇ ನಮ್ಮ ವಚನಕಾರರು ಹಾಗೂ ಹರಿದಾಸರು. ಸಾಹಿತ್ಯ ರಸಾನುಭವ ಅಥವಾ ಉಪದೇಶಕ್ಕೆ ಮೀಸಲು ಎನ್ನುವ ಸಂದರ್ಭದಲ್ಲಿ ಕಾವ್ಯವನ್ನು ಸಾಮಾಜಿಕ ಬದಲಾವಣೆಗೆ ಹಾಗೂ ಆಧ್ಯಾತ್ಮಿಕ ಸಾಧನೆಗೆ ಬಳಸಿಕೊಂಡ ಶಿವಶರಣರು ಕನ್ನಡ ಸಾಹಿತ್ಯದಲ್ಲಿ ಹೊಸ ಪರಂಪರೆಯನ್ನು ಸೃಷ್ಟಿ ಮಾಡಿದರು. ಈ ಪರಂಪರೆಯನ್ನು ದುಡಿಸಿಕೊಂಡ ಪ್ರಮುಖರಲ್ಲಿ ಡಾ.ಎಚ್.ಎಸ್.ಶಿವಪ್ರಕಾಶ್ ಮೊಟ್ಟ ಮೊದಲಿಗರು. ವಚನಕಾರರ ಸಾಮಾಜಿಕ, ಆರ್ಥಿಕ ದೃಷ್ಟಿಯನ್ನು ಪ್ರತಿಬಿಂಬಿಸುತ್ತಲೇ ಅಲ್ಲಿನ ಅನುಭಾವಿ ನೆಲೆಯನ್ನು ಗುರುತಿಸುವ ವಿಶಿಷ್ಟ ಪ್ರಯತ್ನವನ್ನು ಅವರ ಕೃತಿಗಳಲ್ಲಿ ಕಾಣಬಹುದು. ಇದೇ ಅವರ ವೈಶಿಷ್ಟ್ಯತೆ" – ಎಂಬುದಾಗಿ ಸಾಹಿತಿ, ಸಚಿವರೂ ಆಗಿರುವ ಡಾ.ವೀರಪ್ಪ ಮೊಯಿಲಿ ಅವರು ಶ್ಲಾಘಿಸಿದರು. 2012ರ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಎಚ್.ಎಸ್.ಶಿವಪ್ರಕಾಶ್ ಅವರಿಗೆ ದೆಹಲಿ ಕರ್ನಾಟಕ ಸಂಘದಲ್ಲಿ ಫೆಬ್ರವರಿ 22ರಂದು ಆಯೋಜಿಸಲಾಗಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ ಡಾ.ವೀರಪ್ಪ ಮೊಯಿಲಿ ಅವರು ಶಿವಪ್ರಕಾಶ್ ಅವರ ಸಾಹಿತಿ ಮಿತ್ರರೂ ಹೌದು. ವಚನ ಸಾಹಿತ್ಯ, ಹಾಗೂ ಕಲ್ಯಾಣದ ಹೊಸ ವ್ಯಾಖ್ಯಾನ ನೀಡಿದ ಶಿವಪ್ರಕಾಶ್ ಅವರ 'ಮಹಾಚೈತ್ರ' ನಾಟಕ ತಾವು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಹುಟ್ಟು ಹಾಕಿದ ವಿವಾದಗಳನ್ನು ಸಮರ್ಥವಾಗಿ ಎದುರಿಸಿದ್ದನ್ನು ಈ ಸಂದರ್ಭದಲ್ಲಿ ಸ್ಮರಿಸಿದರು. ಹದಿನಾರನೇ ಶತಮಾನದ ದಲಿತ ನಾಯಕ ಮಂಟೇಸ್ವಾಮಿಯ ಕಥಾವಸ್ತುವುಳ್ಳ ನಾಟಕ 'ಮಂಟೇಸ್ವಾಮಿ ಕಥಾ ಪ್ರಸಂಗ'ದ ಮೂಲಕ ಹೊಸ ಜಗತ್ತನ್ನು, ಅದರಲ್ಲೂ ಕೆಳವರ್ಗದವರು ಸಮಾಜವನ್ನು ಹೇಗೆ ನಿರ್ಮಿಸುತ್ತಾರೆ ಹಾಗೂ ಅವರ ದೃಷ್ಟಿಕೋನ ಎಂತಹದ್ದು ಎಂಬ ಅದ್ಭುತ ಚಿತ್ರಣವನ್ನು ನೀಡಿದ ಶಿವಪ್ರಕಾಶ್ ಅವರ ಉದಾತ್ತ ದೃಷ್ಟಿಕೋನವನ್ನು ಮೊಯಿಲಿ ಅವರು ತೆರೆದಿಟ್ಟರು. ಶಿವಪ್ರಕಾಶ್ ಮೂಲತ: ಕವಿ, ಅವರ ನಾಟಕಗಳಲ್ಲಿ ಕೂಡ ಈ ಕಾವ್ಯ ಪರಂಪರೆ ಪ್ರತಿಬಿಂಬಿತವಾಗಿದೆ ಎಂದ ಮೊಯಿಲಿ ಅವರು ಇಂಗ್ಲೀಷ್ ಸಾಹಿತ್ಯದಲ್ಲಿ ವಿದ್ವಾಂಸರಾಗಿರುವ ಶಿವಪ್ರಕಾಶ್ ಇತರ ಎಲ್ಲಾ ಇಂಗೀಷ್ ಬರಹಗಾರರಿಗಿಂತ ಭಿನ್ನವಾಗಿರುವುದು ಅವರು ಕನ್ನಡ ಪರಂಪರೆಯನ್ನು ಮರೆಯದಿರುವುದೇ ಕಾರಣವಾಗಿದೆ ಎಂದು ವಿಶ್ಲೇಷಿಸಿದರು. ಸೂಫಿ ಹಾಗೂ ಭಕ್ತಿಪಂಥದ ಪ್ರಭಾವವನ್ನು ತಮ್ಮ ಬರಹದಲ್ಲಿ ಸಮರ್ಥವಾಗಿ ಬಳಸಿಕೊಂಡಿರುವ ಶಿವಪ್ರಕಾಶ್ ಅವರು ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಕಾವ್ಯ ಪರಂಪರೆಯನ್ನು ದಾಖಲು ಮಾಡಿದ ಅಪೂರ್ವ ಕವಿ ಎಂದು ಮೊಯಿಲಿ ಅವರು ಅಭಿನಂದಿಸಿದರು.

ಕಾರ್ಯಕ್ರಮದ ಮೊದಲಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರತಿಷ್ಠಿತ 'ಇಂಡಿಯನ್ ಲಿಟರೇಚರ್' ಪತ್ರಿಕೆಯ ಸಹ ಸಂಪಾದಕರಾದ ಯುವ ಲೇಖಕ ಅಂಕುರ್ ಬೆಟಗೇರಿ ಅವರು ಶಿವಪ್ರಕಾಶ್ ಅವರನ್ನು ಆಪ್ತವಾಗಿ ಪರಿಚಯಿಸಿದರು. "ನನ್ನ ಬಾಲ್ಯದಿಂದಲೂ ಶಿವಪ್ರಕಾಶ್ ಅವರನ್ನು ಬಲ್ಲ ನನಗೆ ಅಚ್ಚರಿ ತರುವ ಅವರ ವಿಭಿನ್ನ ಕವಿತೆಗಳನ್ನು ಓದುವಾಗ ಕವಿಯ healing presence ಎದ್ದು ಕಾಣುತ್ತದೆ. ಕವಿಯಾಗಿ ಶಿವಪ್ರಕಾಶರು ತಮ್ಮ ಮಾತು, ಕಾವ್ಯ ಮತ್ತು ಕ್ರಿಯೆಯ ಮೂಲಕ ವಿಭಿನ್ನ ಕಾವ್ಯ ಜಗತ್ತಿನ ವಕ್ತಾರರಾಗಿ ಕಾಣಿಸುತ್ತಾರೆ. ಮಾಹಿತಿ ತಂತ್ರಜ್ಞಾನದ ನಡುವೆ ಇಂದು ಪ್ರತಿನಿತ್ಯದ ಜೀವನದಲ್ಲಿ, ಜನಸಂವಾದದಲ್ಲಿ ಮಾತು ಮತ್ತು ಕವಿತೆ ಸಾಯುತ್ತಿವೆ. ಇಂತಹ ಸಂದರ್ಭದಲ್ಲಿ ಜರ್ಮನಿಯಲ್ಲಿದ್ದರೂ ಕನ್ನಡ ಪತ್ರಿಕೆಗಳಿಗೆ ಅಂಕಣಗಳನ್ನು ಬರೆಯುತ್ತಾ ಶುಷ್ಕ ಮಾಹಿತಿಯ ಮಹಾಪೂರಕವಾಗಿರುವ ಈ ಜನಸಂವಾದದ ಹಾಳು ಹೊಲದಲ್ಲಿ ಮಾತಿನ ಬೀಜವನ್ನು ಬಿತ್ತುತ್ತಿದ್ದಾರೆ ಮತ್ತು ಕವಿತೆ, ನಾಟಕಗಳನ್ನು ಬರೆಯುತ್ತಿದ್ದಾರೆ. ಮಾಹಿತಿಯ ಮೂಲಕ ಜನರಿಗೆ ಮಂಕು ಕವಿಸುತ್ತಿರುವ, ಈ ಕ್ರೂರ ಸಮಾಜದಲ್ಲಿ ಶಿವಪ್ರಕಾಶ್ ಅವರ ಕಾವ್ಯ healing presence ನೀಡುತ್ತದೆ" ಎಂದು ಅಂಕುರ್ ಅಕ್ಕರೆಯಿಂದ ನುಡಿದರು. ಶಿವಪ್ರಕಾಶ್ ಅವರ ಕಾವ್ಯದಲ್ಲಿನ ಅತೀತದ ಬಗೆಗಿನ ಮಿಡಿತ ಹಾಗೂ ಬದುಕಿನ ಬಗೆಗಿನ ತೀವ್ರ ಸ್ಪಂದನ ವಿಶಿಷ್ಟ ಹಾಗೂ ವಿಭಿನ್ನ. ಅವರ ಕೃತಿಗಳನ್ನು ಓದುತ್ತಲೇ ಬೆಳೆದ ನನಗೆ ಮುಂದೆಯೂ ಅವರ ಕಾವ್ಯದರ್ಶನದಿಂದ ಬೆಳೆಯಬೇಕೆಂಬ ಹಂಬಲ ಎಂದು ಅಂಕುರ್ ತಮ್ಮ ಬಯಕೆಯನ್ನು ವ್ಯಕ್ತಪಡಿಸಿದರು.

ಇದೀಗ ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ವಿಭಾಗದ ಸಂಚಾಲಕರಾಗಿ ಆಯ್ಕೆಯಾದ ಕನ್ನಡದ ಖ್ಯಾತ ವಿಮರ್ಶಕ, ಲೇಖಕ ಡಾ.ನರಹಳ್ಳಿ ಬಾಲಸುಬ್ರಮಣ್ಯಂ ಅವರು ಈ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಶಿವಪ್ರಕಾಶ್ ಅವರ ನಾಲ್ಕು ದಶಕಗಳ ಸಾಹಿತ್ಯ ಗೆಳೆಯರಾದ ನರಹಳ್ಳಿ ಅವರು ಆತ್ಮೀಯ ಸ್ನೇಹಿತನನ್ನು ವಿಶ್ಲೇಷಿಸಿದ್ದು ಹೀಗೆ – "ಜಾಗತಿಕ ಸಾಹಿತ್ಯವನ್ನು ನಾವು ಅವಲೋಕಿಸಿದಾಗ ಬೌದ್ಧಿಕ ದುರಹಂಕಾರ ಹೆಚ್ಚುತ್ತಿರುವುದನ್ನು ಕಾಣುತ್ತೇವೆ. ಇದಕ್ಕೆ ಉತ್ತರವೆನ್ನುವಂತೆ ಎಚ್.ಎಸ್.ಶಿವಪ್ರಕಾಶ್ ಅವರ ಕಾವ್ಯ ವಿಸ್ಮಯವನ್ನು ನೋಡಬಹುದು. ಪ್ರಕೃತಿಯ ಬೆರಗು, ಸೃಷ್ಟಿಯ ಬೆರಗನ್ನು ಉಳಿಸಿಕೊಂಡಿರುವುದೇ ಅವರ ಕಾವ್ಯದ ಶಕ್ತಿ. ಸೃಜನ ಶೀಲತೆಯನ್ನು, ತಮ್ಮ ತನವನ್ನು ಉಳಿಸಿಕೊಂಡಿರುವ ವಿಶಿಷ್ಟ ವ್ಯಕ್ತಿತ್ವವುಳ್ಳ, ವಿಶಿಷ್ಟ ಕವಿ. ನವ್ಯೋತ್ತರ ಹಾಗೂ ನವ್ಯಕಾವ್ಯದ ಸಂದರ್ಭಗಳಲ್ಲಿ ಅಚ್ಚರಿಗೆ ಸಹಜ ಅನ್ನಿಸದ ವಸ್ತುಗಳನ್ನು ತಮ್ಮ ಕಾವ್ಯದ ಕೇಂದ್ರ ಬಿಂದುಗಳನ್ನಾಗಿಸಿಕೊಂಡವರು ಶಿವಪ್ರಕಾಶ್. ಆಧ್ಯಾತ್ಮ, ಭಕ್ತಿ ಹಾಗೂ ಧಾರ್ಮಿಕ ನಿಗೂಢತೆಗಳತ್ತ ಚಕಿತರಾಗಿದ್ದ ಶಿವಪ್ರಕಾಶ್ ತಮಗೆ ನಿಜ ಅನಿಸಿದ್ದನ್ನು ಬರೆದರು ಹಾಗೂ ಬಾಹ್ಯ ಜಗತ್ತಿನ ಸಿದ್ಧ ಫಾರ್ಮೂಲಗಳನ್ನು ಧಿಕ್ಕರಿಸಿದರು. ಅದರಿಂದಲೇ ಅವರು ಮಹತ್ವದ ಕವಿ, ನಮ್ಮ ನಡುವಿನ ಕಾವ್ಯ ಜಗತ್ತಿನ ವಿಸ್ಮಯ. ಶಿವಪ್ರಕಾಶರ ಸಮಕಾಲೀನನಾಗಿ ಬೆಳೆದ ನನಗೆ ಅವರ ಕಾಣಿಕೆ ಹಾಗೂ ಕಾಣ್ಕೆ ಬೆರಗು ತಂದಿದೆ" – ಎಂದು ನರಹಳ್ಳಿ ಅವರು ಗೆಳೆಯನ ಬಗ್ಗೆ ಆಪ್ಯಾಯತೆಯ ನುಡಿಗಳನ್ನಾಡಿದರು.

"ವೇದಾಂತವನ್ನು ಅರ್ಥೈಸಿಕೊಳ್ಳುವ ಸಂದರ್ಭದಲ್ಲಿ ಹಾಗೂ ಜಾನಪದದ ಆಂತರ್ಯವನ್ನು ಮನನ ಮಾಡಿಕೊಳ್ಳುವ ನಿಟ್ಟಿನಲ್ಲಿ ನನಗೆ ಯಾವಾಗಲೂ ಶಿವಪ್ರಕಾಶ್ ಕಾವ್ಯ ನೆರವಿಗೆ ಬಂದಿದೆ. ಅವರಿಂದ, ಅವರ ಕಾವ್ಯದಿಂದ ನಾನು ಗಳಿಸಿದ್ದು ಅಪಾರ. ಸಮಕಾಲೀನ ಸಾಹಿತ್ಯಕ್ಕೆ, ಹೊಸ ಬಗೆಯ ಅನುಭಾವಗಳಿಗೆ ತೆರೆದುಕೊಳ್ಳಲು ಅವರ ಸಾಹಿತ್ಯ ಸದಾ ಹಾದಿ ತೋರುತ್ತದೆ" – ಎಂದ ಸಾಹಿತ್ಯ ಸಮಿತಿಯ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಅವರು ಶಿವಪ್ರಕಾಶ್ ಅವರನ್ನು ಹಾರ್ದಿಕವಾಗಿ ಅಭಿನಂದಿಸಿದರು.

ಅಭಿನಂದನೆ ಸ್ವೀಕರಿಸಿದ ಶಿವಪ್ರಕಾಶ್ ಅವರು, ದೆಹಲಿ ಕರ್ನಾಟಕ ಸಂಘ ಏರ್ಪಡಿಸಿದ ಆತ್ಮೀಯ ಸಮಾರಂಭ ಸಂತಸ ತಂದಿದೆ ಎಂದು ಹರ್ಷ ವ್ಯಕ್ತಪಡಿಸುತ್ತಾ ತಮ್ಮ ಮನದಾಳದ ಮಾತುಗಳನ್ನು ಮುಂದಿಟ್ಟರು. "ಈ ತೆರನ ಪ್ರಶಸ್ತಿಗಳು ಈ ಮೊದಲೇ ಕನಿಷ್ಠ ಹತ್ತು ವರ್ಷಗಳ ಮೊದಲೇ ಬಂದಿದ್ದರೆ ತುಂಬಾ ಸಂತೋಷವಾಗುತ್ತಿತ್ತೇನೋ. ಈಗ ಈ ವಯಸ್ಸಿನಲ್ಲಿ ಪ್ರಶಸ್ತಿಗಳು, ಪುರಸ್ಕಾರಗಳು ನವಿರೇಳಿಸುವ ಸಂಗತಿಗಳಲ್ಲ. ಮಹತ್ವಾಕಾಂಕ್ಷೆಯ ಕವಿಯಾಗಬೇಕೆಂಬ ಆಸೆ ನನಗಿಲ್ಲ. 6ನೇ ವಯಸ್ಸಿನಿಂದಲೇ ಬರೆಯಲು ಪ್ರಾರಂಭಿಸಿದೆ. ಲಂಕೇಶ್, ಅಡಿಗ, ಕೆ.ಎಸ್.ನ, ಪುತಿನ, ಮೊದಲಾದವರ ಪ್ರೋತ್ಸಾಹದಿಂದ ಕಾವ್ಯ ಬರೆಯುತ್ತಿದ್ದೆ. ಆನಂತರ ನಾಟಕ ಬರೆಯಲು ಪ್ರಾರಂಭಿಸಿದೆ. 'ಮಹಾಚೈತ್ರ' ನಾಟಕ ವಿವಾದದಲ್ಲಿ ಸಿಲುಕಿದಾಗ ಅಂದಿನ ಮುಖ್ಯಮಂತ್ರಿಗಳಾಗಿದ್ದ, ನನ್ನ ಸಾಹಿತಿ ಮಿತ್ರರಾದ ಮೊಯಿಲಿ ಅವರು ನೆರವಾದದ್ದನ್ನು ನಾನೆಂದೂ ಮರೆಯಲಾರೆ" ಎಂದು ಶಿವಪ್ರಕಾಶ್ ಅವರು ಸ್ಮರಿಸಿದರು. ಪ್ರಶಸ್ತಿಗಳಿಗಿಂತ ಎಂದೂ ಓದುಗರೇ ಮುಖ್ಯ. ಅವರೇ ನಿಜವಾದ ಪ್ರಶಸ್ತಿ ಎಂದ ಅವರು ಭಾರತದಾದ್ಯಂತ, ಜಗತ್ತಿನಾದ್ಯಂತ ಓದುಗರು ದೊರೆತಿದ್ದು ತಮ್ಮ ಸುಯೋಗ ಎಂದು ನಮ್ರರಾಗಿ ನುಡಿದರು. ಸುಂದರ ಸಮಾರಂಭದಲ್ಲಿ ಪ್ರೀತಿ ವ್ಯಕ್ತಪಡಿಸಿದ ಎಲ್ಲರಿಗೂ ಹಾಗೂ ಆತ್ಮೀಯ ಗೆಳೆಯರಿಗೂ ತಮ್ಮ ಮನ:ಪೂರ್ವಕ ಅಭಿವಂದನೆ ಸಲ್ಲಿಸಿದರು.

ಜೆ.ಎಸ್.ಯು.ನ ಸಹೋದ್ಯೋಗಿ ಮಿತ್ರ ಶಿವಪ್ರಕಾಶ್ ಅವರಿಗೆ ಅಕಾಡೆಮಿ ಪ್ರಶಸ್ತಿ ಲಭಿಸಿದ್ದಕ್ಕಾಗಿ ಸಂಘದ ಅಧ್ಯಕ್ಷ ಡಾ.ವೆಂಕಟಾಚಲ ಹೆಗಡೆ ಅವರು ಆತ್ಮೀಯವಾಗಿ ಅಭಿನಂದಿಸಿದರು. ಬಿಡುವಿಲ್ಲದ ಒತ್ತಡದ ನಡುವೆಯೂ ಶಿವಪ್ರಕಾಶ್ ಕಾವ್ಯಾಭಿಮಾನದಿಂದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಮೊಯಿಲಿ ಹಾಗೂ ಉಪಸ್ಥಿತರಿದ್ದ ಸಾಹಿತ್ಯಾಭಿಮಾನಿಗಳಿಗೆ ಹೆಗಡೆ ಅವರು ವಂದನಾರ್ಪಣೆ ಸಲ್ಲಿಸಿದರು. ಸಂಘದ ಉಪಾಧ್ಯಕ್ಷೆ ಉಷಾ ಭರತಾದ್ರಿ ಕಾರ್ಯಕ್ರಮ ನಿರ್ವಹಿಸಿದರು.

ಇದೇ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ನವೀಕೃತ ಅಂತರ್ಜಾಲ ತಾಣವನ್ನು ಶ್ರೀ ವೀರಪ್ಪ ಮೊಯಿಲಿ ಅವರು ಚಾಲನೆ ಮಾಡಿದರು.

❑ ಉಷಾ ಭರತಾದ್ರಿ

ದೆಹಲಿ ಕರ್ನಾಟಕ ಸಂಘದ ಅಭಿಮತ ಸಂಪುಟ 23 ಸಂಚಿಕೆ 6
ಮಾರ್ಚ್ 2013, ಬೆಲೆ ರೂ. 1

ಪ್ರಧಾನ ಸಂಪಾದಕರು
ಉಷಾ ಭರತಾದ್ರಿ

ಸಂಪಾದಕ ಮಂಡಳಿ
ಚೆನ್ನು ಎಸ್. ಮಠದ
ರೇಣುಕಾ ಎಸ್. ನಿಡಗುಂದಿ
ಸಂತೋಷ್ ಕುಮಾರ್ ಉಪಾಧ್ಯಾಯ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷರು
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಉಷಾ ಭರತಾದ್ರಿ
ಬಿ.ಕೆ. ಬಸವರಾಜು

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಖಜಾಂಚಿ
ಕೆ.ಆರ್. ರಾಮಮೂರ್ತಿ

ಜಂಟಿ ಕಾರ್ಯದರ್ಶಿಗಳು
ಎನ್.ಆರ್. ಶ್ರೀನಾಥ್
ರೇಣುಕಾ ಎಸ್. ನಿಡಗುಂದಿ

ಸಮಿತಿ ಸದಸ್ಯರು
ಆಂಜನಿ ಗೌಡ
ಎಸ್.ಸಿ. ಹೇಮಲತ
ಟಿ.ಎಂ. ಮೈಲಾರಪ್ಪ
ಪಿ.ಸಿ. ಶ್ರೀನಿವಾಸ
ಸಿ.ಆರ್. ಶ್ರೀನಿವಾಸ
ಜಿ.ಜಿ. ಹೆಗಡೆ
ಆನಂದ ಈಶ್ವರಪ್ಪ ಮುರಗೋಡ
ಬಿ. ನಾರಾಯಣ
ಆರ್. ರೇಣುಕುಮಾರ್
ಎಸ್. ಕೃಷ್ಣ ಭಟ್
ಶಶಿಕಾಂತ್ ಪಾಟೀಲ್

ಹಿಂಬದಿ ಚಿತ್ರ: ಗೆಳತಿಯರು
ಕಲಾವಿದ: ಸುಧೀರ್ ಫಡ್ನೀಸ್

**DELHI KARNATAKA SANGHA**
Rao Tularam Marg, Sector-12, R K Puram,
New Delhi-110022.
Phone: 011-26109615. 011-65643615
email:dksangha@gmail.com
website : www.delhikarnatakasangha.com

# ಮನದ ಮಾತು

ದೆಹಲಿಯ ಸಾಮೂಹಿಕ ಅತ್ಯಾಚಾರದ ಕಪ್ಪು ಛಾಯೆ ಇನ್ನೂ ಕವಿದಿರುವಾಗಲೇ ಈ ಕರಿನೆರಳನ್ನು ಕೊಂಚ ತಿಳಿಗೊಳಿಸುವ ನಿಟ್ಟಿನಲ್ಲಿ ಬಜೆಟ್ ಯತ್ನಿಸಿರುವುದು ಸ್ವಲ್ಪ ಸಂತಸ, ಕೊಂಚ ನೆಮ್ಮದಿಯ ಸಂಗತಿ. ಮಹಿಳೆಯರಿಗೆ ಸಂಬಂಧಿಸಿದ ಯೋಜನೆಗಳಿಗೆಂದೇ 8500 ಕೋಟಿ ರೂಗಳನ್ನು ಮೀಸಲಿಟ್ಟಿದೆ. ದೆಹಲಿ ಅತ್ಯಾಚಾರದ ಬಲಿಪಶುವಾದ ಆ ಹೆಣ್ಣುಮಗಳ ಹೆಸರಿನಲ್ಲಿ 'ನಿರ್ಭಯ ನಿಧಿ' ಸ್ಥಾಪಿಸಿದೆ. ಇದಕ್ಕಾಗಿ 1000 ಕೋಟಿ ರೂ ಮಂಜೂರಾಗಿದೆ. ಈ ನಿಧಿಯಿಂದ ಮಹಿಳೆಯರ ಸಬಲೀಕರಣಕ್ಕೆ ನೆರವಾಗುವುದು ಉದ್ದೇಶ. ಇದಕ್ಕಾಗಿ ಪ್ರತ್ಯೇಕವಾಗಿ ಮಹಿಳಾ ಬ್ಯಾಂಕ್ ಅಸ್ತಿತ್ವಕ್ಕೆ ಬರಲಿದೆ. ಇಷ್ಟೇ ಅಲ್ಲದೆ ಮಹಿಳಾ ಮತ್ತು ಶಿಶು ಅಭಿವೃದ್ಧಿ ಮಂತ್ರಾಲಯಕ್ಕೆ 200 ಕೋಟಿ ರೂಗಳ ಪ್ರತ್ಯೇಕ ಅನುದಾನ ದೊರೆತಿದೆ. ಇದರಿಂದ ರಾಷ್ಟ್ರೀಯ ಸಹಾಯವಾಣಿ ಸ್ಥಾಪನೆ, ಕಾರ್ಪಣ್ಯ ನಿವಾರಣಾ ಕೇಂದ್ರದ ನಿಯೋಜನೆ ಹಾಗೂ ವಿವಾಹೋತ್ತರ ಹಿಂಸೆಗೀಡಾದವರಿಗೆ ನೆರವಿಗೆ ಬರಲು ಈ ನಿಟ್ಟಿನಲ್ಲಿರುವ ಕಾನೂನಿನ ಪರಿಣಾಮಕಾರೀ ಅನುಷ್ಠಾನಕ್ಕೆ ಕ್ರಮ-ಹೀಗೆ ಹತ್ತು ಹಲವು ಕಾರ್ಯಗಳು ಈಡೇರಲಿವೆ. ಆದರೆ ಬಜೆಟ್ ತೋರಿರುವ 'ಔದಾರ್ಯ' ಗಳಿಗಿಂತ ಆಗಬೇಕಾದದ್ದು-ನ್ಯಾಯಾಂಗ ಕ್ಷೇತ್ರದತ್ತ ಹೆಚ್ಚು ಅನುದಾನ. ಏಕೆಂದರೆ ಕ್ಷಿಪ್ರ ನ್ಯಾಯದ ಪ್ರಾಪ್ತಿಗೆ ಕ್ಷಿಪ್ರಗತಿಯಲ್ಲಿ ಕಾರ್ಯನಿರ್ವಹಿಸುವ ನ್ಯಾಯಾಲಯಗಳು ಮಹಿಳಾ ಸಂಬಂಧಿತ ಅಪರಾಧಗಳನ್ನು ವಿಚಾರಣೆ ನಡೆಸಲು ಸ್ಥಾಪನೆಯಾಗಬೇಕು. ಅಲ್ಲದೇ ಈ ನಿಟ್ಟಿನಲ್ಲಿ ಕೆಲವು ಸ್ಪಷ್ಟೀಕರಣಗಳ ಅಗತ್ಯವಿದೆ. ಇತ್ತೀಚೆಗೆ ಬಂದ ಸುಗ್ರೀವಾಜ್ಞೆ ಹೇಳುತ್ತದೆ; ಆರೋಪಿಯಾದವನು ಹಿಂಸಾಚಾರಕ್ಕೀಡಾದ ಮಹಿಳೆಗೆ ಹತ್ತು ಲಕ್ಷ ರೂ ಪರಿಹಾರ ನೀಡಬೇಕು. ಅಂದರೆ ಹಿಂಸಾಚಾರಕ್ಕೀಡಾದ, ಆ್ಯಸಿಡ್ ದಾಳಿಗೀಡಾದ ಮಹಿಳೆ ನ್ಯಾಯಾಲಯದ ತೀರ್ಪು ಬರುವವರೆಗೆ ಪರಿಹಾರಕ್ಕಾಗಿ ವರ್ಷಗಟ್ಟಲೇ ಕಾಯಬೇಕು. ಹಾಗಾದರೆ ಅಲ್ಲಿಯ ತನಕ ಮಹಿಳೆ ಚಿಕಿತ್ಸೆಯ ಖರ್ಚನ್ನು ನಿಭಾಯಿಸಲು ಹರಸಾಹಸ ಪಡಬೇಕು. ಇದಾವ ನ್ಯಾಯ? ಸರ್ಕಾರ ಅಥವಾ ನ್ಯಾಯಾಂಗ ವ್ಯವಸ್ಥೆ ಈ ಬಗ್ಗೆ ಚಿಂತಿಸಿ 'ನಿರ್ಭಯ ನಿಧಿ' ಇಂತಹ ಅಮಾಯಕರ ನೆರವಿಗೂ ಬರುವಂತೆ ಮಾಡಬೇಕು ಎಂಬುದು ನಮ್ಮ ಕಾಳಜಿ.

ನಮ್ಮೆಲ್ಲರ ಅಂತ:ಸಾಕ್ಷಿಯನ್ನು ಬೆಚ್ಚಿಬೀಳಿಸಿದ 'ನಿರ್ಭಯ' ತನ್ನ ಶರೀರ ಕಾಮಾಂಧರ ಕ್ರೌರ್ಯಕ್ಕೆ ನುಚ್ಚು ನೂರಾಗಿದ್ದರೂ ಅತ್ಯಂತ ಸ್ಥೈರ್ಯದಿಂದ ಜೀವವನ್ನು ಹಿಡಿಯಾಗಿಟ್ಟುಕೊಂಡು ಅಪರಾಧಿಗಳಿಗೆ ತಕ್ಕ ಶಿಕ್ಷೆಯಾಗಬೇಕು ಎಂಬ ಹೇಳಿಕೆ ನೀಡಿದಳು. ಆ ಹೆಣ್ಣುಮಗಳ ಸ್ಥೈರ್ಯ ಇಡೀ ಸಮಾಜವನ್ನೇ ಅದರಲ್ಲೂ ಯುವಜನರನ್ನು ಬಡಿದೆಬ್ಬಿಸಿತು. ಸರ್ಕಾರದ ಆಳೆತ್ತರದ ಗೋಡೆಗಳನ್ನು ದಾಟಿ ಪ್ರತಿಭಟನಾಕಾರರ ಕೂಗು ಕಾನೂನು ರೂಪಿಸುವವರ ಅಂತರಂಗವನ್ನು ಅಪ್ಪಳಿಸಿತು. ಈ ಅದ್ಭುತ ಸಾಧನೆಯನ್ನು ಭಾರತ ಮಾತ್ರವಲ್ಲ, ಇಡೀ ಜಗತ್ತು ವಿಸ್ಮಯದಿಂದ ಗಮನಿಸಿ ನಮನ ಸಲ್ಲಿಸಿತು. ಈಗ ಅಮೆರಿಕ ಈ ಬಾರಿಯ ಅಂತರ್‌ರಾಷ್ಟ್ರೀಯ ಮಹಿಳಾ ದಿನಾಚರಣೆಯಂದು 'ನಿರ್ಭಯ'ಳಿಗೆ ಪ್ರತಿಷ್ಠಿತ ಧೈರ್ಯವಂತ ಮಹಿಳಾ ಪ್ರಶಸ್ತಿಯನ್ನು ಮರಣೋತ್ತರ ಪ್ರದಾನ ಮಾಡಿದೆ. ಅಮೆರಿಕದ ಪ್ರಥಮ ಮಹಿಳೆ, ಅಧ್ಯಕ್ಷ ಬರಾಕ್ ಒಬಾಮರ ಪತ್ನಿ ಮಿಶಿಲಿ ಒಬಾಮಾ ಹಾಗೂ ಸರ್ಕಾರದ ಕಾರ್ಯದರ್ಶಿ ಜಾನ್‌ಕೆರ್ರಿ ಮಾರ್ಚ್ 8ರಂದು ಈ ಪ್ರಶಸ್ತಿಯನ್ನು ನೀಡಿದರು. ಪ್ರಶಸ್ತಿಯ ಒಕ್ಕಣೆ ನಿಜಕ್ಕೂ ಮನನಾರ್ಹ; 'ನಿರ್ಭಯಳ ವೈಯಕ್ತಿಕ ಛಲ, ಹೋರಾಟದ ಅಪರಿಮಿತ ಶಕ್ತಿ, ನ್ಯಾಯಕ್ಕಾಗಿ ಎತ್ತಿದ ದನಿ ಮಾರ್ದನಿಗೊಂಡವು. ಅಷ್ಟೇ ಅಲ್ಲ, ಅವಳ ಕುಟುಂಬದವರು ನೋವನ್ನು ಗರ್ಭೀಕರಿಸಿಕೊಂಡು ನ್ಯಾಯಕ್ಕಾಗಿ ತೋರಿದ ಅಪೂರ್ವ ಧೈರ್ಯ ಶ್ಲಾಘನೀಯ. ಇದು ಕೋಟ್ಯಾಂತರ ಭಾರತೀಯ ಮಹಿಳೆಯರು ಈ ತೆರನ ಘಟನೆಗಳಿಂದ ಕಳಂಕಿತರಾಗದೆ, ಅಪರಾಧಿಗಳ ಬಲಿಪಶುಗಳಾದೆ ಮಹಿಳೆಯರ ಮೇಲೆ ನಡೆಯುವ ನಿರಂತರ ಹಿಂಸೆಯನ್ನು ಮೂಲೋತ್ಪಾಟನ ಮಾಡುವತ್ತ ದನಿ ಎತ್ತುವಂತಾಗಿದೆ'. ಅಷ್ಟೇ ಅಲ್ಲದೆ ನಿರ್ಭಯಳ ನಿರ್ಭಯ ಹೇಳಿಕೆಗಳಿಂದ ಎಚ್ಚೆತ್ತ ಭಾರತ ಸರಕಾರ ಈ ನಿಟ್ಟಿನಲ್ಲಿ ಹೊರಡಿಸಿದ ಸುಗ್ರೀವಾಜ್ಞೆ ಹಾಗೂ ಸುಧಾರಣಾ ಕ್ರಮಗಳನ್ನು 'ಐತಿಹಾಸಿಕ' ಎಂದು ಅಮೆರಿಕ ಸರಕಾರ ಗುರುತಿಸಿದೆ. ಅಂತರ್‌ರಾಷ್ಟ್ರೀಯ ಮಹಿಳಾ ದಿನದಂದು ಅಮೆರಿಕ ಸರಕಾರ ನಿರ್ಭಯಳಂತೆ ಇತಿಹಾಸ ನಿರ್ಮಿಸಿದ ಹತ್ತು ಮಹಿಳೆಯರನ್ನು ಜಗತ್ತಿನಾದ್ಯಂತ ಗುರುತಿಸಿ ಸನ್ಮಾನಿಸಿರುವುದು ನಿಜಕ್ಕೂ ಅರ್ಥಪೂರ್ಣ.

ದೆಹಲಿಯ ಇಂದಿರಾಗಾಂಧಿ ರಾಷ್ಟ್ರೀಯ ಕಲಾಕೇಂದ್ರದಲ್ಲಿ ಇದೀಗ ಒಂದು ಅಪೂರ್ವ ವಿಚಾರಗೋಷ್ಠಿ ನಡೆಯಿತು. ಕಾಶ್ಮೀರದ 14ನೇ ಶತಮಾನದ 'ವಾಕ್' ಪರಂಪರೆಯ ಗಪದ್ಯಗಳನ್ನು ಸೃಷ್ಟಿಸಿದ ಸಂತ ಕವಯತ್ರಿ ಲಲ್ಲೇಶ್ವರಿ ಹಾಗೂ 12ನೇ ಶತಮಾನದ ಕನ್ನಡದ ಶರಣರು 'ವಚನ' ಪರಂಪರೆಯಲ್ಲಿ ಸೃಷ್ಟಿಸಿದ ಅಪೂರ್ವ ಜ್ಞಾನಸಂಪತ್ತುಗಳ ತುಲನಾತ್ಮಕ ಅಧ್ಯಯನ ಈ ಗೋಷ್ಠಿಯ ಗುರಿಯಾಗಿತ್ತು. ತಮ್ಮ ಅಪಾರ ವಿದ್ವತ್ತು ಹಾಗೂ ಆಧುನಿಕ ಕಂಪ್ಯೂಟರ್ ಜ್ಞಾನಗಳಿಂದ ಹೆಸರಾಗಿರುವ ಡಾ.ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು ವಚನಗಳ ಆಂತರ್ಯವನ್ನು ತೆರದಿಟ್ಟರೆ ವಿದ್ವಾಂಸರಾದ ಶ್ರೀಮತಿ ವಸುಂಧರ ಫಿಲಿಯೋಜ ಹಾಗೂ ಮಂಜುನಾಥ ಭಟ್ ವಚನಗಳಿಂದ ಪ್ರಾದುರ್ಭಾವಗೊಂಡ ಸಾಮಾಜಿಕ ಅರಿವನ್ನು ತತ್ಪರಿಣಾಮವಾದ ಕ್ರಾಂತಿಯನ್ನು ವಿವೇಚಿಸಿ, ವಿಶ್ಲೇಷಿಸಿದರು. ಕಾಶ್ಮೀರದ ವಿದ್ವಾಂಸರು 'ವಾಕ್' ಪರಂಪರೆಯ ಮಹತ್ವ ಹಾಗೂ ಸಂದೇಶಗಳನ್ನು ಪ್ರಸ್ತುತಪಡಿಸಿದರು. ಭಾರತವನ್ನು ಭೌಗೋಲಿಕವಾಗಿ ಗುರುತಿಸುವವರು 'ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ' ಅನ್ನುತ್ತಾರೆ. ಶರಣರು ಹಾಗೂ ಲಲ್ಲೇಶ್ವರಿಗಳ ವಾಕ್ ಹಾಗೂ ವಚನಗಳ ಸಾಮ್ಯತೆ ಸಾಂಸ್ಕೃತಿಕ ಭಾರತವನ್ನು 'ಕಾಶ್ಮೀರದಿಂದ ಕರ್ನಾಟಕದವರೆಗೆ' ಎಂದು ಹೊಸ ಭಾಷ್ಯವನ್ನು ಬರೆಯುವಂತೆ ಪ್ರೇರೇಪಿಸಿದೆ. ಹನ್ನೆರಡನೇ ಶತಮಾನದಲ್ಲಿಯೇ ಇಂದಿಗೂ ನವನವೀನ ಅನ್ನಿಸಬಲ್ಲಂತ ಅಪೂರ್ವ ಜನಪರ ವಚನಗಳನ್ನು ಸೃಷ್ಟಿಸಿದ ಶರಣರ ನಾಡು ನಮ್ಮದು ಎಂಬುದು ಹೆಮ್ಮೆಯ ಸಂಗತಿ. ಈ ತೆರನ ಗೋಷ್ಠಿಗಳು ರಾಷ್ಟ್ರೀಯ, ಅಂತರ್‌ರಾಷ್ಟ್ರೀಯ ಮಟ್ಟಗಳಲ್ಲಿ ಇನ್ನಷ್ಟು ಅರ್ಥಪೂರ್ಣವಾಗಿ ನಡೆಯಲಿ, ತನ್ಮೂಲಕ ಕನ್ನಡ ನಾಡು, ನುಡಿಯ ಸಂಸ್ಕೃತಿ ವಿಶ್ವದ ಗಮನ ಸೆಳೆಯಲಿ ಎಂಬುದು ನಮ್ಮ ಹಾರೈಕೆ ಹಾಗೂ ಬಯಕೆ.

ಎಲ್ಲರಿಗೂ ಮಹಿಳಾ ದಿನಾಚರಣೆಯ ಹಾಗೂ ಬಣ್ಣಗಳ ಹಬ್ಬ ಹೋಳಿಯ ಶುಭಾಶಯಗಳು.

❑ ಉಷಾ ಭರತಾದ್ರಿ

# ತಾಂತ್ರಿಕತೆ, ಬದಲಾವಣೆ ಹಾಗೂ ಸಂವೇದನಾಶೀಲತೆ

ತಾಂತ್ರಿಕ ಬೆಳವಣಿಗೆಗಳಿಂದಾಗಿ ತ್ವರಿತವಾಗಿ ಬದಲಾಗುತ್ತಿರುವ ಈ ದಿನಗಳಿಗೆ ಹೇಗೆ ಹೊಂದಿಕೊಳ್ಳುವುದು ಎಂಬುದೇ ದೊಡ್ಡ ಸಮಸ್ಯೆಯಾಗಿದೆ. ಟೆಕ್ನಾಲಜಿ ಅಥವಾ ತಾಂತ್ರಿಕ ವ್ಯವಸ್ಥೆ ನಮ್ಮ ಬದುಕನ್ನು ಹಲವಾರು ರೀತಿಗಳಲ್ಲಿ ಸುಗಮಗೊಳಿಸಿದೆ ಎಂಬುದರ ಬಗ್ಗೆ ಎರಡು ಮಾತಿಲ್ಲ. ಆದರೆ ಈ ಹೊಸ ಹಾಗೂ ಫಳಫಳಿಸುವ ಟೆಕ್ನಾಲಜಿ ನಮ್ಮ ಸರಳ ಬದುಕನ್ನು ತಾಂತ್ರಿಕತೆಯ ಗುಲಾಮರನ್ನಾಗಿ ಮಾಡಿದೆ ಎಂಬುದರ ಬಗ್ಗೆಯೂ ನಾವು ಗಂಭೀರವಾಗಿ ಯೋಚಿಸಬೇಕಿದೆ.

ಕೆಲವು ವರ್ಷಗಳ ಹಿಂದೆ ಹತ್ತಾರು ದಿನಗಳಲ್ಲಿ ಆಗಬೇಕಿದ್ದ ಕೆಲಸ ಈಗ ಒಂದೇ ದಿನದಲ್ಲಿ, ಬಹುಶಃ ಒಂದೇ ಕ್ಷಣದಲ್ಲಿ, ಆಗಿ ಹೋಗುವ ಸಾಧ್ಯತೆಗಳನ್ನು ಟೆಕ್ನಾಲಜಿ ಸೃಷ್ಟಿಸಿದೆ. ನಮ್ಮ ಬದುಕಿನ ವೇಗ ದಿನೇದಿನೇ ಹೆಚ್ಚುತ್ತಿದೆ. ಈ ವೇಗದ ಬದುಕಿನಲ್ಲಿ ಯಾರು ಸಮರ್ಥವಾಗಿ ತೊಡಗಿಸಿಕೊಳ್ಳಲು ವಿಫಲರಾಗುತ್ತಾರೊ ಅಂತವರು ಹಿಂದೆ ಬೀಳುವ ಭಯದಲ್ಲಿರುತ್ತಾರೆ. ತೀವ್ರ ಗತಿಯಲ್ಲಿ ಬದಲಾಗುತ್ತಿರುವ ಟೆಕ್ನಾಲಜಿ ಹೊಸ ಬಗೆಯ ಕಾರ್ಯವಿಧಾನಗಳನ್ನು ಸೃಷ್ಟಿಸುವುದರ ಜೊತೆಗೆ ಇದ್ದ ಹಲವರ ಕೆಲಸಗಳನ್ನು ಕಸಿದುಕೊಳ್ಳುವುದರತ್ತ ನಡೆದಿದೆ.

ಸುಮಾರು ಎರಡು ದಶಕಗಳ ಹಿಂದೆ ನಾವೆಲ್ಲ ಮೊಳೆಗಳಿಂದ ಟಫ್ ಟಫ್ ಸದ್ದು ಮಾಡುವ ವಿವಿಧ ಬಗೆಯ ಟೈಪ್‌ರೈಟರ್‌ಗಳನ್ನು ಕಂಡಿದ್ದೇವೆ. ಗೋದ್ರೆಜ್, ರೆಮಿಂಗಟನ್ ಹಾಗೂ ಇತರ ಕೆಲ ಕಂಪನಿಗಳು ಈ ಬಗೆಯ ಟೈಪ್‌ರೈಟರ್‌ಗಳಿಗೆ ಹೆಸರುವಾಸಿಯಾಗಿದ್ದವು. ಕೋರ್ಟು ಹಾಗೂ ಸರಕಾರಿ ಕಛೇರಿಗಳಲ್ಲಿ ಇವುಗಳ ಸದ್ದಿಲ್ಲದಿದ್ದರೆ ಕೆಲಸವೇ ನಡೆಯುತ್ತಿಲ್ಲ ಎಂಬಂತಾಗಿತ್ತು.

ದೆಹಲಿ ಕರ್ನಾಟಕ ಸಂಘದಲ್ಲೂ ಈ ಬಗೆಯ ಕನ್ನಡ ಹಾಗೂ ಇಂಗ್ಲಿಷ್‌ನ ಬೆರಳಚ್ಚು ಯಂತ್ರಗಳು ಇದ್ದ ನೆನಪು. ನಿಧಾನವಾಗಿ ಕಂಪ್ಯೂಟರ್ ನಮ್ಮ ಬದುಕಿನ ಜಾಲಗಳನ್ನು ಅಕ್ರಮಿಸಿಕೊಂಡ ಮೇಲೆ ಈ ಬೆರಳಚ್ಚು ಯಂತ್ರಗಳು ಮರೆಯಾಗಿ ಹೋಗಿವೆ. ನಾಲ್ಕಾರು ವರ್ಷಗಳ ಹಿಂದೆ ಯಾವುದೊ ಅಫಿಡವಿಟ್ ಮಾಡಿಸಲು ಪಾಟಿಯಾಲಾ ಹೌಸ್ ಕೋರ್ಟ್ ಕಡೆ ಹೋದಾಗ ಕೆಲವರು ಇನ್ನೂ ಈ ಬಗೆಯ ಬೆರಳಚ್ಚು ಯಂತ್ರಗಳನ್ನೇ ಉಪಯೋಗಿಸುತ್ತಿದ್ದನ್ನು ಕಂಡು ಆಶ್ಚರ್ಯವಾಗಿತ್ತು. ಅಷ್ಟು ಸುಲಭವಾಗಿ ಈ ಜನ ಬಗ್ಗುವವರಲ್ಲ. ಇನ್ನೂ ಅಲ್ಲಿ ಈ ಬೆರಳಚ್ಚು ಯಂತ್ರಗಳು ಚಾಲ್ತಿಯಲ್ಲಿದ್ದರೆ ಆಶ್ಚರ್ಯವಿಲ್ಲ..

ನಂತರದಲ್ಲಿ ಬಂದ ಇಮೇಲ್...ಮೊಬೈಲ್ ಹಾಗೂ ಇನ್ನಿತರ ತಾಂತ್ರಿಕ ಆವಿಶ್ಕಾರಗಳು ನಮ್ಮ ಬದುಕನ್ನೇ ಬದಲಿಸಿ ಬಿಟ್ಟಿವೆ. ಹತ್ತಾರು ವರ್ಷಗಳಿಂದ ಮನೆಗೆ ಹಾಗೂ ಗೆಳೆಯರಿಗೆ ಪತ್ರ ಬರೆಯುವ ಅಭ್ಯಾಸವೇ ತಪ್ಪಿ ಹೋಗಿದೆ. ಎಲ್ಲ ಮಾತುಕತೆ ಮೊಬೈಲ್‌ನಲ್ಲೆ ಮುಗಿದು ಹೋಗುತ್ತದೆ.

ಈಗಂತೂ ಸ್ಕೈಪ್ ಹಾಗು ಇನ್ನಿತರ ನೂತನ ಆವಿಷ್ಕಾರಗಳು ಬಂದಿರುವುದರಿಂದ ಈ ಪತ್ರ ಬರೆಯುವ ನವಿರಾದ ಸಂವೇದನೆಯೇ ಮುಗಿದು ಹೋಗಿದೆ. ಹೀಗೆ ಆದರೆ ಇನ್ನು ಕೆಲ ವರ್ಷಗಳಲ್ಲಿ ಅಂಚೆಕಛೇರಿಗಳನ್ನೇ ಮುಚ್ಚಬೇಕಾಗಬಹುದು. ಅದಕ್ಕಾಗಿ ಇತ್ತೀಚಿನ ದಿನಗಳಲ್ಲಿ ಅಂಚೆಕಛೇರಿಗಳು ಸಹ ತಮ್ಮ ಕೆಲಸದ ಬಗೆಗಳನ್ನು ಹಲವಾರು ವೈವಿದ್ಯ ರೀತಿಗಳಲ್ಲಿ ಬದಲಾಯಿಸಿಕೊಳ್ಳುತ್ತಿರುವುದನ್ನು ನಾವೆಲ್ಲ ಗಮನಿಸಬೇಕು.

ನಮಗಿಂತ ಬೇರೆ ದೇಶಗಳು ಈ ತಾಂತ್ರಿಕ ಪರಿಣಿತಿಯಲ್ಲಿ ಮುಂದಿವೆಯೆಂದು ನಾವು ಅಂದುಕೊಳ್ಳಬಹುದು. ನಮ್ಮಲ್ಲಿಗಿಂತ ಆ ದೇಶಗಳಲ್ಲಿ ಈ ತಾಂತ್ರಿಕತೆ, ಅಚ್ಚುಕಟ್ಟುತನ ಸ್ವಲ್ಪ ಹೆಚ್ಚು ಮತ್ತು ಸಾರ್ವತ್ರಿಕ ಎಂದೆನ್ನಬಹುದು. ನಮ್ಮಲ್ಲೂ ಅಧುನಿಕ ತಾಂತ್ರಿಕತೆಗೆ ಕೊರತೆಯೇನಿಲ್ಲ. ಈ ಕುರಿತಾಗಿ ದೇಶ–ದೇಶಗಳ ನಡುವೆ ಇದ್ದ ತಾಂತ್ರಿಕ ಪರಿಣಿತಿಯ ಅಂತರ ಕಡಿಮೆಯಾಗುತ್ತಿದೆ. ನಮ್ಮಲ್ಲೂ ಈಗ ಅತ್ಯಂತ ಅಧುನಿಕ ತಂತ್ರಜ್ಞಾನಗಳಿವೆ. ಅದರ ಬಳಕೆಯೂ ನಿಧಾನವಾಗಿ ವಿಸ್ತಾರವಾಗುತ್ತಿದೆ. ಅದು ನಮ್ಮ ಹಳ್ಳಿಗಳನ್ನು ತಲುಪಲು ಇನ್ನೂ ಸಾಕಷ್ಟು ಸಮಯ ಬೇಕಾಗುತ್ತದೆ. ಚೈನಾ ಹಾಗೂ ಇತರ ದೇಶಗಳಲ್ಲೂ ಈ ಬಗೆಯ ಸಮಸ್ಯೆಯಿದೆ.

ಈ ತಾಂತ್ರಿಕತೆಯ ಬಗ್ಗೆ ಮಾತನಾಡುವಾಗ ನಾವು ಜಾಗತೀಕರಣದ ಕುರಿತೂ ಮಾತನಾಡಬೇಕು. ಬೇರೆ ದೇಶಗಳಲ್ಲಿರುವ ಎಲ್ಲ ಬಗೆಯ ತಾಂತ್ರಿಕ ಹಾಗೂ ಅತಾಂತ್ರಿಕ ಆಕರ್ಷಣೆಗಳು ನಮಗೆ ಬೇಕೆಂಬ ಹಂಬಲ. ಅದೇ ಈಗ ಸಮಸ್ಯೆಯಾಗಿ ಪರಿಣಮಿಸಿದೆ. ಒಂದು ಬಗೆಯಲ್ಲಿ ಅದು ಮಾನಸಿಕ ಸಮಸ್ಯೆಯೆಂದರೆ ತಪ್ಪಿಲ್ಲ. ಅದಕ್ಕಾಗಿ ಹಪಹಪಿಸುವ ಮನಸ್ಸು.

ನಾಲ್ಕು ದಿನ ನಮ್ಮ ಕೈಯಲ್ಲಿ ಮೊಬೈಲ್ ಇಲ್ಲದಿದ್ದರೆ ನಮಗೆ ಕಸಿವಿಸಿ. ವಿಮಾನ ಇಳಿದು ಇನ್ನೂ ರನ್ ವೇ ನಲ್ಲಿ ಓಡುತ್ತಿರುವಾಗಲೇ ನಮಗೆ ಮೊಬೈಲ್‌ನ್ನು ತೆರೆಯುವ ಕಾತುರ. ಯಾರೊಂದಿಗೊ ಮಾತುಕತೆ... ಏನಾದರೂ ಚಟುವಟಿಕೆಯಲ್ಲಿ ತೊಡಗಿಕೊಳ್ಳುವ ಹುನ್ನಾರ. ನಮಗೇ ಅರಿವಿಲ್ಲದೆ ನಾವೆಲ್ಲ ಈ ತಂತ್ರಜ್ಞಾನದ ಗುಲಾಮರಾಗಿ ಹೋಗಿದ್ದೇವೆ. ಅದು ನಮ್ಮ ಸುತ್ತಮುತ್ತ ಇದ್ದುಕೊಂಡು ಬೇಕಾದಾಗ ನಮ್ಮನ್ನು ನೇವರಿಸದೆ ಹೋದರೆ ನಾವು ಏಕಾಂಗಿಗಳಾಗಿ ಬಿಡುತ್ತೇವೆ.

ಈ ಹೊಸ ಅವಿಷ್ಕಾರಗಳು ಹಾಗೂ ತಂತ್ರಜ್ಞಾನಗಳು ನಮ್ಮನ್ನು ಸದಾ ಅವರ ಗುಲಾಮರನ್ನಾಗಿಸಲು ಎಲ್ಲ ಬಗೆಯ ಹುನ್ನಾರಗಳನ್ನು ಹೂಡುತ್ತವೆ. ಜಾಗತೀಕರಣದ ಈ ಸಂದರ್ಭದಲ್ಲಿ ಹೊರಬರುತ್ತಿರುವ ನೂರಾರು ಜಾಹೀರಾತುಗಳು ಈ ಬಗೆಯ ಗುಲಾಮಗಿರಿಯನ್ನು ನವಿರಾಗಿ ಪಡಿಮೂಡಿಸುತ್ತವೆ. ಹೊಸ ಮಾರ್ಕೆಟ್‌ಗಳು, ಹೊಸ ಖರೀದಿದಾರರು ಈ ಬಗೆಯ ಜಾಗತೀಕರಣದ ಕಬಂಧ ಬಾಹುಗಳಿಗೆ ನಮ್ಮನ್ನು ಸಿಲುಕಿಸುತ್ತಿದ್ದಾರೆ. ಆದರೆ, ಇವೆಲ್ಲ ನಮಗೆ ಅಗತ್ಯವಿದೆಯೇ ಎಂಬ ಪ್ರಶ್ನೆಯೇ ದೊಡ್ಡದಾಗಿದೆ. ನಮಗೆ ಅಗತ್ಯವಿಲ್ಲದ ವಿಚಾರಗಳನ್ನು ಮತ್ತು ಸಾಮಾನುಗಳನ್ನು ಅತ್ಯಂತ ಜರೂರಾಗಿ ನಮಗೆ ಬೇಕೆಂದು ಅನಿಸುವ ಹಾಗೆ ಮಾಡುವ ಚಾಕಚಕ್ಯತೆಯನ್ನು ಈ ಜಾಗತೀಕರಣದ ಸನ್ನಿವೇಶಗಳು ಸೃಷ್ಟಿಸುತ್ತಿವೆ. ಈ ಕಾರಣದಿಂದಾಗಿ ಇರುವ ನಮ್ಮ ಎಲ್ಲ ಆಶಯಗಳನ್ನು ತೊರೆದು ಇಲ್ಲದಿರುವ ಯಾವುದೊ ಕನಸಿನ ಬೆಂಬತ್ತಿ ನಾವು ಹೊರಟಿದ್ದೇವೆ.

ಇದಾವುದೂ ಆಗದಿದ್ದರೆ ನಾವು ಕಾಲದ ಇತಿಮಿತಿಯಲ್ಲಿ ಬದಲಾಗುತ್ತ ನಡೆಯಬೇಕು. ನಾವು ಹಾಗೂ ನಾವು ಕಟ್ಟಿ ಬೆಳೆಸಿದ ಸಂಬಂಧಗಳು, ಸಂಸ್ಥೆಗಳು ಇದಕ್ಕೆ ಹೊರತಾಗಿಲ್ಲ. ನಾವು ಸಂವೇದನಾಶೀಲರಾಗಿ ಈ ಬಗೆಯ ಬೆಳವಣಿಗೆಗೆ ಸ್ಪಂದಿಸುವ ಅಗತ್ಯವಿದೆ.

ದೆಹಲಿ ಕರ್ನಾಟಕ ಸಂಘವನ್ನೇ ಉದಾಹರಣೆಯಾಗಿ ತೆಗೆದುಕೊಂಡರೆ ಕಳೆದ ಎರಡು–ಮೂರು ದಶಕಗಳಲ್ಲಿ ಅದರ ಕಟ್ಟಡ ಹಾಗೂ ಸದಸ್ಯರ ವಿನ್ಯಾಸದಲ್ಲಿ ತುಂಬಾ ಬದಲಾವಣೆಗಳಾಗಿವೆ. ಈ ಬದಲಾವಣೆಗೆ ಪಕ್ಕಾಗಿ ನಾವು ಅದರ ಸಂವಿಧಾನವನ್ನು ವಿವರವಾಗಿ ಶೋಧಿಸಿ ಬದಲಾಯಿಸಬೇಕಾಗಿದೆ.

ಇದಕ್ಕಾಗಿ ನಾಲ್ಕಾರು ವರ್ಷಗಳಿಂದ ಸಂವಿಧಾನ ತಿದ್ದುಪಡಿ ಸಮಿತಿ ಕೆಲಸ ಮಾಡಿ ಈಗ ತನ್ನ ವರದಿಯನ್ನು ನೀಡಿದೆ. ಈ ವರದಿಯನ್ನು ತ್ವರಿತವಾಗಿ ಕಾರ್ಯರೂಪಕ್ಕೆ ತರಬೇಕಾದ ಅಗತ್ಯವಿದೆ. ಈ ತಿದ್ದುಪಡಿ ಆಗದಿದ್ದರೆ ದೆಹಲಿ ಕರ್ನಾಟಕ ಸಂಘ ತನ್ನ ಉದ್ದೇಶಿತ ಕಾರ್ಯಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದು ಅಸಾಧ್ಯವಾಗುವ ಎಲ್ಲ ಲಕ್ಷಣಗಳು ಇವೆ.

ಸಂವಿಧಾನ ತಿದ್ದುಪಡಿಯೆಂದರೆ ನಾಲ್ಕಾರು ದಿನಗಳಲ್ಲಿ ಆಗುವ ಕೆಲಸವಲ್ಲ. ಸಂವಿಧಾನ ತಿದ್ದುಪಡಿಯ ಕಾನೂನಿನ ಕಟ್ಟಲೆಗಳ ಅನ್ವಯ ಈ ಬದಲಾವಣೆಗಳನ್ನು ಮಾಡಬೇಕಾಗಿದೆ. ಹತ್ತಾರು, ನೂರಾರು... ದೆಹಲಿ ಕನ್ನಡಿಗರನ್ನು ಈ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ನಾವು ಮುಂದಾಗಬೇಕಿದೆ.


ಸಂವಿಧಾನದ ಪ್ರಕಾರ ಮುಂಬರುವ ದಿನಗಳಲ್ಲಿ ನಾವು ಚುನಾವಣಾ ಪ್ರಕ್ರಿಯೆಗೂ ಚಾಲನೆ ನೀಡಬೇಕಾದ ಅಗತ್ಯವಿದೆ. ಈ ಕುರಿತಾಗಿ ಸಂಘದ ಕಾರ್ಯಕಾರಿ ಸಮಿತಿ ಕಾರ್ಯಪ್ರವರ್ತವಾಗಿದೆ. ಈ ಎಲ್ಲ ಕಾನೂನಿನ ಚಟುವಟಿಕೆಗಳನ್ನು ಸಂಘದ ಸಂವಿಧಾನದ ಅಡಿಯಲ್ಲೇ ಮಾಡಲಾಗುವುದೆಂದು ತಿಳಿಸಬಯಸುತ್ತೇನೆ. ಯಾವ ಕಾರಣಕ್ಕೂ ಸಂಘದ ಸಂವಿಧಾನವನ್ನು ಉಪೇಕ್ಷಿಸಿ ಮುನ್ನಡೆಯುವ ಪ್ರಶ್ನೆಯೇ ಇಲ್ಲ.

❑ **ಡಾ. ವೆಂಕಟಾಚಲ ಹೆಗಡೆ**

ಸಂಘದ ಆರ್ಥಿಕ ವರ್ಷ ಸಂಪೂರ್ಣವಾಗಿ ಮುಗಿದಿದೆ. ಹಾಗೂ ಈ ಸಮಿತಿಯು ಅಧಿಕಾರಕ್ಕೆ ಬಂದು ಎರಡು ವರ್ಷಗಳು ಸಂಪೂರ್ಣವಾಗಿ ಮುಗಿದಿದೆ. ಸಂಘದಲ್ಲಿ ಆದಷ್ಟು ಮಟ್ಟಿಗೆ ತೃಪ್ತಿಕರ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದಿವೆ. ಜೊತೆಗೆ ಇನ್ನು ಈ ಬಾರಿಯ ಆಟೋಟ ಸ್ಪರ್ಧೆಗಳು ಹಾಗೂ ವಾರ್ಷಿಕ ದಿನಾಚರಣೆ ನಡೆಯಬೇಕಾಗಿದೆ. ಸರಕಾರದಿಂದ ಬಂದ ಅನುದಾನದಿಂದ ನಡೆಯಬೇಕಾಗಿದ್ದ ಎಲ್ಲಾ ಕೆಲಸಗಳು ಮುಗಿದಿವೆ. ಮುಖ್ಯಮಂತ್ರಿಗಳನ್ನು ಸಂಘದ ಪದಾಧಿಕಾರಿಗಳು ಭೇಟಿ ಮಾಡಿದ್ದು ಉದ್ಘಾಟನೆಯ ದಿನಾಂಕವನ್ನು ನೀಡಲು ಒಪ್ಪಿಗೆ ನೀಡಿದ್ದಾರೆ. ಹಾಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳು ಸಂಘಕ್ಕೆ ಭೇಟಿ ನೀಡಿ ಅನುದಾನದಿಂದ ನಡೆದ ಕೆಲಸಗಳನ್ನು ವೀಕ್ಷಿಸಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಈ ಬಾರಿಯ ಮಹಿಳಾ ದಿನಾಚರಣೆಯನ್ನು ಮಾರ್ಚ್ 24ರಂದು ಆಯೋಜಿಸಲಾಗಿದೆ. 23ರಂದು ಯಕ್ಷಗಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಎಲ್ಲ ಕಾರ್ಯಕ್ರಮಗಳ ನಡುವೆ ಸಂಘದ ಸಂವಿಧಾನ ತಿದ್ದುಪಡಿಯ ಕೆಲಸ ಸಹ ನಡೆದಿದೆ. ಸರ್ವಸದಸ್ಯರ ಸಭೆಯಲ್ಲಿ ಒಪ್ಪಿಗೆ ದೊರೆತಲ್ಲಿ ಸಂವಿಧಾನ ತಿದ್ದುಪಡಿ ಆಗಲಿದೆ. ನಮ್ಮ ದೆಹಲಿಯ ಕನ್ನಡ ಸಂಘ ಸಂಸ್ಥೆಗಳಲ್ಲಿ ಒಂದಾದ ತುಳುಸಿರಿಯ ಕಾರ್ಯಕ್ರಮ ಇತ್ತೀಚೆಗೆ ಕನ್ನಡ ಶಾಲೆಯ ಆವರಣದಲ್ಲಿ ನಡೆದಿದ್ದು ಒಂದು ಅದ್ಭುತ ಕಾರ್ಯಕ್ರಮವಾಗಿದೆ. ಈ ಕಾರ್ಯಕ್ರಮದಲ್ಲಿ ದೆಹಲಿಯ ಸುಮಾರು 1200 ಕನ್ನಡಿಗರು ಭಾಗವಹಿಸಿದ್ದು ಕಾರ್ಯಕ್ರಮ ಯಶಸ್ವಿಯಾಗಿ ನಡೆದಿದೆ. ಕಾರ್ಯಕ್ರಮದ ಯಶಸ್ವಿಗೆ ಶ್ರಮಿಸಿದ ಎಲ್ಲ ಕನ್ನಡಿಗರಿಗೂ ಹೃದಯಪೂರ್ವಕ ಅಭಿನಂದನೆಗಳು. ಮುಖ್ಯವಾಗಿ ಕಾರ್ಯಕ್ರಮದ ನಿರ್ದೇಶಕರಾದ ಡಾ.ಪುರುಷೋತ್ತಮ ಬಿಳಿಮಲೆ ಹಾಗೂ ಸಂಚಾಲಕ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರಿಗೆ ಸಂಘದ ಪರವಾಗಿ ಅಭಿನಂದನೆಗಳು. ಮುಂದೆಯೂ ಕೂಡಾ ಇಂತಹ ಒಳ್ಳೆಯ ಕೆಲಸಗಳು ನಡೆಯಲಿ ಎಂದು ಆಶಿಸೋಣ.

❑ ಸಿ.ಎಂ.ನಾಗರಾಜ


ಕರ್ನಾಟಕ ಸರ್ಕಾರ
ವಾರ್ತಾ ಇಲಾಖೆ
ಕರ್ನಾಟಕ ವಾರ್ತಾ ಕೇಂದ್ರ, ನವದೆಹಲಿ
ಹಾಗೂ
ದೆಹಲಿ ಕರ್ನಾಟಕ ಸಂಘ, ನವದೆಹಲಿ
ಇವರ ಸಂಯುಕ್ತ ಆಶ್ರಯದಲ್ಲಿ
ಕನ್ನಡ ಚಲನಚಿತ್ರ ಪ್ರದರ್ಶನ
**ಸ್ಥಳ: ದೆಹಲಿ ಕರ್ನಾಟಕ ಸಂಘದ ಸಭಾಂಗಣ**
**ರಾವ್ ತುಲಾರಾಂ ಮಾರ್ಗ್, ಸೆಕ್ಟರ್-12, ಆರ್.ಕೆ. ಪುರಂ, ನವದೆಹಲಿ- 110022**





ಪೂರ್ಣಚಂದ್ರ ತೇಜಸ್ವಿಯವರ
**ತಬರನ ಕಥೆ**
ನಿರ್ದೇಶನ : ಗಿರೀಶ್ ಕಾಸರವಳ್ಳಿ
**16.03.2013ರ ಶನಿವಾರ**
**ಸಂಜೆ: 4 ಗಂಟೆಗೆ**

**ಕರ್ನಾಟಕ ಸರಕಾರದ ಲಾಂಛನ ಕುರಿತ ಸಾಕ್ಷ್ಯ ಚಿತ್ರ**
**ನಿರ್ಮಾಣ : ವಾರ್ತಾ ಇಲಾಖೆ**

ನೀವೂ ಬನ್ನಿ, ನಿಮ್ಮ ಕುಟುಂಬದವರು ಮತ್ತು ಸ್ನೇಹಿತರನ್ನೂ ಕರೆತನ್ನಿ!
ಉಪ ನಿರ್ದೇಶಕರು, ಕರ್ನಾಟಕ ವಾರ್ತಾ ಕೇಂದ್ರ
ಕರ್ನಾಟಕ ಭವನ-2, ನಂ. 6. ಸರ್ದಾರ್ ಪಟೇಲ್ ಮಾರ್ಗ್, ಚಾಣಕ್ಯಪುರಿ, ನವದೆಹಲಿ- 110021.
ದೂರವಾಣಿ: 011-24102263, ಮೊಬೈಲ್: +91 99686 52139


## ಕೇಂದ್ರ ಸಾಹಿತ್ಯ ಅಕಾಡೆಮಿಯ ಉಪಾಧ್ಯಕ್ಷರಾಗಿ ಡಾ. ಚಂದ್ರಶೇಖರ ಕಂಬಾರ


ಡಾ. ಚಂದ್ರಶೇಖರ ಕಂಬಾರ


ಡಾ. ಎಂ.ಎಂ.ಕಲಬುರ್ಗಿ



ಡಾ. ಅರವಿಂದ ಮಾಲಗತ್ತಿ


ಡಾ. ನರಹಳ್ಳಿ ಬಾಲಸುಬ್ರಮಣ್ಯಂ

ಕೇಂದ್ರ ಸಾಹಿತ್ಯ ಅಕಾಡೆಮಿಯ ನೂತನ ಉಪಾಧ್ಯಕ್ಷರಾಗಿ ಜ್ಞಾನಪೀಠ ಪುರಸ್ಕೃತ ಖ್ಯಾತ ಸಾಹಿತಿ, ನಾಟಕಕಾರ ಡಾ. ಚಂದ್ರಶೇಖರ ಕಂಬಾರ ಅವರು ಆಯ್ಕೆಗೊಂಡಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಮಿತಿಯ ಸದಸ್ಯರಾಗಿ ಖ್ಯಾತ ವಿದ್ವಾಂಸ, ಸಂಶೋಧಕ ಡಾ. ಎಂ.ಎಂ.ಕಲಬುರ್ಗಿ, ಖ್ಯಾತ ದಲಿತ ಕವಿ ಡಾ. ಅರವಿಂದ ಮಾಲಗತ್ತಿ ಹಾಗೂ ಕನ್ನಡದ ಖ್ಯಾತ ವಿಮರ್ಶಕ ಡಾ. ನರಹಳ್ಳಿ ಬಾಲಸುಬ್ರಮಣ್ಯಂ ನೇಮಕಗೊಂಡಿದ್ದಾರೆ. ಈ ಪೈಕಿ ಡಾ. ನರಹಳ್ಳಿ ಬಾಲಸುಬ್ರಮಣ್ಯಂ ಅವರು ಕನ್ನಡ ಸಮಿತಿಯ ಸಂಚಲಕರಾಗಿ ಆಯ್ಕೆಗೊಂಡಿದ್ದಾರೆ. ಕನ್ನಡ ಸಾಹಿತ್ಯ ಲೋಕಕ್ಕೆ ಇವರಿಂದ ಉತ್ತಮ ಸೇವೆ ದೊರೆಯಲೆಂದು ಶುಭ ಹಾರೈಸುತ್ತೇವೆ. ಇವರೆಲ್ಲರಿಗೂ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾರ್ದಿಕ ಅಭಿನಂದನೆಗಳು.

# ಡಿ.ವಿ.ಗುಂಡಪ್ಪ : ಹೃದಯವಂತ ಧೀಮಂತ

**ಇದೇ ಮಾರ್ಚ್ 17ಕ್ಕೆ ಮಹಾನ್ ಚೇತನ ಡಿ.ವಿ.ಜಿ. ಅವರ 126ನೇ ಜನ್ಮ ದಿನಾಚರಣೆ. ಈ ಸಂದರ್ಭದಲ್ಲಿ ಅವರನ್ನು ಪ್ರೀತಿಪೂರ್ವಕವಾಗಿ ಸ್ಮರಿಸುತ್ತಾ ಅವರ ಕುರಿತಾದ ಲೇಖನ....**



"ಡಿ.ವಿ.ಗುಂಡಪ್ಪನವರನ್ನು ಆಧುನಿಕ ಕನ್ನಡ ಸಾಹಿತ್ಯದ ನವರತ್ನಗಳಲ್ಲಿ ಒಬ್ಬರೆಂದು ಯು. ಆರ್. ಅನಂತಮೂರ್ತಿಗಳು ಗುರುತಿಸಿರುವುದು ಸರಿಯಾಗಿಯೇ ಇದೆ. ಅವರು ಪ್ರತಿಪಾದಿಸಿದ ವಿಚಾರ, ನಡೆದು ಹೋದ ದಾರಿ–ಎರಡೂ ಧೀಮಂತ ಮತ್ತು ಉದಾರ. ಕನ್ನಡ ಗದ್ಯಕ್ಕೊಂದು ಅನನ್ಯ ಸೊಗಸು ತಂದ ಡಿವಿಜಿ ಇದ್ದಿದ್ದರೆ, ಈ ಮಾರ್ಚ್ 17ಕ್ಕೆ 126 ವರ್ಷವಾಗುತ್ತಿತ್ತು".

'ಆರಿಸಿದ ಯಾವುದೇ ಗುಂಪಿನ ಉಲ್ಲಾಸವಂತ ಸದಸ್ಯ' ಎಂದು ಮಾಸ್ತಿಯವರು ಡಿವಿಜಿ ಬಗೆಗೆ ಹೇಳಿದ್ದಾರೆ. ಡಿವಿಜಿ ವ್ಯಕ್ತಿತ್ವವೇ ಅಂಥದು. ಎಲ್ಲರೊಡನೆ ಬೆರೆಯುವಂಥದು. ಭಾರತ ಸ್ವಾತಂತ್ರ್ಯಕ್ಕಾಗಿ ಅವರು ಹೋರಾಡಿದರು. ಅಭಿಪ್ರಾಯ ಸ್ವಾತಂತ್ರ್ಯದ ಅಗತ್ಯವನ್ನು ಎಲ್ಲ ಕಾಲದಲ್ಲೂ ಎತ್ತಿ ಹಿಡಿದು ಬೆಂಗಳೂರಿನ ಇಂಗ್ಲಿಷ್ ರೆಸಿಡೆಂಟರ ಕೋಪಕ್ಕೆ ಗುರಿಯಾಗಿದ್ದರು. ಪೋಲೆಪಲ್ಲಿ ಚಿನ್ನಪ್ಪಶೆಟ್ಟಿ, ಸೊಣ್ಣೇಗೌಡ, ಕಾಷ್ಠಿ ಹೈದರ್ಸಾಬ್ ಅವರೊಂದಿಗೆ ಬೆರೆತಂತೆಯೇ ಮಿರ್ಜಾ ಇಸ್ಮಾಯಿಲ್, ಸರ್. ಎಂವಿ, ರೈಟ್ ಆನರಬಲ್ ಶ್ರೀನಿವಾಸ ಶಾಸ್ತ್ರಿ ಮೊದಲಾದವರೊಂದಿಗೆ ಚರ್ಚೆ ನಡೆಸುವ ಸಂವಾದ ಕುಶಲಿಗಳಾಗಿದ್ದರು. ತಾವು ತರುತ್ತಿದ್ದ ಒಂದು ಪತ್ರಿಕೆಗೆ 'ಸಾರ್ವಜನಿಕ' ಎಂದೇ ಹೆಸರಿಟ್ಟಿದ್ದರು. ಡಿವಿಜಿ ಉಲ್ಲಾಸವಂತರಾದ ಶಿಷ್ಯರನ್ನೂ ಗೆಳೆಯರನ್ನೂ ಚಿಂತಕರನ್ನೂ ತಯಾರು ಮಾಡಿದ್ದರು.

'ಯಾವ ವಾಕ್ಯ ಸರಣಿಯಿಂದ ಕೇಳಿದವನ ಅಥವಾ ಓದಿದವನ ಹೃದಯಕ್ಕೆ ಒಂದು ಹಿತಾನುಭಾವವೂ, ಅವನ ಬುದ್ಧಿಗೆ ಒಂದು ಬೆಳಕೂ, ಅವನ ಜೀವನಕ್ಕೆ ಒಂದು ಸತ್ ಪ್ರಚೋದನೆಯೂ ಉಂಟಾಗುತ್ತದೆಯೋ ಅದು ಸಾಹಿತ್ಯ' ಎನ್ನುವುದು ಡಿವಿಜಿಯವರೇ ಹೇಳಿರುವ ಮಾತು. ಅವರ ಸಾಹಿತ್ಯ ಲೋಕಚಿಂತನೆಯಿಂದ ಕೂಡಿತ್ತು ಎನ್ನುವುದಕ್ಕೆ ಈ ಮಾತೇ ಸಾಕು. 'ಜ್ಞಾನಿನಾಚರಿತುಂ ಶಕ್ಯಂ ಸಮ್ಯಗ್ ರಾಜ್ಯಾದಿ ಲೌಕಿಕಂ' ಎಂಬ ವಿದ್ಯಾರಣ್ಯರ ಮಾತೇ ಅವರ ಘೋಷವಾಕ್ಯ. ಎಲ್ಲ ಜನರೂ ಧೀಮಂತರಾಗಿ ಬೆಳೆಯಬೇಕು
ಎಂಬುದು ಅವರ ಆಕಾಂಕ್ಷೆಯಾಗಿತ್ತು.

ಡಿವಿಜಿ ಬುದ್ಧಿವಂತರ ಜಾತಿ ಮತ್ತು ಹೃದಯವಂತರ ಜಾತಿಗಳನ್ನು ಗುರುತಿಸಿದ್ದರು. ಆದರೆ, ಇದರಲ್ಲಿ ಹೃದಯವಂತರೇ ನಿರ್ಣಾಯಕ ಎಂದು ಅವರು ತೀರ್ಮಾನಿಸಿದ್ದರು. ಏಕೆಂದರೆ ಅವರ ದೃಷ್ಟಿಯಲ್ಲಿ ವಿದ್ವತ್ತೆಂದರೆ ಪುಸ್ತಕ ಪಾಂಡಿತ್ಯ, ಸಂಸ್ಕೃತಿ ಎಂದರೆ ಜೀವನದ ಅಂತರಂಗದ ಸೊಗಸು. ಮನುಷ್ಯನಿಗೆ ಸಮಾಜದೊಂದಿಗೆ ಸಂಪರ್ಕ ವಿರಬೇಕೆನ್ನುವುದು ಡಿವಿಜಿ ಪ್ರತಿಪಾದಿಸಿದ ಮಹಾತತ್ವ. ಹಾಗಿಲ್ಲದಿದ್ದರೆ ಬದುಕು ವ್ಯರ್ಥವೆಂದು ಅವರು ಬಗೆದಿದ್ದರು. ಇದಕ್ಕೆ ಅವರ 'ಮಂಕುತಿಮ್ಮನ ಕಗ್ಗ'ದ ತೊಲಗೆಲವೊ ಮನೆಯಿಂದ ಮನವು ಬರಡಾದಂದು/ ಹೊಸಲ ತೊಳೆಯಲು ತೋಳ್ಗೆ ಬಲ ಕುಗ್ಗಿದಂದು /ತೊಲಗು ಜಗದಿಂ ದೂರ ಇಳೆಗಾಗದಿರು ಭಾರ /ತೊಲಗಿ ನೀಂ ಮರೆಯಾಗು ಮಂಕುತಿಮ್ಮ ಎನ್ನುವ ಒಂದು ಪದ್ಯವನ್ನು ನೋಡಬಹುದು.\

ನಾವು ಹುಡುಗರಾಗಿದ್ದಾಗ ನಾಡಗೀತೆ ಎಂಬ ಕೀರ್ತಿಗೆ ಪಾತ್ರವಾಗಿದ್ದೆಂದರೆ ಡಿವಿಜಿಯವರ ಪದ್ಯ 'ನಿವೇದನೆ'. ಅದರಲ್ಲಿ ಎಲೆಯ ಹಿಂದೆ ಇದ್ದು ಸುವಾಸನೆಯನ್ನು ಜಗತ್ತಿಗೇ ನೀಡುವ ವನಸುಮದ ಅದ್ಭುತ ಚಿತ್ರಣವಿದೆ. ಸಮಾಜದಲ್ಲಿ ಸುಸಂಸ್ಕೃತ ವ್ಯಕ್ತಿ ಕುಸುಮವು ಅರಳಬೇಕೆಂಬ ಧ್ವನಿ ಇದರಲ್ಲಿದೆ. ವ್ಯಕ್ತಿ ಅರಳಿಕೊಳ್ಳಬೇಕಾದ ಬಗೆಯನ್ನು ಡಿವಿಜಿ ತರಂಗವಲಯ ಎಂಬ ವಿಶೇಷ ಶಬ್ದ ರೂಪದಲ್ಲಿ ತಿಳಿಸಿದ್ದಾರೆ. ತಾನು, ತಾನು ಭಾಗವಾಗಿರುವ ಜಗತ್ತು ಮತ್ತು ಹೆಸರಿಲ್ಲದ ಇನ್ನೊಂದು (=ದೈವ)– ಇವು ಮೂರೂ ಆ ತರಂಗವಲಯದ ಭಾಗಗಳು ಎಂದವರು ಡಿವಿಜಿ. ಎನ್ನುತ್ತಾರೆ.

ಬದುಕಿನಲ್ಲಿ ಎರಡು ರಸಗಳ ಪಾತ್ರ ಮಹತ್ವದ್ದು. ಒಂದು, ತನು ಪೋಷಣೆಗೆ ಅನ್ನರಸ; ಇನ್ನೊಂದು, ಮನಸಿನ ಪೋಷಣೆಗೆ ಅನುರಾಗ ರಸ. ಇದು ಡಿವಿಜಿ ಪ್ರತಿಪಾದಿಸಿದ ಪ್ರೀತಿಯ ಅದ್ಭುತ ಸಾಧ್ಯತೆ. ನಾವು ನಾವು ಎಂದುಕೊಂಡಾಗ ಮನೆಯ ಆವರಣ ಮೂಡುತ್ತದೆ. ಈ ಗೃಹದ ಸೌರಭದಿಂದ ಮಮತೆ ಚಿಗುರುತ್ತದೆ. ಮಮತೆಯ ತೃಪ್ತಿಗಾಗಿ ನಮ್ಮ ನಂಟರು ಇಷ್ಟರು ಎಲ್ಲ ಗೃಹದ ಕಕ್ಷೆಗೆ ಸೇರುತ್ತಾರೆ. ಇದು ಕುಟುಂಬದ ಚೌಕಟ್ಟಿನದಾದರೆ ನಮ್ಮ ಸಮಸ್ತ ಜನತೆಯ ಪೋಷಣೆಗಾಗಿ ರಾಷ್ಟ್ರ ಎಂಬ ಶಬ್ದವನ್ನು ಕಲ್ಪಿಸಿಕೊಂಡಿದ್ದೇವೆ. ಇವರೆಲ್ಲರ ಕಲ್ಯಾಣ ಚಿಂತನೆ ಮೂಡುವುದನ್ನು ಡಿವಿಜಿ ಹೃದಯ ವಿಜ್ಞಾನ ಎನ್ನುತ್ತಾರೆ.

ಬೆಳೆಯುತ್ತಿರುವವರೆಲ್ಲ ನಮ್ಮ ಬಂಧುಗಳು, ಮಕ್ಕಳು ಎಂದು ಭಾವಿಸಿದಾಗ ಅಸೂಯೆಯ ನಿರ್ಮೂಲನ ಸಾಧ್ಯ. ಅನುರಾಗದ ಚಿಗುರು ಬೆಳೆಯುವುದು ಇಂಥ ಸಮಾಹಿತ ಚಿತ್ತಗಳಲ್ಲಿ. ಇಂಥ ಚಿತ್ತ ವಿಸ್ತಾರಕ್ಕೆ ಅಗತ್ಯವಾದ ಕಸಿ ಮಾಡಿಕೊಳ್ಳಲು ಡಿವಿಜಿ ಸೃಷ್ಟಿಸಿದ ಪರಿಕಲ್ಪನೆಯೆಂದರೆ ಆತ್ಮನೇಮ. ಅದೊಂದು ಆಪ್ತ ಶಬ್ದ. ಹೀಗೆ ಮನುಷ್ಯನ ನಿಜವಾದ ವಿಕಾಸಕ್ಕೆ ಅವರು ಪ್ರತಿಪಾದಿಸಿದ ಆತ್ಮನೇಮಗಳಿವು– (1) ಸತತಂ ಸಾರ್ವಜನೀನ ದೃಷ್ಟಿ (2) ನಯದಿಂದೋರೋರ್ವನುಂ ವರ್ತಿಸಲ್ (3) ವಿತತಂ ರಾಷ್ಟ್ರಿಕರೊಳ್ ಸಮಂತಿರೆ ಕುಟುಂಬೌಪಮ್ಯದೈಕ್ಯಾದರಂ (4) ಮತಿಯೊಳ್ ಸೂಕ್ಷ್ಮ ವಿಚಾರ ಜಾಗರತೆ/ನೀತಿ ಶ್ರದ್ಧೆಗಳ್ ಕೂಡಿರಲ್.... ಹಿತಮುಂ ಶಾಶ್ವತಮುಂ ಸ್ವತಂತ್ರ ಫಲಮುಂ– ಈ ನಾಲ್ಕು ಆತ್ಮನೇಮಂಗಳಿಂ.

ಡಿವಿಜಿಯವರ ಚಿಂತನೆಯ ಕ್ರಮ ಆರೋಗ್ಯಶೀಲವಾದದ್ದು. ಅವರು ಯಾವುದನ್ನೂ ಗೌಣವೆಂದು ತಿಳಿದವರಲ್ಲ. ಎಲ್ಲವೂ ಅಗತ್ಯ ಹದದಲ್ಲಿ ಬೆರೆತು ಆತ್ಮದ ಬೆಳವಣಿಗೆಗಾಗಿ ದುಡಿಯಬೇಕು ಎಂಬ ಆರೋಗ್ಯಕರ ದೃಷ್ಟಿ ಹೊಂದಿರುವುದನ್ನು ಇಲ್ಲಿ ಕಾಣಬಹುದಾಗಿದೆ.

ಭವಭೂತಿಯ ಉತ್ತರ ರಾಮ ಚರಿತೆಯ ಒಂದು ಪದ್ಯ ಡಿವಿಜಿಗೆ ತುಂಬಾ ಪ್ರಿಯವಾಗಿತ್ತು. ರಾಮನು ರಾವಣನನ್ನು ಕೊಂದು ಸೀತೆಯನ್ನು ಹಿಂದಕ್ಕೆ ಕರೆತರುವಾಗಿನ ದೃಶ್ಯವಿದು. ಪುಷ್ಪಕ ವಿಮಾನದಲ್ಲಿ ಕುಳಿತು ರಾಮನು ಪಂಚವಟಿಯ ಪ್ರದೇಶವನ್ನು ಸೀತೆಗೆ ನೆನಪಿಸಿಕೊಡುತ್ತಾ ಇದ್ದ ಸಂದರ್ಭದ ಪದ್ಯ ಇದು. ಪುರಾಯತ್ರ ಸ್ರೋತಃ ಪುಲಿನ ಮಧುನಾ... ನಿವೇಶಶ್ಶೈಲಾನಾಂ ತದಿದಮಿತಿ ಬುದ್ಧಿರ್ದೃಢಯತಿ ಎಂಬ ಈ ಪದ್ಯ ಪ್ರಸಿದ್ಧವಾಗಿದೆ. 'ಸೀತೆ, ನೋಡು ಹಿಂದೆ ನದಿ ಹರಿಯುತ್ತಿತ್ತಲ್ಲ ಅಲ್ಲಿ ಈಗ ಬರೀ ಮರಳು ಹರಡಿಕೊಂಡಿದೆ. ಕಾಡಿದ್ದ ಭಾಗವೆಲ್ಲ ಈಗ ವೃಕ್ಷಪುಷ್ಟಿಯನ್ನು ಕಳೆದುಕೊಂಡಿದೆ. ಕಾಲಘಟ್ಟದಲ್ಲಿ ಹೀಗೆ ಎಲ್ಲವೂ ಬದಲಾಗುತ್ತದೆ. ಆದರೆ ಇಲ್ಲಿ ಬೆಟ್ಟವಿದೆಯಲ್ಲ, ಅದು ಮಾತ್ರ ಯಾವುದೇ ಬದಲಾವಣೆ ಹೊಂದದೆ ಎಂದಿನಂತೆಯೇ ಇದೆ' ಎನ್ನುವುದು ಇದರ ಅರ್ಥ.

ಡಿವಿಜಿ ಕೂಡ ಅಂಥ ಬದಲಾಗದ ಬೆಟ್ಟ. ಮೌಲ್ಯವರ್ಧಕ ಧಾತುಗಳಿಂದ ಕಂಗೊಳಿಸುವ ಪರ್ವತ ಅವರು. ಕುವೆಂಪು ಅವರು ಡಿವಿಜಿಯವರ 'ಮಂಕುತಿಮ್ಮನ ಕಗ್ಗ'ಕ್ಕೆ ಹಸ್ತಕ್ಕೆ ಬರೆ ನಕ್ಕೆ, ಓದುತ್ತ ಓದುತ್ತ/ಮಸ್ತಕಕ್ಕಿಟ್ಟು ಗಂಭೀರನಾದೆ/ ವಿಸ್ತರದ ದರ್ಶನಕೆ ತುತ್ತ ತುದಿಯಲಿ ನಿನ್ನ /ಪುಸ್ತಕಕೆ ಕೈಮುಗಿದೆ ಮಂಕುತಿಮ್ಮ ಎಂದು ಕೈ ಮುಗಿದ ರೀತಿ ಅನುಕರಣೀಯ. ಮಂಕುತಿಮ್ಮನ ಕಗ್ಗ, ಮರುಳ ಮುನಿಯನ ಕಗ್ಗಗಳೆರಡೂ ಡಿವಿಜಿಯವರ ಲೋಕ ಚಿಂತನೆಯ ಫಲಗಳು.

ನಿಮ್ಮ ಸೃಜನಶೀಲತೆಯ ಹಿಂದಿನ ಒತ್ತಡ ಯಾವುದು? ಎಂದು ಖ್ಯಾತ ಇಂಗ್ಲಿಷ್ ಲೇಖಕ ಡಿ.ಎಚ್. ಲಾರೆನ್ಸ್‌ನ್ನು ಪ್ರಶ್ನಿಸಿದಾಗ ಆತ One writes out of one's moral sense -for the race as it were ಎಂದನಂತೆ. ಅಂದರೆ ಬರಹಗಾರರಲ್ಲಿ ನೈತಿಕ ಪ್ರಜ್ಞೆ ಮತ್ತು ಸಮಾಜದ ಸೌಖ್ಯ ಚಿಂತನೆ ಅಗತ್ಯ ಎಂದಂತಾಯಿತು. ಡಿವಿಜಿ ಬದುಕು ಈ ಎರಡು ತತ್ವಗಳ ಭಾಷ್ಯ. ಆದರೆ ಇದರ ಬಗೆಗೆ ಅವರು ಕೊಚ್ಚಿಕೊಳ್ಳುವ ಸ್ವಭಾವದವರಲ್ಲ. ಅವರು ಹೊಲಿ ನಿನ್ನ ತುಟಿಗಳನು ಎಂದು ಮೌನದ
ಹಿರಿಮೆಯನ್ನು ಎತ್ತಿ ಹಿಡಿದವರು. ಮೌನವು ಆತನ ಮಾತೃಭಾಷೆ ಎಂದ ಆಲಿವರ್ ಗೋಲ್ಡ್‌ಸ್ಮಿತ್ ಮತ್ತು That man's scilence is wonderful to listen ಎಂದ ಥಾಮಸ್ ಹಾರ್ಡಿಗಳ ಪಂಥವೇ ಡಿವಿಜಿಯವರದೂ ಆಗಿದೆ.

ಕವಿಯ ಚಿಂತನೆಗೆ ಮೆರಗು ಬರುವುದು ಅವನು ತನ್ನನ್ನು ಮೆರೆಸಿಕೊಳ್ಳುವುದನ್ನು ಬಿಟ್ಟು ಲೋಕಪ್ರತಿಭೆಯನ್ನು ಮೂಡಿಸಿದಾಗ, ಬದುಕಿನಲ್ಲಿ ನೀತಿ ಸೂತ್ರವನ್ನು ಅನುಸರಿಸಿದಾಗ. ಜನ ಏನೇ ಹೇಳಲಿ, ಹೊಗಳಿ ಹಾಡಲಿ, ಆಕ್ಷೇಪಿಸಲಿ ಈ ನೀತಿ ಸೂತ್ರಪಾಲನೆ ಮುಖ್ಯ ಎನ್ನುತ್ತಿದ್ದವರು ಡಿವಿಜಿ. ಅವರಿಗೆ ತುಂಬ ಪ್ರಿಯವಾಗಿದ್ದ ಭರ್ತೃಹರಿಯ ಪದ್ಯವೊಂದಿತ್ತು. ಅದನ್ನು ಸ್ವತಃ ಅವರೇ ನೀತಿ ಶಾಸ್ತ್ರಜ್ಞರು ಭೂಷಿಸಲಿ, ದೂಷಿಸಲಿ; ಸಂಪತ್ತು ಬರಲಿ, ಹೋಗಲಿ; ಮರಣವೀಗಲೇ ಆಗಲಿ, ಇನ್ನೆಂದೇ ಆಗಲಿ; ಧೀರರು ನ್ಯಾಯ ಮಾರ್ಗದಿಂದ ತಪ್ಪುವುದಿಲ್ಲ ಎಂದು ಗದ್ಯಾನುವಾದ ಮಾಡಿದ್ದರು. ಇದಕ್ಕೆ ತಕ್ಕಂತೆ ಬಾಳಿನಲ್ಲೂ ಕೃತಿಯಲ್ಲೂ ಇದ್ದವರು ಬೇರಾರೂ ಅಲ್ಲ, ಸ್ವತಃ ಡಿವಿಜಿಯವರೇ!

❑ ಅ.ರಾ.ಮಿತ್ರ

# ದೆಹಲಿ ಕರ್ನಾಟಕ ಸಂಘ

**ಶ್ರೀಮತಿ ವಿದ್ಯಾಕೋಳ್ಯೂರು ನೇತೃತ್ವದ**
ಮಂಗಳೂರಿನ 'ಯಕ್ಷ ಮಂಜೂಷ' ತಂಡ ಪ್ರಸ್ತುತಪಡಿಸುವ

## ಯಕ್ಷಗಾನ : ಸುಂದೋಪಸುಂದ ಕಾಳಗ

**23 ಮಾರ್ಚ್, ಶನಿವಾರ ಸಂಜೆ 5.00ಕ್ಕೆ**
**ಸಂಘದ ಸಭಾಂಗಣ**

ಭಾಗವತರು : ಶ್ರೀ ಗಿರೀಶ್ ರೈ ಕಕ್ಕೆ ಪದವು, ಚಂಡೆ : ಶ್ರೀ ದೇವಾನಂದ ಭಟ್ ಬೆಳುವಾಯಿ, ಮದ್ದಳೆ : ಶ್ರೀ ಚಂದ್ರಶೇಖರ

ಪಾತ್ರಧಾರಿಗಳು : ಸರ್ವಶ್ರೀ ಪದ್ಮನಾಭ, ಶಶಿಕಿರಣ, ಪವನ್‌ಕುಮಾರ್, ಸತೀಶ್, ರಮೇಶ್

ನಿರ್ದೇಶನ : ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರ ಪುರಸ್ಕೃತೆ ಶ್ರೀಮತಿ ವಿದ್ಯಾಕೋಳ್ಯೂರು

**–: ಎಲ್ಲರಿಗೂ ಆದರದ ಸ್ವಾಗತ :–**

**ಡಾ. ವೆಂಕಟಾಚಲ ಹೆಗಡೆ**
ಅಧ್ಯಕ್ಷರು

**ಸಿ. ಎಂ. ನಾಗರಾಜ**
ಪ್ರಧಾನ ಕಾರ್ಯದರ್ಶಿ

---

# ದೆಹಲಿ ಕರ್ನಾಟಕ ಸಂಘ

ಮತ್ತು

**ಮೈಸೂರು ಸಂಗೀತ ವಿದ್ಯಾಲಯ,**
ಡೊಂಬಿವಿಲಿ ಮುಂಬಯಿ
ಸಂಯುಕ್ತ ಆಶ್ರಯದಲ್ಲಿ

## ಡಿ.ವಿ.ಜಿಯವರ 126ನೇ ಜನ್ಮ ದಿನಾಚರಣೆ

**24 ಮಾರ್ಚ್, ಭಾನುವಾರ**
**ಮಧ್ಯಾಹ್ನ : 2.30ಕ್ಕೆ**
**ದೆಹಲಿ ಕರ್ನಾಟಕ ಸಂಘದ ಸೆಮಿನಾರ್ ಹಾಲ್**

**ಡಿ.ವಿ.ಜಿ.ಯವರ ಸಂಸ್ಮರಣೆ : ವಿಚಾರಗೋಷ್ಠಿ**

ಡಿ.ವಿ.ಜಿ.ಯವರ ಬದುಕು, ಬರಹ
**ಎಂ.ಬಿ. ನಟರಾಜ್**
ನ್ಯಾಷನಲ್ ಕಾಲೇಜ್ ಶಿವಮೊಗ್ಗ, ಕನ್ನಡ ವಿಭಾಗದ ಮುಖ್ಯಸ್ಥರು

ಡಿ.ವಿ.ಜಿಯವರ 'ಸಂಸ್ಕೃತಿ'ಯ ಪರಿಕಲ್ಪನೆ
**ಡಾ.ಟಿ.ಎಸ್.ಸತ್ಯನಾಥ್**
ನಿವೃತ್ತ ಪ್ರಾಧ್ಯಾಪಕರು, ದೆಹಲಿ ವಿಶ್ವವಿದ್ಯಾಲಯ

**ಡಿ.ವಿ.ಜಿ ಕೃತಿಗಳ ಗಾಯನ**
ಸಂಗೀತ ವಿದೂಷಿ, ಕರ್ನಾಟಕ ಕಲಾಶ್ರೀ ಉಮಾನಾಗಭೂಷಣ್, ಮುಂಬಯಿ

**–: ಎಲ್ಲರಿಗೂ ಆದರದ ಸ್ವಾಗತ :–**

**ಡಾ.ವೆಂಕಟಾಚಲ ಹೆಗಡೆ**
ಅಧ್ಯಕ್ಷರು

**ಸಿ.ಎಂ. ನಾಗರಾಜ**
ಪ್ರಧಾನ ಕಾರ್ಯದರ್ಶಿ

---

# ದೆಹಲಿ ಕರ್ನಾಟಕ ಸಂಘ

ಮತ್ತು

**ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್**
**ಮತ್ತು ದೆಹಲಿಯ ಸಮಸ್ತ ಮಹಿಳೆಯರ**
**ಸಹಯೋಗದೊಂದಿಗೆ**

## ಅಂತರ್‌ರಾಷ್ಟ್ರೀಯ ಮಹಿಳಾ ದಿನಾಚರಣೆ

**ಮಾರ್ಚ್ 24, ಭಾನುವಾರ**
**ಸಂಜೆ 4 ಗಂಟೆಗೆ**
**ಸಂಘದ ಸಭಾಂಗಣ**

**ದೆಹಲಿ ಮಹಿಳಾ ಕಲಾವಿದರಿಂದ ವೈವಿಧ್ಯಮಯ**
**ಸಾಂಸ್ಕೃತಿಕ ಕಾರ್ಯಕ್ರಮ**
ಹಾಗೂ
**ಆರಾಧನಾ ನೃತ್ಯ ಶಾಲೆ, ಬೆಂಗಳೂರು ಇವರಿಂದ**
**ನೃತ್ಯ ರೂಪಕ – "ಕೃಷ್ಣ ಕರ್ಣಾಮೃತ"**
**ನಿರ್ದೇಶನ : ಗುರು ವಿದ್ವಾನ್ ಶ್ರೀ ನಾಗಭೂಷಣನ್**

**ಬನ್ನಿ, ಮಹಿಳಾ ಶಕ್ತಿಯನ್ನು ಪ್ರೋತ್ಸಾಹಿಸಿ**

**ಡಾ.ವೆಂಕಟಾಚಲ ಹೆಗಡೆ**
ಅಧ್ಯಕ್ಷರು

**ಸಿ.ಎಂ.ನಾಗರಾಜ**
ಪ್ರಧಾನ ಕಾರ್ಯದರ್ಶಿ

*ಮಹಿಳಾ ದಿನಾಚರಣೆಯ ಅಂಗವಾಗಿ ಮಹಿಳಾ ಕಲಾವಿದರ ಕಲಾ ಕೃತಿ ಹಾಗೂ ಕರಕುಶಲ ವಸ್ತುಗಳ ಪ್ರದರ್ಶನವನ್ನು ಮಾರ್ಚ್ 23 ಮತ್ತು 24ರಂದು ಆಯೋಜಿಸಲಾಗಿದೆ. ಆಸಕ್ತ ಮಹಿಳೆಯರು ವಿವರಗಳೊಂದಿಗೆ ಸಂಪರ್ಕಿಸಿ. ದೆಹಲಿ ಕರ್ನಾಟಕ ಸಂಘ : ದೂರವಾಣಿ : 26109615, 65643615*

# ಕರ್ನಾಟಕ ಸಂಘದ ಅಂತರ್‌ಜಾಲ ತಾಣ




ಫೆಬ್ರವರಿ 22, ಶುಕ್ರವಾರದಂದು ದೆಹಲಿ ಕರ್ನಾಟಕ ಸಂಘದಲ್ಲಿ ಆಯೋಜಿಸಿದ್ದ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಎಚ್.ಎಸ್.ಶಿವಪ್ರಕಾಶ್ ಅವರ ಅಭಿನಂದನಾ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪೆಟ್ರೋಲಿಯಂ ಹಾಗೂ ನೈಸರ್ಗಿಕ ಅನಿಲ ಖಾತೆಯ ಸನ್ಮಾನ್ಯ ಸಚಿವ, ಶ್ರೀ ಎಂ..ವೀರಪ್ಪ ಮೊಯಿಲಿ ಅವರು ನವೀಕರಣಗೊಂಡ ದೆಹಲಿ ಕರ್ನಾಟಕ ಸಂಘದ ಅಂತರ್ ಜಾಲ ತಾಣವನ್ನು ಉದ್ಘಾಟಿಸಿ ಪುನರ್ ಚಾಲನೆಗೊಳಿಸಿದರು. ನೂತನವಾಗಿ ಚಾಲನೆಗೊಂಡ ಅಂತರ್ ಜಾಲತಾಣವನ್ನು 'ಹಾಯ್ ಬೆಂಗಳೂರ್' ದಿನಪತ್ರಿಕೆಯಲ್ಲಿ ಕೆಲಸ ಮಾಡುತ್ತಿರುವ ಕಲಾವಿದ, ವಿನ್ಯಾಸಗಾರ ಶ್ರೀ ವೀರೇಶ್ ಹೊಗೆಸೊಪ್ಪಿನವರ್ ಹಾಗೂ ಅವರ ಸ್ನೇಹಿತ ಭರತಕುಮಾರ್ ಅವರು ಅತ್ಯಂತ ಆಸಕ್ತಿವಹಿಸಿ ಪ್ರೀತಿಪೂರ್ವಕವಾಗಿ, ಅಂದವಾಗಿ ರೂಪಿಸಿಕೊಟ್ಟಿದ್ದಾರೆ. ಮೊದಲು ಕೆಲವರ್ಷ ದೆಹಲಿ ಕನ್ನಡಿಗನಾಗಿ 'ದ ಸಂಡೇ ಇಂಡಿಯನ್' ನಲ್ಲಿ ವೃತ್ತಿಪರರಾಗಿದ್ದ ವೀರೇಶ್ ತಾಯ್ನಾಡಿಗೆ ತೆರಳಿದರೂ ದೆಹಲಿಯ ಕನ್ನಡಿಗರೊಡಗಿನ ಸ್ನೇಹ–ಆಪ್ತತೆಯ ಬಾಂಧವ್ಯವನ್ನು, ದೆಹಲಿ ಕರ್ನಾಟಕ ಸಂಘದ ಮೇಲಿನ ಅಭಿಮಾನವನ್ನು ಇನ್ನೂ ಉಳಿಸಿಕೊಂಡಿದ್ದಾರೆ. ತಾವೇ ಮುಂದಾಗಿ ಸಂಘದ ಅಂತರ್ ಜಾಲತಾಣವನ್ನು ನವೀಕರಿಸುವ ಕನಸನ್ನು ಬಿತ್ತುತ್ತಲೇ ಜಾಲತಾಣವನ್ನು ಚಾಲನೆಗೊಳಿಸುವಂತೆ ಪ್ರೇರೇಪಿಸುತ್ತಿದರು. ಈಗಿನ ಮಾಹಿತಿ–ತಾಂತ್ರಿಕ ಯುಗದಲ್ಲಿ ರಾಜಧಾನಿಯಲ್ಲಿ ಕರ್ನಾಟಕದ ಸಾಂಸ್ಕೃತಿಕ ರಾಯಭಾರಿ ಕೇಂದ್ರವಾಗಿ ಹೆಗ್ಗಳಿಕೆಗೆ ಪಾತ್ರವಾದ ದೆಹಲಿ ಕರ್ನಾಟಕ ಸಂಘಕ್ಕೆ ತನ್ನದೇ ಆದ ಅಂತರ್ ಜಾಲತಾಣ ಇರಬೇಕಾದ ಅಗತ್ಯವಿದೆ. ದೆಹಲಿ ಕನ್ನಡಿಗರ ಆಗುಹೋಗುಗಳಷ್ಟೇ ಅಲ್ಲದೇ ಪ್ರಪಂಚದ ಯಾವ ಮೂಲೆಯಿಂದಲಾದರೂ ಕನ್ನಡಿಗನೊಬ್ಬ ಜಾಲತಾಣದಲ್ಲಿ ಹುಡುಕಿದರೆ ರಾಜಧಾನಿ ಕನ್ನಡಿಗರ ಆಗುಹೋಗುಗಳಲ್ಲದೇ ಇತರೆಲ್ಲ ಮಾಹಿತಿಯೂ ಲಭ್ಯವಾಗಬೇಕೆನ್ನುವುದು ಈ ಜಾಲತಾಣದ ಸದುದ್ದೇಶ. ಅದಕ್ಕಾಗಿ ದೆಹಲಿಯಲ್ಲಿ ವಾಸಿಸುವ ಪ್ರತಿಯೊಬ್ಬ ಕನ್ನಡಿಗ ತಮ್ಮ ಗುರುತಿನ ಕನ್ನಡಿಗ ವೈದ್ಯರುಗಳ, ನ್ಯಾಯವಾದಿಗಳ, ನ್ಯಾಯಮೂರ್ತಿಗಳ, ಇತರ ವಿಭಾಗದಲ್ಲಿನ ತಜ್ಞರು, ಕೇಂದ್ರ ಸರ್ಕಾರದ ವಿವಿಧ ಮಂತ್ರಾಲಯಗಳಲ್ಲಿ ಕೆಲಸ ಮಾಡುವ ಉನ್ನತ ಅಧಿಕಾರಿಗಳ ಮಾಹಿತಿ ಇತ್ಯಾದಿಯಾಗಿ ಸಂಘಕ್ಕೆ ಒದಗಿಸಿದರೆ ಪುಟ್ಟ 'ಮಾಹಿತಿ ಕೈಪಿಡಿ' ಯನ್ನು ತಯಾರಿಸಲು ನೆರವಾಗುತ್ತದೆ. ಈಗಾಗಲೇ ತಾಣದ 'MORE' ಗುಂಡಿಯಲ್ಲಿ ಇತರ ಸಂಘ ಸಂಸ್ಥೆಗಳ ಹೆಸರು, ಸಂಬಂಧಿತರ ಹೆಸರು,ವಿಳಾಸ, ಫೋನ್ ನಂಬರುಗಳನ್ನು ಒದಗಿಸಲು ಪ್ರಯತ್ನಿಸಿದ್ದೇವೆ.

ನೂತನ ಜಾಲತಾಣದಲ್ಲಿ ದೆಹಲಿ ಕರ್ನಾಟಕ ಸಂಘಕ್ಕೆ ಭದ್ರ ಬುನಾದಿ ಹಾಕಿ ಕಟ್ಟಿ ಬೆಳೆಸಿದ ಪ್ರಾತಃಸ್ಮರಣೀಯ ಕನ್ನಡಿಗರ ಕೊಡುಗೆಯನ್ನು ಪರಿಚಯಿಸುವ ಸುದೀರ್ಘ ಇತಿಹಾಸವಿದೆ. ಸಂಘದ ಆಡಳಿತವನ್ನು ದಕ್ಷವಾಗಿ ನಡೆಸಿದ 1999 ರಿಂದ 2013 ವರೆಗಿನ ಕಾರ್ಯಕಾರಿ ಮಂಡಳಿಯ ಪಟ್ಟಿ ಇದೆ. ಸಂಘದ ಮುಖವಾಣಿ 'ಅಭಿಮತ' ಪತ್ರಿಕೆಯ 2010 ದಿಂದ 2013 ವರೆಗಿನ ಎಲ್ಲ ಸಂಪುಟಗಳನ್ನು ಸಂಗ್ರಹಿಸಿ, ತಾಣದಲ್ಲಿಯೇ ಓದುಗರು ಪ್ರತಿಪುಟವನ್ನು ಬಿಡಿಸಿ ಓದುವಂತೆ ವಿನ್ಯಾಸಗೊಳಿಸಲಾಗಿದೆ. ಇದು ಅತ್ಯಂತ ಆಕರ್ಷಕವಾದ ಕಲಾತ್ಮಕತೆ. ಇ–ಅಭಿಮತ ಪತ್ರಿಕೆಯನ್ನು ಅಂತರ್ ಜಾಲದ ಸೌಕರ್ಯವುಳ್ಳವರು ಸದುಪಯೋಗಪಡಿಸಿಕೊಂಡರೆ ಪತ್ರಿಕೆಯ ಪ್ರಿಂಟಿಂಗು, ಅಂಚೆವೆಚ್ಚ ಮುಂತಾದುವಕ್ಕೆ ತಗಲುವ ಖರ್ಚುವೆಚ್ಚದಲ್ಲಿ ಗುಣಾತ್ಮಕವಾದ ಉಳಿತಾಯವನ್ನು ಮಾಡಬಹುದು. ಕಾಗದದ ದುರ್ಬಳಕೆಯಾಗುವುದನ್ನು ನಿಲ್ಲಿಸಬಹುದು. ದೆಹಲಿಯಿಂದ ಬೇರೆಡೆ ವರ್ಗವಾಗಿ ಹೋಗುವ ಕನ್ನಡಿಗರು ತಮ್ಮ ಮನೆ–ಮಾರು, ಸಾಮಾನು ಸರಕನ್ನು ತಮ್ಮವರಿಗೇ ಕೊಡು–ಕೊಳ್ಳಬಹುದಾದ ಅವಕಾಶವನ್ನು 'ಕ್ಲಾಸಿಫೈಡ್' ಸೌಲಭ್ಯದಲ್ಲಿ ಕೊಡಲಾಗಿದೆ. ತಮ್ಮ ಬದಲಾದ ವಿಳಾಸ, ತಮ್ಮ ಸಂಘ–ಸಂಸ್ಥೆಯ ಮುಂಬರುವ ಕಾರ್ಯಕ್ರಮ ಮಾಹಿತಿಯನ್ನೂ ದೆಹಲಿ ಕರ್ನಾಟಕ ಸಂಘದ ಜಾಲತಾಣದಲ್ಲಿ ದೆಹಲಿ ಕನ್ನಡಿಗರು ನಿಶುಲ್ಕವಾಗಿ ಪ್ರಕಟಿಸಬಹುದಾಗಿದೆ. ಅಂಥ ಮಾಹಿತಿಯೊಳಗೊಂಡ ಪುಟ್ಟ ಬರಹವನ್ನು ತಯಾರಿಸಿ ಸಂಘದ ಈಮೇಲ್ dksangha@gmail.com ಗೆ ಕಳಿಸಿದರಾಯಿತು.

ಸಂಘದ ಭವ್ಯ ಕಟಡ್ಡದಲ್ಲಿ ವ್ಯವಸ್ಥಿತವಾದ ಗ್ರಂಥಾಲಯದಲ್ಲಿ ಒಂದು ಲಕ್ಷಕ್ಕೂ ಮೀರಿ ಕನ್ನಡ ಪುಸ್ತಕಗಳಿವೆ. ಕೂತು ಓದುವ ಪ್ರಶಾಂತವಾದ ವಾತಾವರಣವಿದೆ. ಸಾಕಷ್ಟು ಪುಸ್ತಕಗಳ ರಾಶಿಯೇ ಇದೆ. ಅವುಗಳನ್ನು ಅನುಕ್ರಮವಾಗಿ ಜೋಡಿಸುವ ಕಾರ್ಯವಿನ್ನೂ ಆಗಬೇಕಿದೆ. ಸೆಮಿನಾರ್ ಹಾಲ್, ವಿಶಾಲವಾದ ಕಲಾಶಾಲೆ, ಸಭಾಂಗಣ, ಕಲಾವಿದರಿಗೆ ವಾಸದ ವ್ಯವಸ್ಥೆ ಕುರಿತ ಮಾಹಿತಿಯಿದೆ. ಫೋಟೋ ಗ್ಯಾಲರಿಯಲ್ಲಿ ಸಂಘದಲ್ಲಿ ನಡೆವ ಎಲ್ಲಾ ಕಾರ್ಯಕ್ರಮಗಳನ್ನು ಮೆಲುಕುಹಾಕುವ ಚಿತ್ರಗಳ ಉಗ್ರಾಣವೇ ಇದೆ. ದೆಹಲಿ ಕರ್ನಾಟಕ ಸಂಘವು ನಡೆಸುವ ವಿಚಾರ ಸಂಕಿರಣಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದ ನಂತರ ಜನ ಸ್ಮೃತಿಯಿಂದ ಮರೆಯಾಗಿಬಿಡುತ್ತವೆ. ಕಾರ್ಯಕ್ರಮಗಳ ವಿಡಿಯೋಗ್ರಾಫಿಯನ್ನು ಯೂಟ್ಯೂಬ್ ಗೆ ಅಳವಡಿಸಿದರೆ ಶಾಶ್ವತವಾಗಿ ಉಳಿದುಬಿಡುತ್ತವೆ. ಮುಂಬರುವ ದಿನಗಳಲ್ಲಿ ದೆಹಲಿ ಕರ್ನಾಟಕ ಸಂಘದ ಅಂತರ್ಜಾಲ ತಾಣದಲ್ಲಿಯೂ ಇಂಥ ವಿಡಿಯೋ ಆರ್ಕೈವ್ ಸೌಲಭ್ಯವನ್ನು ವಿಸ್ತರಿಸಿಕೊಂಡರೆ ಸಂಘದ ಇತಿಹಾಸದ ಪುಟದಲ್ಲಿ ಸೇರುವ ಪ್ರತಿಯೊಂದು ದಾಖಲೆಯೂ ಜಾಲತಾಣದಲ್ಲಿ ದಾಖಲೆಯಾಗುತ್ತದೆ.

ಈ ನವೀಕೃತ ಅಂತರ್ ಜಾಲ ತಾಣವನ್ನು ಕಟ್ಟುವ ಕೆಲಸದಲ್ಲಿ ನನ್ನ ನಿತ್ಯದ ಕಾಟವನ್ನು ಸಹಿಸಿಕೊಳುತ್ತಲೇ ಎಲ್ಲ ಮಾಹಿತಿ ಪುಟಗಳನ್ನು ಸಿದ್ಧಪಡಿಸುವಲ್ಲಿ ಅತ್ಯಂತ ಉತ್ಸಾಹದಿಂದ ನೆರವಾದ ಡಾ.ಪುರುಷೋತ್ತಮ ಬಿಳಿಮಲೆ, ಸಲಹೆಗಳನ್ನು ನೀಡಿ ಸಹಕರಿಸಿದ ಬಾಲಕೃಷ್ಣ ನಾಯಕ್, 'ಅಭಿಮತ' ಪುಟವನ್ನು ಬರೆದುಕೊಟ್ಟ ಚೆನ್ನು ಮಠದ ಅವರಿಗೆ, ಸಂಘದ ಅಧ್ಯಕ್ಷ ಡಾ.ವೆಂಕಟಾಚಲ ಹೆಗಡೆ, ಪದಾಧಿಕಾರಿಗಳಾದ, ಸಿ.ಎಂ ನಾಗರಾಜ, ಉಷಾ ಭರತಾದ್ರಿ, ರಾಮಮೂರ್ತಿ ಹಾಗೂ ಎಲ್ಲಾ ಕಾರ್ಯಕಾರಿ ಮಂಡಳಿಯ ಎಲ್ಲಾ ಸದಸ್ಯರ ಸಮ್ಮತಿ, ಅನುಮೋದನೆಗಳನ್ನು ಹೃತ್ಪೂರ್ವಕವಾಗಿ ನೆನೆಯುತ್ತೇನೆ. ಸಂಘದ ಅಂತರ್ ಜಾಲ ತಾಣ ನಿಮಗಾಗಿ, ನಮ್ಮೆಲ್ಲರಿಗಾಗಿ ಅನಾವರಣಗೊಂಡಿದೆ. ಅದನ್ನು ಇನ್ನಷ್ಟು ವಿವಿಧ ಮಾಹಿತಿಗಳಿಂದ ತುಂಬಿ ಚೆಂದಗೊಳೊಸುವುದು ಪ್ರತಿಯೊಬ್ಬ ದೆಹಲಿ ಕನ್ನಡಿಗರ ಹೊಣೆ ಮತ್ತು ಪ್ರೀತಿ. ಪ್ರೀತಿಯಿಂದ ಕೈಜೋಡಿಸಿ ಮುಂದುವರಿದಾಗಲೇ ಇಂಥ ಕೆಲಸಗಳು ಸರಾಗವಾಗಿ ನಡೆಯುವವು. ನಿಮ್ಮ ದೆಹಲಿ ಕರ್ನಾಟಕದ ಸಂಘದ ತಾಣದ ಕುರಿತ ನಿಮ್ಮ ಅನಿಸಿಕೆ, ಕೊಡಬೇಕಾದ ಮಾಹಿತಿಗಳಿಗೆ ದಯವಿಟ್ಟು ಸಂಪರ್ಕಿಸಿ :

Email : dksangha@gmail.com

ಅಂತರ್ ಜಾಲದ ಕೊಂಡಿಗೆ www.delhikarnatakasangha.com ಕ್ಲಿಕ್ಕಿಸಿ

❑ ರೇಣುಕಾ ನಿಡಗುಂದಿ

# ಸಂವಿಧಾನ ತಿದ್ದುಪಡಿ : ಎತ್ತ ಗಮನ

ದೆಹಲಿ ಕರ್ನಾಟಕ ಸಂಘದ ವಾಚನಾಲಯದಲ್ಲಿ ಪಾಟೀಲ ಪುಟ್ಟಪ್ಪನವರು "ನಿಜಜೀವನದಲ್ಲಿ ಹಾಸ್ಯ" ಎಂಬ ಕುರಿತಾದ ಉಪನ್ಯಾಸ ನೀಡುತ್ತಿದ್ದರು. ಕುರ್ಚಿಯಲ್ಲಿ ಕುಳಿತಿದ್ದ ನನ್ನ ಬೆನ್ನಿಗೆ ತುಂಡಾದ ಕುರ್ಚಿಯ ತಗಡಿನ ಮೂಲೆ ಚುಚ್ಚಿತು. ನೋವಾಯಿತು. ಅದೇನದು? ಕುರ್ಚಿಯ ಹಿಂಬದಿ ನೋಡಿದೆ. ಕಬ್ಬಿಣದ ಕುರ್ಚಿಯ ಹಿಂದೆ 'ಕೃಷ್ಣಮೂರ್ತಿಯವರ ಕೊಡುಗೆ' ಎಂದು ಬರೆದಿದ್ದು ಕಣ್ಣಿಗೆ ಬಿತ್ತು. ನೋವಲ್ಲೂ ನಕ್ಕೆ. 60ರ ದಶಕದಲ್ಲಿ ಸಂಘಕ್ಕೆ ದಾನ ಮಾಡಿದ ಹಳೇ ಕಬ್ಬಿಣದ ಕುರ್ಚಿಯದು. ಎಂಟಾಣೆಯ ನಾಣ್ಯವೊಂದನ್ನು ಪರ್ಸ್‌ನಿಂದ ತೆಗೆದು, ಮುರಿದಿದ್ದ ಕುರ್ಚಿಯ ತಗಡಿನ ಮೂಲೆಯನ್ನು ಮಡಚಿ ಮತ್ತೆ ಕುಳಿತು ಭಾಷಣ ಕೇಳತೊಡಗಿದೆ. ಬೆನ್ನಿಗೆ ತಗಡು ಚುಚ್ಚಿದ್ದ ಉರಿ ಮಾಸುತ್ತಾ ಹೋದಂತೆ, ದೆಹಲಿ ಕರ್ನಾಟಕ ಸಂಘದ ಬಗೆಗಿನ ಒಂದು ಚಿಂತನೆ ಮನದಾಳದಲ್ಲಿ ಪ್ರಾರಂಭವಾಗಿತ್ತು. ಕೊಡುಗೈ ದಾನಿಗಳ ಸರಳ ಸಂಘದ ಕುರಿತಾದ ಕಲ್ಪನೆ! ಹಳೆಯ ಕಟ್ಟಡ ನೋಡಿದ, ಅಲ್ಲಿನ ವಾಚನಾಲಯದ ಸಾಹಿತ್ಯಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಕನ್ನಡಿಗರಿಗೆ ಈಗಲೂ ನೆನಪಿರಬಹುದು. ಚಿಪ್ಪೆದ್ದ ಗೋಡೆಗಳನ್ನು ಮುಚ್ಚಿಡುವ ಹಳೆಯ ಕಪಾಟುಗಳು, ತಂಪಾದ ಕತ್ತಲ ಕೋಣೆ, ದಾನಿಗಳು ನೀಡಿದ ಹಳೆಯ ಕಬ್ಬಿಣದ ಕುರ್ಚಿಗಳು, ಹಳೆಯ ಮುರುಕು ಮೇಜು, ತೀರಾ ಸರಳವಾದ ವ್ಯವಸ್ಥೆ. ಆದರೆ, ನಡೆಯುತ್ತಿದ್ದ ಉನ್ನತ ಗುಣಮಟ್ಟದ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಇಂದು ಸಿಗುವುದು ಅಪರೂಪವಾಗಿದೆ.

ಕಾರ್ಯಕಾರೀ ಸಭೆಗಳಲ್ಲಿ ಚಹ ತರಿಸಿ, ಪದಾಧಿಕಾರಿಗಳು, ಸದಸ್ಯರು ತಮ್ಮ ಕಿಸೆಯಿಂದ ಹಣ ಪಾವತಿಸಿದ ದಿನಗಳು ಹಿರಿಯರಾದ ಸುಮಿತ್ರರಾವ್, ಅಹಲ್ಯಾ ಚಿಂತಾಮಣಿ, ಎಚ್.ಎಸ್.ಕುಲಕರ್ಣಿ, ರಾಮಮೋಹನ ರಾವ್, ಎಸ್.ಜಿ.ಹೆಗಡೆಯಂತಹ ಹಿರಿಯರ ನೆನಪಿನ ಆಳದಲ್ಲಿ ಇಂದೂ ಇರಬಹುದು. ಸಾಮಾಜಿಕ ಚೌಕಟ್ಟು, ಸರಳತೆ, ಸಜ್ಜನಿಕೆ, ಸಂಸ್ಕಾರ ಮತ್ತು ಸೌಹಾರ್ದತೆಯೊಂದಿಗೆ ಪ್ರಾಮಾಣಿಕತೆಯಿಂದ ಸಂಘ ಕಟ್ಟುವ ಆ ದಿನಗಳು ನಮ್ಮ ಕಾಲದ ಸುವರ್ಣ ದಿನಗಳು.

ಅಂತೂ ಸಂಘದ ಹಳೆಯ ಕಟ್ಟಡದ ಸಾಲ ಮುಗಿಯುವ ಹೊತ್ತಿಗೆ ಸಂಘದಲ್ಲಿ ಹೊಡೆದಾಟಗಳು, ಘರ್ಷಣೆಗಳು, ಮೊಕದ್ದಮೆಗಳು ಪ್ರಾರಂಭವಾದಾಗ, ದಿವಂಗತ ಕೆ.ಆರ್.ನಾಗರಾಜರು ಸಂಘದ ಚುಕ್ಕಾಣಿ ಹಿಡಿದು, ಸಮಾನ ಮನಸ್ಕರ ಸಹಾಯದಿಂದ ಸಂಘದ ಪುನರ್ ನಿರ್ಮಾಣ ಮಾಡಲು ಆರಂಭಿಸಿದರು. 1990ರಲ್ಲಿ ಸಂವಿಧಾನಕ್ಕೆ ಸಾಕಷ್ಟು ಸಂಶೋಧನೆಗಳನ್ನು ಮಾಡಿ ತಿದ್ದುಪಡಿಗಳನ್ನು ತಂದರು. ಆಗಿದ್ದ ಸದಸ್ಯರ ಸಂಖ್ಯಾಬಲ ಕೇವಲ 450. ಕಾಲ ಚಕ್ರ ಉರುಳಿದೆ. ಇತಿಹಾಸ ಮತ್ತೆ ಮರುಕಳಿಸಿದೆ. ಆದರೆ ಈ ಬಾರಿ ಪರಿಮಾಣ ಮತ್ತು ಪರಿಣಾಮ ಎರಡೂ ಭಯಾನಕವಾಗುವ ಭೀತಿ ಇದೆ. ಸಂಘದ ಬಗೆಗಿನ ಪರಿಕಲ್ಪನೆ ಬದಲಾಗಿದೆ. ಸಂಘದ ಚಟುವಟಿಕೆಗಳ ರೂಪು ರೇಷೆ ಸಾರ್ವಜನಿಕ ದೃಷ್ಟಿಗೆ ಬರುವ ಸಾಂಸ್ಕೃತಿಕ ಕಾರ್ಯಕ್ರಮಕ್ಕಷ್ಟೇ ಮೀಸಲಾಗಿಲ್ಲ. ಭವ್ಯವಾದ ಕಟ್ಟಡ, ನಿರಂತರ ಆದಾಯ, ವಸತಿ ಸೌಕರ್ಯದಂತಹ ಸೇವೆಗಳು, ಸಭಾಂಗಣ ನಿರ್ವಹಣೆ–ಬಾಡಿಗೆ ಈ ನಡುವೆ ನಗರಾಭಿವೃದ್ಧಿ ಖಾತೆ, ಆದಾಯ ತೆರಿಗೆ, ಎಂ.ಸಿ.ಡಿ. ಮುಂತಾದ ಸರಕಾರೀ ನಿಯಂತ್ರಣದ ಏಜೆನ್ಸಿಗಳ ಹದ್ದಿನ ಕಣ್ಣಿಗೆ ಬೀಳುವ ದಿನಗಳು ಬಂದಿವೆ. ಈ ವರ್ಷ ಕಟ್ಟಡ ನಿರ್ಮಾಣಕ್ಕಾಗಿ ತೆಗೆದ ಸಾಲವೂ ಮುಗಿದು ಹೋಗುತ್ತದೆ. ಬೇಡವೆಂದರೂ ವರ್ಷಕ್ಕೆ ಒಂದು ಕೋಟಿ ಆದಾಯ ಬರುತ್ತದೆ. ಈ ತನಕ ಸಂಘ ಹೊಸ ಯೋಜನೆಗಳನ್ನು ಹಾಕಿಕೊಂಡಿಲ್ಲ. ಸಂಘದ ಸದಸ್ಯತ್ವ 4500ಕ್ಕೆ ಏರಿದೆ.

"ದೆಹಲಿಯಲ್ಲಿರುವ ಕನ್ನಡಿಗರ ಸಾಂಸ್ಕೃತಿಕ, ಶೈಕ್ಷಣಿಕ, ಸಾಮಾಜಿಕ ಅಭಿವೃದ್ಧಿಗಾಗಿ ದೆಹಲಿ ಕರ್ನಾಟಕ ಸಂಘದ ಸ್ಥಾಪನೆ" ಎಂದು ಮೆಮೊರಾಂಡಮ್ ಆಫ್ ಅಸೋಸಿಯೇಶನ್‌ನಲ್ಲಿ ಹೇಳಲಾದರೂ ಕನ್ನಡಿಗರು ಯಾರೂ ಬೇಕಾದರೂ ಸದಸ್ಯರಾಗಬಹುದು. ಸಂಘ ಇಂದು 1000 ಕೋಟಿ ರೂಪಾಯಿಯ ಆಸ್ತಿಯಾಗಿದೆ. ಹತ್ತಾರು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಯಾವುದೋ ದುಷ್ಟ ಹಿತಾಸಕ್ತಿ ಸಂಘವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುವ ಅಪಾಯ ಇನ್ನೂ ಇದೆ ಎಂಬ ದಿವಂಗತ ಶ್ರೀ ಕೆ.ಆರ್.ನಾಗರಾಜರವರ ಮಾತುಗಳು ನನ್ನ ಕಿವಿಯಲ್ಲಿ ಇಂದೂ ಸಹ ಪ್ರತಿಧ್ವನಿಸುತ್ತಲೇ ಇವೆ. ಸಂಘದ ಇತ್ತೀಚಿನ ಆಗುಹೋಗುಗಳು, ಕಾರ್ಯಕಾರೀ ಸಮಿತಿಯ ಸಭೆಗಳು ನಡೆಯುವ ರೀತಿ, ಇವೆಲ್ಲವುಗಳನ್ನು ನೋಡಿದಾಗ, ಸಂಘದ ಭಯಾನಕ ದಿನಗಳ ಚಿತ್ರಣ ಮೂಡಿಬರುತ್ತದೆ. ನಾನು ಕಾರ್ಯದರ್ಶಿಯಾಗಿದ್ದಾಗ ಕಟ್ಟಡ ನಿರ್ಮಾಣ, ಅದಕ್ಕೊಂದು ಆರ್ಥಿಕ ಬುನಾದಿ ಒದಗಿಸುವ ನಿಟ್ಟಿನಲ್ಲಿ ಶ್ರಮವಹಿಸಿದೆ. ಕೊಡುಗೈಯಿಂದ ಸಂಘ ಕೆಡುಗೈಗೆ ಹೋಗದಂತೆ ಸಂವಿಧಾನ ತಿದ್ದುಪಡಿಯನ್ನು ಮಾಡಿ, ಸಂಘದ ಹಿತದೃಷ್ಟಿಯನ್ನು ಕಾಪಾಡುವ ಈ ಒಂದು ಕೆಲಸವನ್ನು ಮಾಡುವ ಸಮಯವಾದರೂ ಏಕೆ ಸಿಗಲಿಲ್ಲ ಎಂದು ಕೊರಗುವಂತಾಗಿದೆ. ಸಂಘದ ಕಾರ್ಯಕಲಾಪಗಳನ್ನು ಸುಸೂತ್ರವಾಗಿ ನೆರವೇರಿಸಿಕೊಂಡು ಹೋಗಲು ಹಣಕಾಸಿನ ವಿಚಾರಗಳಲ್ಲಿ ಸಂಯಮ, ಮತ್ತು ಶಿಸ್ತು ಕಾಪಾಡುವಲ್ಲಿ ಬಲವಾದ ವ್ಯವಸ್ಥೆ ಇಂದಿನ ಅಗತ್ಯ.

ಸರ್ವಸದಸ್ಯರ ಪ್ರತೀ ಬಾರಿಯ ಸಭೆಯಲ್ಲಿ ಸಂವಿಧಾನ ತಿದ್ದುಪಡಿ ತರುವಂತೆ ಆದೇಶಗಳಿವೆ. ಹಾಗೆಂದು ಸಮಿತಿ ಅದನ್ನು ತಾರದಿದ್ದರೆ ಮುಂದಿನ ಸಭೆಯಲ್ಲಿ ಅದನ್ನು ಪ್ರಶ್ನಿಸಿದವರಿಲ್ಲ. ಆ ಸಭೆಯಲ್ಲೂ ಕೊನೆಯಲ್ಲಿ ಸಂವಿಧಾನ ತಿದ್ದುಪಡಿ ತರುವಂತೆ ನಿರ್ಧಾರ ತೆಗೆದುಕೊಳ್ಳಲಾಗುತ್ತಿತ್ತು. ಹೊಸ–ಹೊಸ ಸಮಿತಿಗಳು ಬರುತ್ತಿದ್ದವು. ಮತ್ತೆ ಸಂವಿಧಾನ ತಿದ್ದುಪಡಿ ನೆನೆಗುದಿಗೆ ಬೀಳುತ್ತಿತ್ತು. ಕಳೆದೆಂಟು ವರ್ಷಗಳಲ್ಲಿ ಸಂವಿಧಾನ ತಿದ್ದುಪಡಿಯನ್ನು ಯಾಕೆ ತಂದಿಲ್ಲವೆಂದು ಕಾರ್ಯಕಾರೀ ಸಮಿತಿಯನ್ನು ತರಾಟೆಗೆ ತೆಗೆದುಕೊಂಡವರಿಲ್ಲ. ಅಂತೂ ಸಂಘದ ಗಮನ ಎತ್ತ ಎಂಬುದು ಪ್ರಶ್ನೆಯಾಗತೊಡಗಿತ್ತು.

ಡಾ.ವೆಂಕಟಾಚಲ ಹೆಗಡೆಯವರ ನೇತೃತ್ವದಲ್ಲಿ ಈ ಬಾರಿ ಸಂವಿಧಾನ ತಿದ್ದುಪಡಿಯ ಕೆಲಸ ಭರದಿಂದ ಸಾಗಿದೆ..., ಆದರೆ ಬಹಳ ವಿಳಂಬವಾಗಿದೆ ಎಂಬುದು ಸತ್ಯ. ಕೊನೆಗೂ ಸಮಿತಿ ಇದನ್ನು ತರಲು ಹೊರಟಿದೆಯಲ್ಲ ಎಂಬುದು, ಸಮಸ್ಯೆಯ ಭಾಗವಾಗದೆ ಮತ್ತು ಸಮಾಧಾನದ ಭಾಗವಾಗುವ ಚಿಂತಕರಿಗೆ ನೆಮ್ಮದಿಯ ವಿಷಯವೇ ಹೌದು. ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಕಾನೂನು ಪ್ರಾಧ್ಯಾಪಕರಾಗಿರುವ ಡಾ.ಹೆಗಡೆಯವರ ಅಧ್ಯಕ್ಷತೆಯಲ್ಲಿ ಸಂವಿಧಾನ ತಿದ್ದುಪಡಿಯಾದರೆ ಮುಂದಿನ ಕಾರ್ಯಕಾರೀ ಸಮಿತಿಗಳಿಗೆ ನಿರಾಳವಾಗುತ್ತದೆ. ಸಂಘಕ್ಕೊಂದು ಭದ್ರ ಸಂವೈಧಾನಿಕ ಬುನಾದಿ ಆಗುತ್ತದೆ. ಸಂಘದ ಹಿತದೃಷ್ಟಿಗೆ ದೆಹಲಿಯ ಪ್ರಸ್ತುತ ಕನ್ನಡಿಗರ ಕೊಡುಗೆ ಇತಿಹಾಸದ ಪುಟಗಳಲ್ಲಿ ಅಚ್ಚಳಿಯದೆ ಉಳಿಯುತ್ತದೆ. ಸಂಘದ ಅರ್ಥಪೂರ್ಣ ಗಮನಕ್ಕೊಂದು ಹಾದಿಯಾಗುತ್ತದೆ.

❑ **ಸರವು ಕೃಷ್ಣಭಟ್**

**Statement of Ownership and other Particulars about**

## Delhi Karnataka Sangha's ABHIMATA

## FORM-IV (See Rule 8)

| | | |
|---|---|---|
| **Place of Publication** | : | Delhi Karnataka Sangha, New Delhi |
| **Periodicity of Pub** | : | Monthly |
| **Printers Name** | : | M/s Saujanya Printing Press, C-97, Okhla Industrial Area, Phase-I, New Delhi-110020 |
| **Publishers Name** | : | C.M. Nagaraja |
| **Nationality** | : | Indian |
| **Add ress** | : | Delhi Karnataka Sangha Rao Tularam Marg, Sector-12, R.K. Puram, New Delhi - 22 |
| **Editor's Name** | : | Smt. Usha Bharatadri |
| **Nationality** | : | Indian |
| **Address** | : | As Above |
| **Name & Address** | : | Delhi Karnataka Sangha of Individual who Rao Tularam Marg, Sector-12 own the News Paper R.K. Puram, New Delhi- 110022 |

I, C.M. Nagaraja, hereby declare that the particulars given above are true to the best of my knowledge and belief.

**08.03.2013** **Sd\-**
**New Delhi** **Publisher**

# ‘ದೆಹಲಿ ತುಳು ಸಿರಿ’ಯಿಂದ ತುಳು



ಕರ್ನಾಟಕದ ಪ್ರಮುಖ ಭಾಷೆ ತುಳುವನ್ನು ಭಾರತದ ಸಂವಿಧಾನದ 8ನೇ ಪರಿಚ್ಛೇದಕ್ಕೆ ಸೇರಿಸಬೇಕೆನ್ನುವ ಬೇಡಿಕೆಯೊಂದಿಗೆ ನಡೆದ ‘ದೆಹಲಿ ತುಳು ಸಿರಿ’ ಜಾಗತಿಕ ಸಮಾವೇಶದಲ್ಲಿ ತುಳು ಭಾಷೆಗೆ ಮಾನ್ಯತೆ ಸಿಗುವ ವಿಶ್ವಾಸ ಮೂಡಿದೆ. ದಿನಾಂಕ 24.2.2013ರಂದು ದೆಹಲಿ ಕನ್ನಡ ಶಾಲೆಯ ಆವರಣದಲ್ಲಿ ನಡೆದ ಬೃಹತ್ ಸಮಾವೇಶದಲ್ಲಿ ಕೇಂದ್ರ ಸಚಿವರು, ಸಂಸದರು ಈ ಕುರಿತು ಬೆಂಬಲ ಸೂಚಿಸಿ ತುಳು ಭಾಷೆಗೆ ಮಾನ್ಯತೆ ಒದಗಿಸಲು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ದೆಹಲಿ ತುಳು ಸಿರಿ, ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಹಾಗೂ ದೆಹಲಿಯ 23 ವಿವಿಧ ಕನ್ನಡ ಸಂಘಗಳ ಸಹಯೋಗದಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸಮಾವೇಶವನ್ನು ದೀಪ ಬೆಳಗಿಸಿ ಉದ್ಘಾಟಿಸಿದ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ಸಚಿವ ಡಾ.ಎಂ.ವೀರಪ್ಪ ಮೊಯಿಲಿ ಅವರು ಮಾತನಾಡಿ, ಸಂಪನ್ನತೆಯ ದೃಷ್ಟಿಯಿಂದ ತುಳು ಭಾಷೆ ಜಗತ್ತಿನ ಯಾವ ಭಾಷೆಗೂ ಕಡಿಮೆಯಿಲ್ಲ. ಸಂಗಂ ಸಾಹಿತ್ಯ ವಿದ್ವಾಂಸರು, ಪಾಶ್ಚಾತ್ಯ ವಿದ್ವಾಂಸರು ತುಳುವಿನ ಹಿರಿಮೆಯನ್ನು ಸಾರಿದ್ದಾರೆ. ತೌಳವ ಸಂಸ್ಕೃತಿಯನ್ನು ಮೈಗೂಡಿಸಿ, ಸೋಲೊಪ್ಪದ ಮನೋಭಾವದ ತುಳುವರ ಈ ಬೇಡಿಕೆಯನ್ನು ಸರಕಾರದ ಗಮನಕ್ಕೆ ತಂದು ಮಾನ್ಯತೆ ಒದಗಿಸುವ ಪ್ರಾಮಾಣಿಕ ಪ್ರಯತ್ನ ನಡೆಸುವುದಾಗಿ ತಿಳಿಸಿದರು.

‘ದೆಹಲಿ ತುಳು ಸಿರಿ’ ಮೂಲಕ ಹಸ್ತಾಂತರಿಸಿರುವ ಮನವಿಯನ್ನು ಕೇಂದ್ರ ಭಾಷಾ ಅಲ್ಪಸಂಖ್ಯಾತ ಆಯೋಗಕ್ಕೆ ನೀಡಿ, ವರದಿ ತರಿಸಿ ಅಗತ್ಯ ಕ್ರಮ ಕೈಗೊಳ್ಳುವ ಭರವಸೆಯನ್ನು ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಖಾತೆ ಸಚಿವ ಶ್ರೀ ಕೆ.ರೆಹಮಾನ್ ಖಾನ್ ನೀಡಿದರು.

ರಾಷ್ಟ್ರ ರಾಜಧಾನಿಯಲ್ಲಿ ಹಿಂದಿನಿಂದಲೂ ನಡೆದು ಬಂದ ತುಳು ಭಾಷಾ ಮಾನ್ಯತೆಯ ಹೋರಾಟದಲ್ಲಿ ಸಕ್ರಿಯರಾಗಿರುವ ಸಂಸದ ಶ್ರೀ ಆಸ್ಕರ್ ಫೆರ್ನಾಂಡೀಸ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸತ್ಕಾರ್ಯಕ್ಕೆ ಕರ್ನಾಟಕವನ್ನು ಪ್ರತಿನಿಧಿಸುವ ಎಲ್ಲ ಸಂಸದರ ಬೆಂಬಲ ಅಗತ್ಯ ಎಂದವರು ಮನವಿ ಮಾಡಿದರು.

ಒಂದು ವರ್ಷದೊಳಗೆ ತುಳುವಿಗೆ ಮಾನ್ಯತೆ ಸಿಗಲು ತಾನು ಶಕ್ತಿ ಮೀರಿ ಪ್ರಯತ್ನಿಸುವುದಾಗಿ ಮಂಗಳೂರಿನ ಸಂಸದ ನಳಿನ್ ಕುಮಾರ್ ಕಟೀಲ್ ಘೋಷಿಸಿದರು.

ತುಳು ಸಂಸ್ಕೃತಿಯ ಹಿನ್ನೆಲೆಯಿಂದ ನನಗೆ ಚಿತ್ರರಂಗದಲ್ಲಿ ಯಶಸ್ವಿಯಾಗಲು ಸಾಧ್ಯವಾಯಿತು ಎಂದು ತಮಿಳು ಮತ್ತು ತೆಲುಗಿನ ಖ್ಯಾತ ನಟಿ ಅನುಷ್ಕಾ ಶೆಟ್ಟಿ ಹೆಮ್ಮೆಯಿಂದ ಮಾತನಾಡಿದರು.

‘ದೆಹಲಿ ತುಳು ಸಿರಿ’ ಸಮಾವೇಶ ಸಮಿತಿಯ ಅಧ್ಯಕ್ಷ ಶ್ರೀ ಐ.ರಾಮಮೋಹನ್ ರಾವ್ ಅವರು ಕೇಂದ್ರ ಸಚಿವರು ಮತ್ತು ಸಂಸದರಿಗೆ ಮನವಿಯನ್ನು ಅರ್ಪಿಸಿ, ತುಳು ಭಾಷಾ ಮಾನ್ಯತೆಗಾಗಿ ನಡೆಸಿದ ಹೋರಾಟ, ಕಾರ್ಯಕರ್ತರ ಸಹಕಾರವನ್ನು ನೆನೆದು ತುಳುವಿಗೆ ಶೀಘ್ರದಲ್ಲೇ ಸಂವಿಧಾನದ ಮಾನ್ಯತೆ ದೊರೆಯಬೇಕು ಎಂಬ ಆಶಯ ವ್ಯಕ್ತಪಡಿಸಿದರು.

ಮನವಿಯ ವಿವರಗಳನ್ನು ನೀಡಿದ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಶ್ರೀ ಉಮಾನಾಥ್ ಎ.ಕೋಟ್ಯಾನ್ ಅವರು ತುಳು ಭಾಷೆ ಎಂಟನೇ ಪರಿಚ್ಛೇದಕ್ಕೆ ಸೇರುವಲ್ಲಿ ವಿಳಂಬವಾಗುತ್ತಿರುವುದಕ್ಕೆ ವಿಷಾದ ವ್ಯಕ್ತಪಡಿಸಿದರು. ತುಳು ಸಂಸ್ಕಾರಗಳನ್ನು ಕಾಯ್ದುಕೊಳ್ಳುವಂತೆ ಅವರು ಕಿವಿಮಾತು ಹೇಳಿದರು.

ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ಆಗಮಿಸಿದ ಶ್ರೀ ಡಿ.ಸುರೇಂದ್ರ ಕುಮಾರ್ ಅವರು ಶುಭ ಕೋರಿ ಮಾತನಾಡಿದರು. ಹಿರಿಯ ಕಲಾವಿದೆ ಡಾ.ಜಯಮಾಲ ಹಾಗೂ ದೆಹಲಿಯ ಕರ್ನಾಟಕದ ವಿಶೇಷ ಸಮನ್ವಯಕಾರ ಶ್ರೀ ಬೈಕೆರೆ ನಾಗೇಶ್ ಉಪಸ್ಥಿತರಿದ್ದರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಉಪಕುಲಪತಿ ಡಾ.ಬಿ.ಎ.ವಿವೇಕ ರೈ ಅವರು, ತುಳು ಭಾಷೆ ಜಾತ್ಯಾತೀತ, ಧರ್ಮಾತೀತ ಹಾಗೂ ದೇಶಾತೀತ. ತುಳು





# ಭಾಷಾ ಮಾನ್ಯತೆಗೆ ಹೆಚ್ಚಿದ ಬಲ




ಒಂದು ಪ್ರದೇಶದ ಸಮಗ್ರ ಸಂಪರ್ಕ ಭಾಷೆ. ಇಂತಹ ಹಿರಿಮೆ ದೇಶದ ಕೆಲವೇ ಕೆಲವು ಭಾಷೆಗಳಿಗಿವೆ. ದೆಹಲಿಯ ಈ ಸಮಾವೇಶ ಹಕ್ಕೊತ್ತಾಯದ ಕೊನೆಯ ಸಮಾವೇಶವಾಗಲಿ ಮತ್ತು ಮುಂದಿನ ಸಮಾವೇಶ ತುಳು ಭಾಷೆಗೆ ಸಂವಿಧಾನದ ಮಾನ್ಯತೆ ಸಿಕ್ಕ ಸಂಭ್ರಮಾಚರಣೆ ಆಗಲಿ ಎಂದರು.

ಮಧ್ಯಾಹ್ನ ನಡೆದ ಸಾಂಸ್ಕೃತಿಕ ಸಮಾರಂಭವನ್ನು ಉದ್ಘಾಟಿಸಿದ ಹಿರಿಯ ಚಲನಚಿತ್ರ ಕಲಾವಿದೆ ಡಾ.ಜಯಮಾಲ ಅವರು, ಕಂಬಳ, ಪಾಡ್ದನ, ಭೂತಾರಾಧನೆ ಮೊದಲಾದ ವಿಭಿನ್ನ ಸಾಂಸ್ಕೃತಿಕ ಪರಂಪರೆಯನ್ನು ತುಳುನಾಡು ಹೊಂದಿದೆ. ತುಳುವ ಸಂಸ್ಕೃತಿಯ ಉಳಿವಿಗೆ ತುಳು ಭಾಷೆಗೆ ಸಂವಿಧಾನದ ಮಾನ್ಯತೆ ತುರ್ತು ಅಗತ್ಯ ಎಂದು ಅಭಿಮಾನದಿಂದ ನುಡಿದರು.

ಖ್ಯಾತ ಸಂಗೀತ ನಿರ್ದೇಶಕ ಶ್ರೀ ಗುರುಕಿರಣ್, ನಟ ಮತ್ತು ನಿರ್ದೇಶಕ ಶ್ರೀ ಶಿವಧ್ವಜ್, ನಟ ಸುರೇಶ್ ರೈ, ನಟಿ ಸೌಂದರ್ಯ, ಸುಗಮ ಸಂಗೀತ ಗಾಯಕ ಶ್ರೀ ಶಶಿಧರ ಕೋಟೆ ಹಾಗೂ ನಟ ಹರೀಶ್ ವಾಸು ಶೆಟ್ಟಿ ಅವರು ತುಳುವಿಗೆ ಸಂವಿಧಾನದ ಮಾನ್ಯತೆಯ ಬೇಡಿಕೆ ನ್ಯಾಯ ಸಮ್ಮತ ಮತ್ತು ಇದು ಬೇಗ ಈಡೇರಲಿ ಎಂದು ಹೇಳಿದರು.





ಗುರುಕಿರಣ್ ಅವರು 'ಹುಟ್ಟಿದರೆ ಕನ್ನಡ ನಾಡಲಿ' ಎಂಬ ಜನಪ್ರಿಯ ಹಾಡಿನಿಂದ ಮೋಡಿ ಮಾಡಿದರು. ಹರೀಶ್ ವಾಸುಶೆಟ್ಟಿ ಅವರು ಮಿಮಿಕ್ರಿ ಕಾರ್ಯಕ್ರಮ ನೀಡಿ ರಂಜಿಸಿದರು. ಶ್ರೀಮತಿ ನಿರ್ಮಲಾ ಶೆಟ್ಟಿ ಅವರು ಎಲ್ಲ ಕಲಾವಿದರಿಗೆ ಸ್ಮರಣಿಕೆ ನೀಡಿ ಗೌರವಿಸಿದರು.

ತುಳನಾಡ ಸಿರಿ ಕುರಿತು ವಿಶೇಷ ಉಪನ್ಯಾಸ ನೀಡಿದ ಡಾ.ಬಿ.ನಿತ್ಯಾನಂದ ಶೆಟ್ಟಿ ಹಾಗೂ ಶ್ರೀ ನರೇಂದ್ರ ರೈ ದೇರ್ಲ ಅವರು ಕೃಷಿ ಪ್ರಧಾನವಾದ ತುಳುನಾಡಿನ ಭಾಷೆ ಮತ್ತು ಸಂಸ್ಕೃತಿಯ ಲಕ್ಷಣ, ವಿಸ್ತಾರ ಹಾಗೂ ಅನನ್ಯತೆ ಕುರಿತು ಬೆಳಕು ಚೆಲ್ಲಿದರು. ಜಾನಪದ ವಿದ್ವಾಂಸ ಡಾ.ಪುರುಷೋತ್ತಮ ಬಿಳಿಮಲೆಯವರು ಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪ್ರಖ್ಯಾತ ಗಾಯಕ ಶ್ರೀ ಶಶಿಧರ ಕೋಟೆ ಅವರ ಸುಗಮ ಸಂಗೀತ ಕೇಳುಗರ ಮೆಚ್ಚುಗೆ ಗಳಿಸಿತು. ಮೂಲ್ಕಿಯ ಶ್ರೀ ಚಂದ್ರಹಾಸ ಸುವರ್ಣ ಅವರ ನಿರ್ದೇಶನ ಮತ್ತು ಪರಿಕಲ್ಪನೆಯ ಸುಮಾರು 75 ಜನ ಕಲಾವಿದರು ಭಾಗವಹಿಸಿದ 'ತುಳುನಾಡ ವೈಭವ' ದೃಶ್ಯ ರೂಪಕವು ಸಮಾವೇಶಕ್ಕೆ ವಿಶೇಷ ಮೆರುಗು ನೀಡಿತು. ಮಂಗಳೂರಿನ 'ಯಕ್ಷ ಮಂಜೂಷ' ತಂಡದ 'ಪಂಚವಟಿ' ತುಳು ಯಕ್ಷಗಾನ ಪ್ರದರ್ಶನ ಮನರಂಜಿಸಿತು.

ವಿವಿಧ ರಂಗಗಳಲ್ಲಿ ಸಾಧನೆ ಮಾಡಿದ ತುಳುವ ಗಣ್ಯರನ್ನು ಸನ್ಮಾನಿಸಲಾಯಿತು. ಮಹಾರಾಷ್ಟ್ರ ಸರಕಾರದ ಶಾಸಕರಾದ ಶ್ರೀ ಎನ್.ಜಗನ್ನಾಥ ಶೆಟ್ಟಿ, ಶ್ರೀ ಕೃಷ್ಣ ಹೆಗ್ಡೆ, ಉದ್ಯಮ ಕ್ಷೇತ್ರದ ಶ್ರೀ ಎಂ.ಜಯರಾಮ್ ಶೆಟ್ಟಿ, ಶ್ರೀ ಜಯರಾಮ್ ಬನಾನ್, ಶ್ರೀ ವಿಯ ವಿಠ್ಠಲನಾಥ ಶೆಟ್ಟಿ, ಕನ್ನಡ ಮತ್ತು ತುಳು ಸಂಘಟಕರಾದ ಶ್ರೀ ಕೆ.ಸರ್ವೋತ್ತಮ ಶೆಟ್ಟಿ, ಶ್ರೀ ಸಿ.ಎ.ಶಂಕರ ಶೆಟ್ಟಿ ಅವರು ಸನ್ಮಾನ ಸ್ವೀಕರಿಸಿದರು. ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ.ನಾಗರಾಜ ಅವರಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು.

ಆರಂಭದಲ್ಲಿ ದೆಹಲಿಯ ಕಲಾವಿದರು ನಾಡಗೀತೆ ಹಾಗೂ ಮುಲ್ಕಿಯ ಕಲಾವಿದರು ತುಳುಗೀತೆ ಹಾಡಿದರು. ಶ್ರೀ ಬಾಲಕೃಷ್ಣ ನಾಯ್ಕ್ ಡಿ ಅವರು ಉಪನ್ಯಾಸ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಶ್ರೀ ಪ್ರದೀಪ್ ಪೂಜಾರಿ ಅವರು ದೃಶ್ಯ ರೂಪಕ ಕಲಾವಿದರ ಪರಿಚಯ ನೀಡಿದರು. ಶ್ರೀ ಎಸ್.ಕೃಷ್ಣಭಟ್ ಯಕ್ಷಗಾನ ಕಲಾವಿದರ ಪರಿಚಯ ನೀಡಿದರು. ಡಾ.ವೈ.ಅವನೀಂದ್ರನಾಥ್ ರಾವ್ ಅವರು ಅಭಿನಂದಿತರ ಪರಿಚಯ ನೀಡಿ, ಸಾಂಸ್ಕೃತಿಕ ಸಮಾರಂಭದ ಕಾರ್ಯಕ್ರಮ ನಿರೂಪಿಸಿದರು. ಮಹಾಸಮಾವೇಶದ ಕಾರ್ಯಕ್ರಮ ನಿರ್ದೇಶಕ ಡಾ.ಪುರುಷೋತ್ತಮ ಬಿಳಿಮಲೆ ಅವರು ಸ್ವಾಗತಿಸಿ, ಉದ್ಘಾಟನಾ ಸಮಾರಂಭದ ಕಾರ್ಯಕ್ರಮ ನಿರೂಪಿಸಿದರು. ಸಮಾವೇಶದ ಸಂಚಾಲಕ ವಸಂತ ಶೆಟ್ಟಿ ಬೆಳ್ಳಾರೆಯವರು ವಂದನಾರ್ಪಣೆ ಮಾಡಿದರು.

❑ **ಡಾ.ವೈ.ಅವನೀಂದ್ರನಾಥ್ ರಾವ್**

# ಸ್ವತಂತ್ರ ಭಾರತದ ಮಹಿಳೆ ಎಷ್ಟು ಸ್ವತಂತ್ರಳು?

ಮಹಿಳೆಯರನ್ನು ಎಲ್ಲಿ ಪೂಜಿಸುತ್ತಾರೋ ಅಲ್ಲಿ ದೇವತೆಗಳು ನರ್ತಿಸುತ್ತಾರೆ ಎಂದು ಹಿಂದೂಧರ್ಮದ ಗ್ರಂಥವೊಂದರಲ್ಲಿ ಉದ್ಧರಿಸಲಾಗಿದೆ. ಅಂದರೆ ಭಾರತೀಯ ಅಥವಾ ಹಿಂದೂ ಸಮಾಜದಲ್ಲಿ ಮಹಿಳೆಯರಿಗೆ ಅತ್ಯಂತ ಉನ್ನತ ಗೌರವ ನೀಡಲಾಗುತ್ತದೆ ಎಂದು ಶತಮಾನಗಳಿಂದ ನಂಬಿಕೊಂಡು ಬರಲಾಗಿದೆ. ಅಷ್ಟೇ ಅಲ್ಲ ಪ್ರಕೃತಿಯ ಸೃಷ್ಟಿಯಲ್ಲಿ, ನಿಸರ್ಗದ ಒಡಲಲ್ಲಿ, ಹರಿವ ನದಿಗಳಲ್ಲಿ, ಮೇರು ಪರ್ವತಗಳಲ್ಲಿ ಹೆಣ್ಣನ್ನು ಸಾಕ್ಷಾತ್ಕರಿಸಿಕೊಳ್ಳುವ ಒಂದು ಪರಂಪರೆಯೂ ಭಾರತದಲ್ಲಿ ಬೆಳೆದುಬಂದಿದೆ. ಒಂದು ರೀತಿಯಲ್ಲಿ ಭಾರತೀಯ ಮಹಿಳೆಯನ್ನು ವೈಭವೀಕರಿಸಿ ನಾಲ್ಕು ಗೋಡೆಗಳ ನಡುವೆ ಬಂಧಿಸುವ ತಂತ್ರಗಾರಿಕೆ ಇದಾಗಿದೆಯಾದರೂ ಮತ್ತೊಂದೆಡೆ ಇದೇ ಸಂಸ್ಕೃತಿ, ಪರಂಪರೆ ಮತ್ತು ಧರ್ಮದ ಸಂರಕ್ಷಕರು ಮಹಿಳೆಯನ್ನು ಸಂಸ್ಕೃತಿಯ ರಕ್ಷಕಳೆಂದೂ , ರಾಷ್ಟ್ರ-ಧರ್ಮ ಮತ್ತು ಸಮಾಜದ ಘನತೆಯ ಸಂರಕ್ಷಕರೆಂದೂ ಬಿಂಬಿಸುತ್ತಾ ಬಂದಿರುವ ಮತೀಯವಾದಿಗಳು ಮಹಿಳೆಯನ್ನು ವೈಭವೀಕರಿಸುತ್ತಲೇ ಹಲವು ರೀತಿಗಳಲ್ಲಿ ಶೋಷಣೆಗೊಳಪಡಿಸುತ್ತಲೂ ಬಂದಿದ್ದಾರೆ. ಈ ಎರಡು ಆಯಾಮಗಳ ನಡುವೆಯೇ ಭಾರತೀಯ ಮಹಿಳೆ ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕ ವಲಯದಲ್ಲಿ, ಕೌಟುಂಬಿಕ ಪರಿಸರದಲ್ಲಿ ಮತ್ತು ವ್ಯಕ್ತಿಗತ ಜೀವನದಲ್ಲಿ ಹಲವು ರೀತಿಯ ದೌರ್ಜನ್ಯಗಳಿಗೆ ಒಳಗಾಗುತ್ತಿರುವುದು ಸ್ವತಂತ್ರ ಭಾರತದ ವಿಡಂಬನೆ. ಆದರೂ ಮಹಿಳಾ ಸ್ವಾತಂತ್ರ್ಯ , ವಿಮೋಚನೆ, ಸಬಲೀಕರಣ ಇತ್ಯಾದಿ ಘೋಷಣೆಗಳು ದಿನನಿತ್ಯ ಮೊಳಗುತ್ತಲೇ ಇರುತ್ತವೆ. ಪಂಚಾಯತಿ ಮಟ್ಟದಿಂದ ಹಿಡಿದು ಸಂಸತ್ತಿನವರೆಗೂ ಮಹಿಳೆಯರಿಗೆ ಅಧಿಕಾರ ನೀಡುವ ಬಗ್ಗೆ ಉಪನ್ಯಾಸಗಳು ಪುಂಖಾನುಪುಂಖವಾಗಿ ಕೇಳಿಬರುತ್ತಲೇ ಇರುತ್ತದೆ. ಮಹಿಳಾ ಮೀಸಲಾತಿ ಮಸೂದೆ ನೆನೆಗುದಿಗೆ ಬಿದ್ದಿದ್ದರೂ ರಾಜಕೀಯ ಪಕ್ಷಗಳು, ಚುನಾವಣೆಗಳಲ್ಲಿ ಟಿಕೆಟ್ ನೀಡದಿದ್ದರೂ ಮಹಿಳೆಯರಿಗೆ ಅಧಿಕಾರ ನೀಡುವ ಘೋಷಣೆ ಮಾಡುತ್ತಲೇ ಇರುತ್ತಾರೆ. ಒಬ್ಬ ಮೀರಾ ಕುಮಾರ್, ಒಬ್ಬ ಪ್ರತಿಭಾ ಪಾಟೀಲ್ ಅಥವ ಹಲವು ಜಯಾ-ಮಾಯಾ-ಮಮತಾಗಳು ಸಬಲೀಕರಣಗೊಂಡ ಮಹಿಳೆಯರ ಸಂಕೇತವಾಗಿ ಕಾಣುತ್ತಾರೆ. ಇವರ ಛಾಯೆಯಲ್ಲೇ ಇತರ ಮಹಿಳೆಯರ ವೈಭವವನ್ನೂ ಸಮೀಕರಿಸುತ್ತಾ ಭಾರತದ ಆಳುವ ವರ್ಗಗಳು ಆತ್ಮರತಿಯಲ್ಲಿ ತೊಡಗಿರುತ್ತವೆ. ಸುಶಿಕ್ಷಿತ, ನಗರೀಕೃತ, ಮೇಲ್ಪದರದ ಮಹಿಳೆಯರ ಸಾಧನೆಗಳನ್ನೇ ವೀರಗಾಥೆಗಳಂತೆ ಬಿಂಬಿಸಿ ಭಾರತೀಯ ಮಹಿಳೆ ಔನ್ನತ್ಯ ಸಾಧಿಸಿದ್ದಾಳೆ ಎಂದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬಿಂಬಿಸಲಾಗುತ್ತದೆ. ಆದರೆ ವಾಸ್ತವ ಭಿನ್ನವಾಗಿದೆ. ನವ ಉದಾರವಾದ ಮತ್ತು ಜಾಗತೀಕರಣದ ಪ್ರಹಾರದಿಂದ ತತ್ತರಿಸಿ ಹೋಗಿರುವ ಗ್ರಾಮೀಣ ಬಡಜನತೆ ತಮ್ಮ ಜೀವನಾಧಾರವನ್ನರಸಿ ತಂಡೋಪತಂಡವಾಗಿ ವಲಸೆ ಹೋಗಲಾರಂಭಿಸಿದ್ದಾರೆ. ಇವರಲ್ಲಿ ಮಹಿಳೆಯರೇ ಅಧಿಕ ಎಂದು ಹೇಳಬೇಕಿಲ್ಲ. ಒಂದು ವೇಳೆ ಪುರುಷರು ಮಾತ್ರ ವಲಸೆ ಹೋದರೂ ಮಹಿಳೆಯರು ಕೌಟುಂಬಿಕ ಜವಾಬ್ದಾರಿಯನ್ನು ಹೊರಬೇಕಾದ ಅನಿವಾರ್ಯ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಕೃಷಿ ಕ್ಷೇತ್ರದಲ್ಲಿನ ಬಿಕ್ಕಟ್ಟು ಗ್ರಾಮೀಣ ಮಹಿಳೆಯರನ್ನು ಗಾರ್ಮೆಂಟ್ ಕಾರ್ಖಾನೆಗಳ ಗೇಟ್ ಬಳಿ ನೌಕರಿಗಾಗಿ ಸಾಲುಗಟ್ಟಿ ನಿಲ್ಲುವಂತೆ ಮಾಡಿದೆ. ಗಾರ್ಮೆಂಟ್ ಕಾರ್ಖಾನೆಗಳಲ್ಲಿ ಹಗಲಿರುಳು ಗಾಣದೆತ್ತಿನಂತೆ ದುಡಿಯುವ ಮಹಿಳೆಯರಿಗೆ ನೀಡುವ ಅತ್ಯಲ್ಪ ವೇತನ ಮತ್ತು ಕಾರ್ಖಾನೆಯ ಆಡಳಿತ ವರ್ಗಗಳು ಭವಿಷ್ಯನಿಧಿ ಮುಂತಾದ ಯಾವುದೇ ಸವಲತ್ತುಗಳನ್ನು ಒದಗಿಸದಿರುವುದು ಮಹಿಳಾ ಕಾರ್ಮಿಕರನ್ನು ಶೋಷಣೆಯ ಸರಕುಗಳನ್ನಾಗಿ ಮಾಡಿದೆ. ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಸೃಷ್ಟಿಸಲು ಕೇಂದ್ರ ಸರ್ಕಾರ ರೂಪಿಸಿರುವ ಉದ್ಯೋಗ ಖಾತರಿ ಯೋಜನೆ ಪಟ್ಟಭದ್ರ ಹಿತಾಸಕ್ತಿಗಳ, ದಲ್ಲಾಳಿಗಳ ಮತ್ತು ಪ್ರಬಲ ರಾಜಕೀಯ ವ್ಯಕ್ತಿಗಳ ದಂಧೆಯಾಗಿದ್ದು ಇಲ್ಲಿಯೂ ಸಹ ಮಹಿಳೆಯರು ಉದ್ಯೋಗದಿಂದ ವಂಚಿತರಾಗುತ್ತಿದ್ದಾರೆ.

ನಗರ ಪ್ರದೇಶಗಳಲ್ಲಿ ಮಹಿಳೆಯರು ಸರ್ವ ಸ್ವತಂತ್ರರಾಗಿ ಕಂಡುಬಂದರೂ ಅತ್ಯಾಧುನಿಕ ಸಾಫ್ಟ್‌ವೇರ್ ಉದ್ಯಮವನ್ನೂ ಸೇರಿದಂತೆ ಎಲ್ಲ ಕಚೇರಿಗಳಲ್ಲಿ ಲೈಂಗಿಕ ಕಿರುಕುಳ ದೌರ್ಜನ್ಯಕ್ಕೊಳಗಾಗುತ್ತಿದ್ದಾರೆ. ಸಾಫ್ಟ್‌ವೇರ್ ಕಾಲ್ ಸೆಂಟರ್‌ಗಳಲ್ಲಿ ಕೆಲಸ ಮಾಡುವ ಯುವತಿಯರ ಹತ್ಯೆ ಸಾಮಾನ್ಯವಾಗಿದ್ದು, ಎಷ್ಟೇ ಆಧುನಿಕ ಸೌಕರ್ಯಗಳನ್ನು ಹೊಂದಿದ್ದರೂ ಮಹಿಳಾ ಕಾರ್ಮಿಕರು ನಿರ್ಭಯರಾಗಿ ಓಡಾಡುವುದು ದುಸ್ತರವಾಗಿದೆ. ಇದು ಆರ್ಥಿಕ ವಲಯದಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು.

'ಸಾಂಸ್ಕೃತಿಕ ದಾಳಿ' ಸಾಮಾಜಿಕ ವಲಯದಲ್ಲಿ ಮಹಿಳೆಯರು ಮತ್ತೊಂದು ರೀತಿಯ ಸಂಕಟಕ್ಕೆ ಸಿಲುಕಿದ್ದಾರೆ. ಭಾರತೀಯ, ಹಿಂದೂ, ಇಸ್ಲಾಮಿಕ್ ಅಥವಾ ಕ್ರೈಸ್ತ ಧರ್ಮಗಳ ಮತ್ತು ಸಂಸ್ಕೃತಿಗಳ ರಕ್ಷಣೆಯ ಹೊಣೆಗಾರಿಕೆಯನ್ನು ಮಹಿಳೆಯರ ಹೆಗಲಿಗೇರಿಸಿರುವ ಪಿತೃ ಪ್ರಧಾನ ಸಮಾಜ ತನ್ನ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳಲು ಹೆಣ್ಣಿನ ಮೊರೆ ಹೋಗುತ್ತಿರುವುದು ಅಪಾಯಕಾರಿ ಹಂತ ತಲುಪುತ್ತಿದೆ. ಮಹಿಳೆಯರ ಉಡುಪುಗಳಿಂದ ಹಿಡಿದು ದೈನಂದಿನ ಚಟುವಟಿಕೆಗಳವರೆಗೂ ನಿಗಾ ವಹಿಸುತ್ತಿರುವ ಪುರುಷ ಪ್ರಧಾನ ಸಮಾಜದ ಸಾಂಸ್ಕೃತಿಕ ಆರಕ್ಷಕರು ಸಂಸ್ಕೃತಿ ಮತ್ತು ಸಮಾಜದ ಘನತೆಯನ್ನು ಅಳೆಯಲು ಮಹಿಳೆಯರನ್ನೇ ಮಾನದಂಡವನ್ನಾಗಿ ಬಳಸುತ್ತಿರುವುದು ಇತ್ತೀಚಿನ ದಿನಗಳ ವಿಶಿಷ್ಟ ಬೆಳವಣಿಗೆ. ಅಸ್ಸಾಂನ ಗೌಹಾತಿಯಲ್ಲಿ ಗೆಳೆಯರೊಡನೆ ಬಾರ್‌ಗೆ ಹೋಗಿದ್ದ ಮಹಿಳೆಯ ಮೇಲೆ ಸಾರ್ವಜನಿಕರ ಸಮ್ಮುಖದಲ್ಲೇ ಹಲ್ಲೆ ನಡೆಸಿ, ಲೈಂಗಿಕ ದೌರ್ಜನ್ಯ ಎಸಗಿದರೂ, ಸುತ್ತಲೂ ನೆರೆದಿದ್ದ ಜನ ತಮಗೆ ಸಂಬಂಧವೇ ಇಲ್ಲದಂತೆ ವರ್ತಿಸಿರುವುದು ನಮ್ಮ ಸಮಾಜದ ನಿಷ್ಕ್ರಿಯತೆ ಮತ್ತು ಅಮಾನವೀಯ ಧೋರಣೆಯ ದ್ಯೋತಕವಾಗಿ ಕಾಣುತ್ತದೆ. ಈ ಪ್ರಕರಣದಲ್ಲಿ ಮಾಧ್ಯಮದ ಪ್ರತಿನಿಧಿಗಳೂ ಭಾಗಿಯಾಗಿರುವ ಸಂದೇಹ ಮೂಡಿರುವುದು ಪ್ರಜಾತಂತ್ರ ವ್ಯವಸ್ಥೆಯನ್ನೇ ಅಣಕಿಸುವಂತಿದೆ. ಈ ಘಟನೆಯ ಮುಂದುವರೆದ ಭಾಗವೇನೋ ಎಂಬಂತೆ ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಬಂದ ನಂತರ ಅಧಿಕೃತ ಪರವಾನಗಿ ಪಡೆದವರಂತೆ ವರ್ತಿಸುತ್ತಿರುವ ಸಾಂಸ್ಕೃತಿಕ ಆರಕ್ಷಕರು ಮಂಗಳೂರಿನ ಹೋಂಸ್ಟೇ ಒಂದರಲ್ಲಿ ಹುಟ್ಟುಹಬ್ಬದ ಸಮಾರಂಭದಲ್ಲಿ ತೊಡಗಿದ್ದ ಮಹಿಳೆಯರ ಮೇಲೆ ಅಮಾನುಷ ಆಕ್ರಮಣ ನಡೆಸಿದ್ದಾರೆ. ಇಲ್ಲಿಯೂ ಮಾಧ್ಯಮಗಳ ಪಾತ್ರ ಪ್ರಶ್ನಾರ್ಹವಾಗಿದೆ. ಮಹಿಳೆಯರನ್ನು ವಿವಸ್ತ್ರಗೊಳಿಸಿ, ಅವರ ಮೇಲೆ ಹಲ್ಲೆ ನಡೆಸಿ ಹಿಗ್ಗಾಮುಗ್ಗಾ ಥಳಿಸುವುದನ್ನು ಟಿವಿ ಧಾರಾವಾಹಿಯಂತೆ ಚಿತ್ರಿಸಿರುವ ಮಾಧ್ಯಮ ಛಾಯಾಗ್ರಾಹಕರು, ಗೌಹಾತಿಯ ಸಾರ್ವಜನಿಕರಷ್ಟೇ ನಿಷ್ಕ್ರಿಯ, ನಿರ್ಭಾವುಕ, ನಿರ್ದಾಕ್ಷಿಣ್ಯ ಪುರುಷರಂತೆ ಕಾಣುತ್ತಾರೆ. ಅಚ್ಚರಿಯ ಅಂಶವೆಂದರೆ ಈ ಘಟನೆಯನ್ನು ತನಿಖೆ ನಡೆಸಿದ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರೂ ಹಲ್ಲೆ ನಡೆಸಿದ ದುಷ್ಕರ್ಮಿಗಳನ್ನು ದೂಷಿಸದೆ, ಮಹಿಳೆಯರು ಬಾರ್‌ಗಳಲ್ಲಿ, ಪಾರ್ಟಿಗಳಲ್ಲಿ, ಮೋಜು ಮಸ್ತಿಯಲ್ಲಿ ತೊಡಗುವುದೇ ಅಪರಾಧ ಎಂಬಂತೆ ವರದಿ ಸಲ್ಲಿಸಿದ್ದಾರೆ. ಒಂದು ಪುರುಷ ಪ್ರಧಾನ ವ್ಯವಸ್ಥೆಯ ಪ್ರಭುತ್ವದಲ್ಲಿ ಆಡಳಿತ ಯಂತ್ರಗಳೂ ಹೇಗೆ ಮಹಿಳಾ ವಿರೋಧಿಯಾಗಿರುತ್ತವೆ, ಸಂವೇದನಾರಹಿತ ವಾಗಿರುತ್ತವೆ ಎಂದು ರಾಜ್ಯ ಮಹಿಳಾ ಆಯೋಗ ಸ್ಪಷ್ಟವಾಗಿ ನಿರೂಪಿಸಿದೆ. ಇಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಕ್ಕಿಂತಲೂ, ಮಹಿಳೆಯರು ಧರಿಸುವ ಉಡುಪು, ಭಾಗವಹಿಸುವ ಚಟುವಟಿಕೆಗಳು, ಸಾರ್ವಜನಿಕ ವಲಯದಲ್ಲಿ ನಡೆದುಕೊಳ್ಳುವ ರೀತಿ ಇವುಗಳೇ ಅಪರಾಧಗಳಂತೆ ಕಾಣುತ್ತಿರುವುದು ಸ್ವತಂತ್ರ ಭಾರತದ ವಿಡಂಬನೆಯಲ್ಲವೇ? ಧರ್ಮ ಸಂಸ್ಥಾಪನೆಗಾಗಿಯೇ ಜನಿಸಿರುವ ಮತೀಯವಾದಿಗಳು ಮಹಿಳೆಯರನ್ನು ನಿಯಂತ್ರಿಸುವುದೇ ಧರ್ಮ ರಕ್ಷಣೆ ಎಂದು ಭಾವಿಸಿದ್ದರೆ, ಭಾರತದ ಮತ್ತೊಂದು ಅನಿಷ್ಟ ಜಾತಿ ವ್ಯವಸ್ಥೆಯನ್ನು ನಿಯಂತ್ರಿಸುವ ಪುರುಷ ಪ್ರಧಾನ ಸಮಾಜವೂ ತಮ್ಮ ಸಾಮುದಾಯಿಕ ಸಂಪ್ರದಾಯ ಮತ್ತು ಪರಂಪರೆಗಳನ್ನು



ರಕ್ಷಿಸುವ ಹೊಣೆಗಾರಿಕೆಯನ್ನು ಮಹಿಳೆಯರ ಮೇಲೇ ಹೊರಿಸಿದ್ದಾರೆ. ಒಂದೆಡೆ ಜಾತಿ ಖಾಪ್ ಪಂಚಾಯತ್‌ಗಳು ಅಂತರ್‌ಜಾತಿ ವಿವಾಹವಾಗುವ ಮಹಿಳೆಯರನ್ನು ಸಾಮುದಾಯಿಕ ಗೌರವ ರಕ್ಷಿಸುವ ನೆಪದಲ್ಲಿ ಹತ್ಯೆ ಮಾಡುತ್ತಿದ್ದರೆ ಮತ್ತೊಂದೆಡೆ ಪ್ರಜಾಪ್ರಭುತ್ವ ವ್ಯವಸ್ಥೆಯ ಆಧಾರ ಸ್ತಂಭಗಳಾದ ಪಂಚಾಯತ್‌ಗಳು ಮಹಿಳೆಯರ ಚಲನವಲನಗಳನ್ನೇ ನಿಯಂತ್ರಿಸುತ್ತಿವೆ. ಮೊಬೈಲ್ ಬಳಸುವಂತಿಲ್ಲ, ಷಾಪಿಂಗ್ ಮಾಲ್‌ಗೆ ಹೋಗುವಂತಿಲ್ಲ. ರಾತ್ರಿ ಹತ್ತರ ನಂತರ ಒಬ್ಬರೇ ಹೊರ ಬರುವಂತಿಲ್ಲ. ತುಂಡುಡುಗೆಗಳನ್ನು ಧರಿಸುವಂತಿಲ್ಲ ಹೀಗೆ ನಿಷೇಧಗಳ ಪಟ್ಟಿಯನ್ನೇ ಪಂಚಾಯತ್‌ಗಳು ಸಿದ್ಧಪಡಿಸುತ್ತಿವೆ. ಈ ನಿಯಮಗಳನ್ನು ಅನುಮೋದಿಸುವ ಚುನಾಯಿತ ಪ್ರತಿನಿಧಿಗಳು ಪ್ರಶ್ನಾತೀತರಾಗಿ ಮೆರೆಯುತ್ತಾರೆ. ಸಾಂವಿಧಾನಿಕ ಸಂಸ್ಥೆಗಳೇ ದೌರ್ಜನ್ಯ, ಹಲ್ಲೆ, ಆಕ್ರಮಣ ಮತ್ತು ಮಾನಭಂಗಕ್ಕೊಳಗಾದ ಮಹಿಳೆಯರ ಕೌಟುಂಬಿಕ ಹಿನ್ನೆಲೆ ಮತ್ತು ಚಾರಿತ್ರ್ಯವನ್ನು ಪ್ರಶ್ನಿಸುತ್ತಿರುವುದನ್ನು ನೋಡಿದರೆ ಮತೀಯವಾದಿಗಳು, ಖಾಪ್ ಪಂಚಾಯತ್‌ಗಳು ಯಾವುದೋ ಒಂದು ವ್ಯವಸ್ಥಿತ ಚೌಕಟ್ಟಿನೊಳಗೆ ಕಾರ್ಯ ನಿರ್ವಹಿಸುತ್ತಿರುವುದು ಸ್ಪಷ್ಟವಾಗುತ್ತದೆ. ಮಾದಕ ದ್ರವ್ಯ ಸೇವಿಸುವುದು, ಮದ್ಯಪಾನ ಮಾಡುವುದು, ಅಶ್ಲೀಲವಾಗಿ ವರ್ತಿಸುವುದು ಸಾಮಾಜಿಕ ಮೌಲ್ಯಗಳ ದೃಷ್ಟಿಯಿಂದ ಒಳಿತಲ್ಲ ನಿಜ. ಆದರೆ ಈ ಮೌಲ್ಯಗಳ ಮಾನದಂಡವಾದರೂ ಏನು? ಈ ದುಶ್ಚಟಗಳು ಮಾನವ ಕುಲಕ್ಕೇ ಅಂಟಿದ ಶಾಪಗಳು. ಆದರೆ ನಮ್ಮ ಪಿತೃ ಪ್ರಧಾನ ಸಮಾಜದಲ್ಲಿ ಪುರುಷರಿಗೆ ಈ ದುಷ್ಚಟಗಳನ್ನು ಹೊಂದಿರಲು ಅಧಿಕೃತ ಪರವಾನಗಿ ನೀಡಲಾಗಿದೆ. ಮಹಿಳೆಯರು ಮಾತ್ರ ನಿಷೇಧ ಎದುರಿಸುತ್ತಾರೆ. ಪುರುಷರು ತಮ್ಮ ಕಾಮನೆಗಳನ್ನು ನಿಗ್ರಹಿಸಲು ಮಹಿಳೆಯರು ಸಹಕಾರ ನೀಡುವುದು ಸಮಾಜದಲ್ಲಿ ಅನಿವಾರ್ಯವೇನೋ ಎಂಬಂತೆ ತುಂಡುಡುಗೆ ಧರಿಸುವವರನ್ನು ದಂಡಿಸುವ ಪರಿಪಾಠ ಆರಂಭವಾಗಿದೆ. ಯಾವುದೇ ಮಹಿಳೆ ಅತ್ಯಾಚಾರಕ್ಕೊಳಗಾದ ಕೂಡಲೇ ಆಕೆ ಧರಿಸಿದ ಉಡುಪು ಪ್ರಧಾನ ಚರ್ಚೆಯ ವಿಚಾರವಾಗುತ್ತದೆಯೇ ಹೊರತು, ಪುರುಷರ ಕಾಮಾಸಕ್ತಿ ಅಥವಾ ಮನೋನಿಗ್ರಹಗಳು ಚರ್ಚೆಗೊಳಪಡುವುದಿಲ್ಲ. ದೃಶ್ಯ ಮಾಧ್ಯಮಗಳ ಸಂವಾದಗಳಲ್ಲಿ ಇದನ್ನು ಸ್ಪಷ್ಟವಾಗಿ ಕಾಣಬಹುದು. ವೇಶ್ಯಾವಾಟಿಕೆಯಲ್ಲಿ ತೊಡಗುವ ಮಹಿಳೆಯರನ್ನು ವ್ಯಭಿಚಾರಿಗಳೆಂದು ಕಪ್ಪು ಮಸಿ ಬಳಿಯುವ ಪುರುಷ ಸಮಾಜ ತನ್ನೊಳಗೇ ಇರುವ ವ್ಯಭಿಚಾರವನ್ನು ಮರೆಮಾಚಲು ಇಂತಹ ಆಕ್ರಮಣಗಳನ್ನು, ನಿಷೇಧಗಳನ್ನು, ನಿರ್ಬಂಧಗಳನ್ನು ಬ್ರಹ್ಮಾಸ್ತ್ರವನ್ನಾಗಿ ಬಳಸುತ್ತಿದೆ. ಈ ಬ್ರಹ್ಮಾಸ್ತ್ರಕ್ಕೆ ಧರ್ಮ, ಜಾತಿ, ಸಂಸ್ಕೃತಿ ಮತ್ತು ಸಮಾಜದ ಗೌರವದ ಲೇಪನ ನೀಡಲಾಗುತ್ತಿದೆ. ಹೆಣ್ಣು ಭ್ರೂಣ ಹತ್ಯೆ, ಹೆಣ್ಣು ಶಿಶು ಹತ್ಯೆ, ಹೆಣ್ಣು ಮಕ್ಕಳ ನಿರ್ಲಕ್ಷ್ಯ, ವರದಕ್ಷಿಣೆ ಸಾವುಗಳು, ಅತ್ಯಾಚಾರ, ಮಾನಭಂಗ, ವೇಶ್ಯಾವಾಟಿಕೆ, ಹೆಣ್ಣುಮಕ್ಕಳ ಮಾರಾಟ ಹೀಗೆ ದೇಶದ ಬಹುತೇಕ ಬೃಹತ್ ಸಮಸ್ಯೆಗಳು ಮಹಿಳೆಯನ್ನೇ ಆವರಿಸಿವೆ. ಇಂದಿನ ಸನ್ನಿವೇಶದಲ್ಲಿ ಮಹಿಳೆಯರ ವಿರುದ್ಧ ನಡೆಯುತ್ತಿರುವ ಶೋಷಣೆ, ದೌರ್ಜನ್ಯಗಳನ್ನು ಗಮನಿಸಿದರೆ, ಭ್ರೂಣ ಹತ್ಯೆಗೊಳಗಾದ ಹೆಣ್ಣು ಜೀವಿಗಳೇ ಪುಣ್ಯವಂತರೇನೋ ಎನಿಸಿದರೂ ಅಚ್ಚರಿಯೇನಿಲ್ಲ. ಅಲ್ಲವೇ?

❑ ನಾ.ದಿವಾಕರ್

ಕೃಪೆ: ಅವಧಿ

# ನೇಸರ

ಚಿಲಿಪಿಲಿ ಕಲರವ ಹಕ್ಕಿಗಳ ಸಿಂಚನ
ತಂಪೆರ ಸೂಸುವ ತಂಗಾಳಿ ಕಂಪನ
ಮುಸುಕಿನಲಿ ಕಾವಳದ ರಂಜನ
ಸವಿಯಲು ಮನಸಾಗಿ ಕಂಡ ರೋಮಾಂಚನ
ಮಬ್ಬಾದ ದಿನಕರನ ನಡುವಿನಲಿ ಕಾರ್ಮೋಡ
ಕಿತ್ತಳೆಯ ಬಣ್ಣದ ರಶ್ಮಿಯಲಿ
ಆಗೊಮ್ಮೆ ಈಗೊಮ್ಮೆ ಎಲೆಗಳ ನಡುವೆ
ತಂಪೆರಗುವ ಕಿರುನೋಟದ ಕಿರಣಗಳು
ಹುಲ್ಲು ಹಾಸಿಗೆಯ ಮೇಲಿನ ಇಬ್ಬನಿಯ
ಹೊಳಪು ಕಾಮನ ಬಿಲ್ಲಿನ ಬಣ್ಣಗಳ
ರಂಗಾಯಣವ ಮೀರುವ ತುಣುಕು
ಹಸಿರು ಸೀರೆಯನ್ನುಟ್ಟು ಬೆಳ್ಳಿ ಬುಟ್ಟವ
ನಿಟ್ಟ ಕೇಸರಿಯ ಹೊಳಪನು ತೊಟ್ಟು
ಭೂ ತಾಯಿಯ ಸೊಬಗನ್ನು
ಮುಂಜಾವಿನ ಮುಸುಕಿನಲಿ ದಿಟ್ಟ
ದೃಷ್ಟಿಯಲಿ ನೋಡಲು ಸ್ವರ್ಗ ಕನ್ನಿಕೆಯರೇ
ನರ್ತಿಸಿದಂತಾಗುತ್ತದೆ. ಜನ್ಮ ಸಾರ್ಥಕ
ಸೃಷ್ಟಿ ಕರ್ತನ ಸೃಷ್ಟಿಗೆ ಸವಾಲೆನಿಸುತ್ತದೆ.

ಹುಚ್ಚು ಮನಸಿನ ಹತ್ತು ಮುಖಗಳೇ
ಒಮ್ಮೆ ಈ ನೇಸರನ ಸೊಬಗನ್ನು
ಆನಂದಿಸಿ ನಿತ್ಯ ನೂತನದ ಪರಿಯನ್ನು
ಗರಿಗರಿಯಾಗಿ ಚಿತ್ತರಿಸುವ ಆದಿತ್ಯನನ್ನು
ಆಹ್ಲಾದಿಸಿ, ವಿಕೃತ ಕೃತ್ಯ ಎಸಗುವ ಮುನ್ನ
ಕಣ್ಣು ಮುಚ್ಚಿ ಈ ದೃಶ್ಯ ಮೆಲುಕು ಹಾಕಿರಿ
ಮನಕೆ, ದೇಹಕೆ, ಸಂತಸ ನೀಡಿ
ಹೊಸ ಚೇತನಕೆ ಪ್ರೇರಣೆಯಾಗಿ

❑ ಲಾವಣ್ಯ ಬಸವರಾಜ್

# ರೈತ ಗೀತೆ

ಭೂ ತಾಯ ನಮಿಸಿ
ಬೆವರನ್ನು ಸುರಿಸಿ
ನೀರನ್ನು ಹರಿಸಿ
ಬೆಳೆಯನ್ನು ಬೆಳೆಸಿ
ನಮ್ಮ ಹಸಿವನ್ನು ನೀಗಿಸಿದ ಓ ರೈತರೆ, ಅನ್ನದಾತರೇ
ನೀವು ಭೂದೇವಿ ಪುತ್ರರು ನಾವು ನಿಮ್ಮ ಮಿತ್ರರು
ನಿಮಗೆ ನಮ್ಮ ವಂದನೆ – ನಿಮಗೆ ನಮ್ಮ ವಂದನೆ

ಈ ಮಣ್ಣಲ್ಲೆ ಹುಟ್ಟಿ
ಮಣ್ಣಲ್ಲೆ ಬೆಳೆದು
ಈ ಮಣ್ಣಿಂದ ಮನುಕುಲಕೆ ಅನ್ನವ ನೀಡಿದ ಓ ರೈತರೆ, ಅನ್ನದಾತರೇ
ನೀವು ಭೂ ತಾಯಿ ಪುತ್ರರು ನಾವು ನಿಮ್ಮ ಮಿತ್ರರು
ನಿಮಗೆ ನಮ್ಮ ವಂದನೆ–ನಿಮಗೆ ನಮ್ಮ ವಂದನೆ

ಬಿಸಿಲಲಿ ಬೆಂದು
ಮಳೆಯಲ್ಲಲಿ ನೆಂದು
ಕೆಸರಲಿ ಮಿಂದು
ಬೆಳೆಯನು ತಂದು ಓ ರೈತರೇ ಅನ್ನದಾತರೇ
ನೀವು ಈ ಧರಣಿ ಪುತ್ರರು ನಾವು ನಿಮ್ಮ ಮಿತ್ರರು
ನಿಮಗೆ ನಮ್ಮ ವಂದನೆ–ನಿಮಗೆ ನಮ್ಮ ವಂದನೆ

ನಮ್ಮ ಜೊತೆ ಬೆರೆತು
ನಿಮ್ಮ ಕಷ್ಟ ಮರೆತು
ಸುಗ್ಗಿ ಹಾಡ ಹಾಡಿ
ಹುಗ್ಗಿ ಊಟ ಮಾಡಿದ ಓ ರೈತರೆ ಅನ್ನದಾತರೇ
ನೀವು ಭಾರತಾಂಬೆ ಪುತ್ರರು ನಾವು ನಿಮ್ಮ ಮಿತ್ರರು
ನಿಮಗೆ ನಮ್ಮ ವಂದನೆ–ನಿಮಗೆ ನಮ್ಮ ವಂದನೆ

❑ ಟಿ. ವಿಜಯಕುಮಾರ್ ಎಂ.ಎ.

# ಅಕ್ಕರೆಯ ಅಮ್ಮಯ್ಯ–ನೇತ್ರಾವತಿ ಮಯ್ಯ



"ಅಮ್ಮಾ.. ನಿನ್ನ ಎದೆಯಾಳದಲ್ಲಿ
ಗಾಳಕ್ಕೆ ಸಿಕ್ಕ ಮೀನು..
ಮಿಡುಕಾಡುತಿರುವೆ ನಾನು..."

ಕವಿ ಬಿ.ಆರ್.ಲಕ್ಷ್ಮಣ್ ರಾವ್ ಅಮ್ಮನ ಬಗ್ಗೆ ಬರೆದ ಈ ಹಾಡನ್ನು ಕೇಳಿ ರೋಮಾಂಚನಗೊಳ್ಳದ ಹೆಣ್ಣೇ ಇಲ್ಲವೆನ್ನಬಹುದು. ಎದೆಯಾಳದಿಂದ ಅಮ್ಮನ ನೆನಪನ್ನು ಮೀಟಿ ಕಣ್ಣ ಕೊನೆ ಹನಿಯುವಂತೆ, ಹಾಗೆ ಗಂಟಲ ಸೆರೆಯುಬ್ಬಿ ನೋವೊಂದು ಬಿರಿವಂತೆ, ನೋವೊಂದು ನೆನೆವಂತೆ ಕರುಳನ್ನೇ ಹಿಂಡಿಬಿಡುತ್ತದೆ ಅಮ್ಮನ ನೆನಪು. ವಿಶ್ವ ಮಹಿಳಾ ದಿನಾಚರಣೆಯ ದಿನ ತಟ್ಟನೆ ನೆನಪಾಗುವುದು ಅಮ್ಮನ ಹೃದಯವಂತಿಕೆ, ಅಂತಃಕರಣವೇ ಮೂರ್ತಿವೆತ್ತ ಪುಟ್ಟ ಮೂರ್ತಿ ನೇತ್ರಾವತಿ ಮಯ್ಯ ಅವರದು. ಎಂಬತ್ತೆರಡರ ಹರೆಯದ ನೇತ್ರಾವತಿ ಮಯ್ಯ ದೆಹಲಿಯ ಹಿರಿಯ ಕನ್ನಡತಿಯಾಗಿ ತಮ್ಮ ನಿಷ್ಕಾಮ ಪ್ರೀತಿ, ವಾತ್ಸಲ್ಯದಿಂದ ಎಲ್ಲರನ್ನೂ ತಮ್ಮೆಡೆ ಸೆಳೆಯಬಲ್ಲರು. ಸದಾ ಹಸನ್ಮುಖಿ ಅಮ್ಮ ನಮಗೆಲ್ಲ ಪ್ರಾತಃಸ್ಮರಣೀಯರು. ಅವರ ಹೃದಯ ವೈಶಾಲ್ಯತೆ, ಅವರು ಇವರು ಎಂದು ಭೇದಭಾವ ತೋರದ ನಿಷ್ಕಪಟ ನಡವಳಿಕೆಗೆ ತಲೆಬಾಗಿ ನಮಸ್ಕರಿಸಬೇಕು ಅನ್ನಿಸುತ್ತದೆ. ಅಷ್ಟೇ ಅಲ್ಲದೆ ದೆಹಲಿ ಕರ್ನಾಟಕ ಸಂಘದ ಭವ್ಯ ಕಟ್ಟಡಕ್ಕೆ ತುಂಬು ಹೃದಯದಿಂದ ದಾನ ನೀಡಿದವರಲ್ಲಿ ಅವರ ಹೆಸರು ಮೊದಲಿಗೆ ನೆನೆಯಬೇಕು.

ನೇತ್ರಾವತಿ ಮಯ್ಯ ಅವರು ಈಗ ಕಾಸರಗೋಡಿಗೆ ಸೇರಿಹೋದ ಮಂಗಲಪಾಡಿಯ ಮಾನಿಹಿತ್ಲು ಎಂಬಲ್ಲಿ 1933 ರಲ್ಲಿ ಜನಿಸಿದರು. ಮಂಗಲಪಾಡಿಯ ಪ್ರಾಥಮಿಕ ಶಾಲೆಯಲ್ಲೇ ಓದಿದ ನೇತ್ರಾವತಿ ಮುಂದೆ ಕುಂಬಳೆಯಲ್ಲಿ ಬೋರ್ಡ್ ಹೈಸ್ಕೂಲಿನಲ್ಲಿ ಎಂಟನೆ ಕ್ಲಾಸಿನವರೆಗೂ ಓದಿದರಂತೆ. ಆಗಿನ ಕಾಲದಲ್ಲಿ ಹೆಣ್ಣುಮಕ್ಕಳು ಓದುವುದೇ ಒಂದು ದೊಡ್ಡ ಪಾಪವೆಂದುಕೊಳ್ಳುವ ಸಮಾಜ. ಅದೆಲ್ಲವನ್ನು ಮೀರಿ ತಂದೆ–ತಾಯಿಯರು ತಮ್ಮ ಮನೆಯ ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಿದರೂ, ಶಾಲೆಗೆ ಹೋಗಿದ್ದಾಯಿತು ಇನ್ನು ಪರೀಕ್ಷೆ ಯಾಕೆ ? ಎನ್ನುವ ಪುರುಷ ದಬ್ಬಾಳಿಕೆಯ ವಿರೋಧದಲ್ಲಿ ಶಾಲೆಗೆ ಹೋದರೂ ಪರೀಕ್ಷೆ ಕಟ್ಟಬಾರದು ಎನ್ನುವ ಕಟ್ಟುಪಾಡುಗಳಿದ್ದು ಯಾವ ಹೆಣ್ಣುಮಕ್ಕಳೂ ಪರೀಕ್ಷೆಗೆ ಕೂಡುತ್ತಿರಲೇ ಇಲ್ಲವಂತೆ. ಅಂತೆಯೇ ನೇತ್ರಾವತಿ ಅವರ ವಿದ್ಯಾಭ್ಯಾಸವೂ ಅಲ್ಲಿಗೆ ಕೊನೆಗೊಂಡಿತು. ಅವರ ಶಾಲಾ ದಿನಗಳಲ್ಲಿ ಕನ್ನಡದ ಪ್ರಮುಖ ಕವಿಗಳಲ್ಲಿ ಒಬ್ಬರಾದ, ಕನ್ನಡದ ಮೊದಲ 'ರಾಷ್ಟ್ರಕವಿ' ಎಂಬ ಗೌರವಕ್ಕೆ ಪಾತ್ರರಾದ ಶ್ರೀ ಮಂಜೇಶ್ವರ ಗೋವಿಂದ ಪೈ ರವರು ಆಗಾಗ ನೇತ್ರಾವತಿ ಅವರ ಮಂಗಲಪಾಡಿಯ ಶಾಲೆಗೆ ಬರುತ್ತಿದ್ದರಂತೆ. ಹಾಗೆ ಬಂದಾಗೆಲ್ಲ ರಾಷ್ಟ್ರಪ್ರೇಮವನ್ನು ಮಕ್ಕಳಲ್ಲಿ ಬಿತ್ತುವಂತ ಕವಿತೆಗಳನ್ನು ಮಕ್ಕಳಿಂದಲೇ ಓದಿಸಿ, ಹಾಡಿಸುತ್ತಿದ್ದರೆಂದು ನೇತ್ರಾವತಿ ಅಮ್ಮ ಆಪ್ಯಾಯತೆಯಿಂದ ನೆನೆಯುತ್ತಾರೆ. ತುಳು–ಕೊಂಕಣಿ–ಮಲೆಯಾಳ ಭಾಷಾ ಸಮುದಾಯಗಳ ಮಧ್ಯೆ ಹುಟ್ಟಿ ಬೆಳೆದರೂ, ಕನ್ನಡ ಅಭಿಮಾನವನ್ನು ತಮ್ಮ ಸಾಹಿತ್ಯಿಕ–ಸಾಂಸ್ಕೃತಿಕ ಸಂಶೋಧನೆಗಳ ಮೂಲಕ ಮೆರೆದ ಕವಿ ಗೋವಿಂದ ಪೈ ಅವರಂಥ ಮಹಾನ್ ಚೇತನರ ಮಧ್ಯೆ ನೇತ್ರಾವತಿ ಅವರ ಬಾಲ್ಯ ಕಳೆದುದು, ಅಂಥವರಿಂದ ಪ್ರಭಾವಿತರಾದುದು ಈ ಜನ್ಮದ ಪುಣ್ಯವೆನ್ನಬೇಕು. ಗೋವಿಂದ ಪೈ ಅವರು ನೇತ್ರಾವತಿ ಅವರ ತಂದೆಯ ಗೆಳೆಯರಾಗಿದ್ದರಂತೆ. ಸ್ವಾತಂತ್ರ್ಯಪೂರ್ವದ ಚಳುವಳಿಗಳಲ್ಲಿ ಇವರ ಮನೆತನದ ಹಿರಿಯರೂ ಸಕ್ರಿಯರಾಗಿ ಭಾಗವಹಿಸಿದ್ದರಂತೆ. ತಂದೆ ಶಂಕಣ್ಣಯ್ಯ ಊರಿನ ಶ್ಯಾನುಭೋಗರಾಗಿದ್ದರಂತೆ. ಹಿಂದೆ ಇವರ ಪೂರ್ವಜರು ರಾಣಿ ಅಬ್ಬಕ್ಕನ ಆಸ್ಥಾನದಲ್ಲಿ ಪೂಜೆ ಮಾಡುತ್ತಿದ್ದರಂತೆ. ಬ್ರಿಟಿಷರೊಡನೆ ಯುದ್ಧದಲ್ಲಿ ಅಸಂಖ್ಯಾತ ಆಸ್ಥಾನಿಗರು ಜೀವವುಳಿಸಿಕೊಂಡು ದಕ್ಷಿಣಕ್ಕೆ ವಲಸೆ ಹೋದರಂತೆ. ಹೀಗೆ ಮಂಗಲಪಾಡಿಗೆ (ಈಗಿನ ಕೇರಳಕ್ಕೆ ಸೇರಿಹೋದ) ಬಂದು ನೆಲೆಸಿದ ಕುಟುಂಬವಿದು. ಮುಂದೆ ಮಹಾತ್ಮಾ ಗಾಂಧಿಜೀ ಅವರ ಕಾಲಕ್ಕೆ ಪಕ್ಕಾ ಗಾಂಧೀವಾದಿ ಮತ್ತು ಗಾಂಧೀಜಿಯವರ ನಿಕಟವರ್ತಿಯಾಗಿದ್ದ ಆಚಾರ್ಯ ವಿನೋಭಾ ಭಾವೆ ಅವರು ಭೂದಾನ ಚಳುವಳಿಯನ್ನು ಆರಂಭಿಸಿದ್ದಾಗ ತಮ್ಮ ಭಾಗದ ಹತ್ತು ಹನ್ನೆರಡೆಕರೆಯ ಜಮೀನನ್ನು ನೇತ್ರಾವತಿ ತಂದೆ ಶಂಕಣ್ಣಯ್ಯ ಆಚಾರ್ಯರಿಗೆ ಬಿಟ್ಟುಕೊಟ್ಟಿದ್ದರಂತೆ. ಅದೇ ಭೂಮಿಯನ್ನು ಅವರ ಮನೆಯಲ್ಲೇ ಕೆಲಸ ಮಾಡಿಕೊಂಡಿದ್ದ ಆಳು 'ಪುತ್ತೂರ'ನಿಗೆ ದಾನವಾಗಿ ಕೊಡಿಸಲಾಯಿತಂತೆ. ಈಗಲೂ ಅದೇ ಜಮೀನಿನಲ್ಲಿ ಅವನ ಕುಟುಂಬ ಬಾಳಿ ಬೆಳಗುತ್ತಿದೆಯೆಂಬುದನ್ನು ನೇತ್ರಾವತಿ ನೆನೆಯುತ್ತಾರೆ. ವಿನೋಭಾ ಭಾವೆ ಅವರು ದೇಶದಾದ್ಯಂತ ಪಾದಚಾರಿಯಾಗೇ ನಡೆಯುತ್ತಾ 'ಭೂದಾನ ಚಳವಳಿ'ಯ ಮೂಲಕ ಲಕ್ಷಾಂತರ ಎಕರೆ ಜಮೀನನ್ನು ಬಡವರಿಗೆ ದಾನವಾಗಿ ಕೊಡಿಸಿದರು. ತಮಗಾಗಿ ಏನನ್ನೂ ಬಯಸಲಿಲ್ಲ. ದೇಶಕ್ಕಾಗಿ, ಧರ್ಮಕ್ಕಾಗಿ ದುಡಿಯುವ ಕಾರ್ಯಕ್ಷಮತೆಯ ವಿನೋಭಾ ಭಾವೆ, ಗೋವಿಂದ ಪೈ, ಕಯ್ಯಾರ ಕಿಞ್ಞಣ್ಣ ರೈ ಮುಂತಾದ ದೇಶಭಕ್ತರ ಗಾಢ ಪ್ರಭಾವವನ್ನು ನಾವು ನೇತ್ರಾವತಿ ಮಯ್ಯ ಅವರ ಸಮಗ್ರ ವ್ಯಕ್ತಿತ್ವದಲ್ಲಿ, ಜೀವನ ರೀತಿ–ನೀತಿಯಲ್ಲಿ, ಪರರಿಗಾಗಿ ಮಿಡಿಯುವ ಅಂತಃಕರಣದಲ್ಲಿ, ಹಾಗೆ ಬಾಳಿ ಬದುಕುವ ಬದುಕಿನ ಅನನ್ಯತೆಯಲ್ಲಿ ನಿಚ್ಚಳವಾಗಿ ಕಾಣುತ್ತೇವೆ.

ಮುಂದೆ ಭಾರತ ಸರ್ಕಾರದ ನೌಕರಿಯಲ್ಲಿರುವ ಶೇಷಪ್ಪಯ್ಯನವರೊಂದಿಗೆ ನೇತ್ರಾವತಿ ಮದುವೆಯಾದರು. ಮದ್ರಾಸಿನ ಸಿಬಿಐ ನಲ್ಲಿದ್ದ ಶೇಷಪ್ಪಯ್ಯ ಅವರನ್ನು ಬೆಂಗಳೂರಿನಲ್ಲಿ ತಮ್ಮ ಸಿಬಿಐ ಶಾಖೆಯನ್ನು ತೆರೆಯುವ ಕಾರಣದಿಂದ ಸ್ಥಳಾಂತರಿಸಿದರಂತೆ. ಅಲ್ಲೊಂದು ಹತ್ತು ಹನ್ನೆರಡು ವರ್ಷ ಕಳೆದ ನೇತ್ರಾವತಿ –ಶೇಷಪ್ಪಯ್ಯ ಸಂಸಾರ ಮುಂಬೈಗೆ ವರ್ಗಾಯಿಸಿತು. ಮುಂಬೈಯಲ್ಲಿ ಶಿವಸೇನೆಯ ಹಾವಳಿ ಹೆಚ್ಚಾಗಿದ್ದು ಅಲ್ಲೊಂದು ಶಾಖೆಯನ್ನು ತೆರೆಯಲು ಶೇಷಪ್ಪಯ್ಯ ಕುಟುಂಬ ಅಲ್ಲಿಗೆ ವಲಸೆಹೋಯಿತು. ಮುಂದೆ ಕಲ್ಕತ್ತದಲ್ಲಿ ನಕ್ಸಲೀಯರ ದಂಗೆ–ಕೊಲೆ–ಸುಲಿಗೆಗಳು ಹೆಚ್ಚಾಗಿ ಸಿಬಿಐ ಉಪಶಾಖೆಯನ್ನು ವ್ಯವಸ್ಥಿತಗೊಳಿಸುವುದಕ್ಕಾಗಿ ಅಲ್ಲಿಗೂ ಹೋದರು. ಅಲ್ಲಿನ ಬದುಕು ಎಲ್ಲಕ್ಕಿಂತ ಭೀಕರವಾಗಿತ್ತು. ಒಬ್ಬೊಬ್ಬರೇ ಓಡಾಡುವ ಭಯ. ನಕ್ಸಲೀಯರ ದಾಳಿಗೆ ತುತ್ತಾದವರ, ಹೌರಾ ಸೇತುವೇ ಮೇಲೆ ಸತ್ತು ಬಿದ್ದ ಹೆಣಗಳ ರಾಶಿಯನ್ನು ನೋಡಿ ಜೀವದ ಅಪಾಯದಲ್ಲೇ ದಿನ ದೂಡುವಂತ ಭೀತ ಬದುಕು ಕಳೆಯುತ್ತಿತ್ತು. 1980 ರಲ್ಲಿ ದೆಹಲಿಗೆ ವಲಸೆ ಬಂದ ಶೇಷಪ್ಪಯ್ಯ ಮತ್ತು ನೇತ್ರಾವತಿ ಅಮ್ಮ ಇಲ್ಲಿಯೇ ನೆಲೆಯೂರಿದರು. ನಾನು ಅವರನ್ನು ಕಂಡದ್ದು ಆರ್.ಕೆ.ಪುರಂ ಸೆಕ್ಟರ್ ಐದರ ಸರಕಾರಿ ಕ್ವಾರ್ಟರ್ಸ್‌ನಲ್ಲಿ. ಆರ್.ಕೆ. ಪುರಂ ವಾಸಿ ಸುಳ್ಯದ ನನ್ನ ಆಪ್ತ ಗೆಳತಿ ಶಶಿಕಲಾ ನಾವಡ ಹಾಗೂ ಪುಟ್ಟ ಮಗಳು ದಿವ್ಯಾ ಅವರ ಮನೆಗೆ ನಾನು ನನ್ನ ಪುಟ್ಟ ಮಗುವನ್ನು ಕರೆದುಕೊಂಡು ಹೋಗಿದ್ದೆ. ನಾವಡರು ಅವರಿಗೆ ಸಂಬಂಧಿಕರು. ದಿವ್ಯಾಗಳಿಗಾಗಿ ನೇತ್ರಾವತಿ ಅಮ್ಮ ವಿಧವಿಧದ ತಿಂಡಿ–ತಿನಿಸು, ಕೋಡುಬಳೆ, ಚಕ್ಕುಲಿ ಇತ್ಯಾದಿ ನಮಕೀನ್ ಮಾಡಿಡುತ್ತಿದ್ದರು. ಇಲ್ಲ ಮನೆಗೆ ಕಳಿಸುತ್ತಿದ್ದರು. ಅತಿಥಿಗಳನ್ನು ಬರಮಾಡಿಕೊಳ್ಳುವ ಅವರ ಸಂಭ್ರಮದ ಪರಿ ಕೇಳುವುದೇ ಬೇಡ. ಆಗ ನೋಡಿದ ನಾನು ಮತ್ತೆ ಅವರನ್ನು ಕಂಡಿದ್ದು ದೆಹಲಿ ಕರ್ನಾಟಕ ಸಂಘದ ಉದ್ಘಾಟನಾ ಕಾರ್ಯಕ್ರಮದಲ್ಲಿ. ಇರುವ ಇಬ್ಬರು ವಯಸ್ಕ ಹೆಣ್ಣು ಮಕ್ಕಳನ್ನು ಕಳೆದುಕೊಂಡ ದಂಪತಿಗಳು ನೋವನ್ನು ನುಂಗಿ ಬದುಕು ಸಾಗಿಸುತ್ತಿದ್ದರು. ಮುಂದೆ ಶೇಷಪ್ಪಯ್ಯ ಅವರೂ ತೀರಿಹೋದಮೇಲೆ ನೇತ್ರಾವತಿ ಮಯ್ಯ ಏಕಾಂಗಿಯಾಗಿ ಸಾಮಾಜಿಕ ಕಾರ್ಯ, ಧಾರ್ಮಿಕ ಕಾರ್ಯಗಳಿಗೆ ತಮ್ಮಿಂದಾದ ಸಹಾಯ , ಸೇವೆ ಸಲ್ಲಿಸುತ್ತ ಎಲ್ಲರಿಗೂ ಬೇಕಾದವರಾಗಿ, ಕಲ್ಲರಳಿ ಹೂವಾಗಿ ಎಲ್ಲರಿಗೂ ಬೇಕಾಗಿ... ಮಲ್ಲಿಕಾರ್ಜುನನ ಶಿಖರಕ್ಕೆ ಬೆಳಕಾಗಿ ಎಂಬಂತಿದೆ ಅವರ ಬದುಕಿನ ಹಾದಿಯ ಬೆಳಕು.

ದೆಹಲಿಯಲ್ಲಿ ಮದ್ರಾಸ್ ಹೊಟೇಲನ್ನು ತೆರೆದು ಉತ್ತರಭಾರತೀಯರಿಗೆ ಮೊಟ್ಟಮೊದಲು ಇಡ್ಲಿ– ದೋಸೆಯ ಬಾಯಿ ರುಚಿಯನ್ನು ಪರಿಚಯಿಸಿದ್ದು ನೇತ್ರಾವತಿ ಮಯ್ಯ ಅವರ ಸೋದರ ಮಾವ ಸುಬ್ಬರಾವ್ ಅವರು. (ನೇತ್ರಾವತಿ ಅವರ ತಾಯಿಯ ತಮ್ಮ.) ಇಡ್ಲಿ ದೋಸೆಯ ಪಾರ್ಸೆಲ್ ನೆಹರೂ ಅವರ ಮನೆಗೂ ಹೋಗುತ್ತಿತ್ತಂತೆ. ಐವತ್ತರ ದಶಕದ ಆ ಕಾಲಕ್ಕೆ ಮದ್ರಾಸ್ ಹೋಟೆಲ್ ಹಾಗೂ ಜಗ್ ಪ್ರವೇಶ್ ಚಂದ್ರ ಅವರು ತೆರೆದ 'ಇಂಡಿಯನ್ ಕಾಫಿ ಹೌಸ್' ಅತ್ಯಂತ ಜನಪ್ರಿಯ ತಾಣಗಳಾಗಿದ್ದವು. ಎಲ್ಲ ರಾಜಕೀಯ ನಾಯಕರು, ಹಿರಿಯ ನಾಗರಿಕರು, ಪತ್ರಕರ್ತರು ಹೀಗೆ ನಗರದ ಎಲ್ಲ ಗಣ್ಯರು ಬಂದು ಸೇರಿ ಹರಟುವ ತಾಣಗಳು ಹೇಳ ಹೆಸರಿಲ್ಲವಾಗಿದೆ ಇಂದು.

'ಕಡಲತೀರದ ಭಾರ್ಗವ',ಕನ್ನಡ ಸಾಹಿತ್ಯ–ಸಂಸ್ಕೃತಿಯ ವಕ್ತಾರ, ಕವಿ, ಕಾದಂಬರಿಕಾರ ಡಾ.ಶಿವರಾಮ ಕಾರಂತರ ಅಣ್ಣನ ಹೆಂಡತಿ ಶೇಷಪ್ಪಯ್ಯನವರ ಸೋದರತ್ತೆ. ಅಲ್ಲದೇ ಕಾರಂತರು ಮಂಗಳೂರಿನಲ್ಲಿ ಓದುತ್ತಿದ್ದಾಗ ಅವರಂತೆ ಪರಸ್ಥಳದಲ್ಲಿದ್ದು ಓದುತ್ತಿದ್ದ ಸುಮಾರು ಇನ್ನೂರು ಬಡ ವಿದ್ಯಾರ್ಥಿಗಳು ಅಲ್ಲಿನ ಜಮೀನುದಾರರಾಗಿದ್ದ ರಾಮರಾಯರು ಎಂಬುವರ ಬಳಿ ಊಟಕ್ಕೆ

ಬರುತ್ತಿದ್ದರಂತೆ. ಸಹೃದಯದ ರಾಮರಾಯರ ಅನ್ನ ದಾಸೋಹಕ್ಕೆ ಬರವಿದ್ದಿಲ್ಲ. ಆಗಿನ ಕಾಲವೂ ತೀರ ಬಡತನದ ಕಾಲ. ನೇತ್ರಾವತಿ ಅವರ ಅಮ್ಮನೂ ರಾಮರಾಯರಲ್ಲಿ ಅಡುಗೆಗೆ ಹೋಗುತ್ತಿದ್ದರಂತೆ. ಹೀಗೆ ನೆಂಟರೂ ಆಗಿದ್ದ ಶಿವರಾಮ ಕಾರಂತರು 'ಚೋಮನ ದುಡಿ' ಯನ್ನು ಬರೆದಾಗ ಒಂದು ಪ್ರತಿಯನ್ನು ನೇತ್ರಾವತಿ ಅಮ್ಮನಿಗೆ ಓದಲು ಕೊಟ್ಟಿದ್ದರಂತೆ. ಆಗಾಗ ಅವರ ಮನೆಗೂ ಬಂದು ಮೂರು ನಾಲ್ಕು ದಿನ ಉಳಿದುಕೊಳ್ಳುತ್ತಿದ್ದರಂತೆ. ದೆಹಲಿಯಂಥ ಮಹಾನಗರದಲ್ಲಿ ಕುಳಿತು ಮಂಗಲಪಾಡಿಯ ಬಾಲ್ಯ ಕಾಲವನ್ನು ನೇತ್ರಾವತಿ ಮಯ್ಯ ಹೇಳುವಾಗ ನಾವೂ 'ಬೆಟ್ಟದ ಜೀವ' ಕಾದಂಬರಿಯ ಭಟ್ಟರ ಮನೆಯಲ್ಲಿ ಕೂತಿದ್ದೇವೆಯೋ ಅನಿಸಬೇಕು! ಮಲೆನಾಡಿನ ದಟ್ಟ ಕಾಡು, ತಗ್ಗು-ದಿಣ್ಣೆ, ನೋಟದಾಚೆಗಿನ ಅಪೂರ್ವ ಚೆಲುವಿನ ಹಸಿರು, ಬಿಡದೇ ಸುರಿಯುವ ಮಳೆ, ಬೆಳಗಿನ ಇಬ್ಬನಿಯಲ್ಲಿ ಮಿಂದ ಚಳಿಗೆ ದೊಡ್ಡ ಗಿಂಡಿಯಲ್ಲಿನ ಬಿಸಿ ಬಿಸಿ ಕಾಫಿ, ಉರಿಯುವ ನೀರೊಲೆಯ ಹಿತ, ಹದವಾಗಿ ಕಾದ ನೀರಿನಲ್ಲಿ ಎಣ್ಣೆ ಸ್ನಾನ ಮಾಡಿದ ಪರಮ ಸುಖದ ಅನುಭೂತಿ ಮನಸ್ಸನ್ನು ಆವರಿಸುತ್ತದೆ.

ಮಂಜೇಶ್ವರ ಗೋವಿಂದ ಪೈ, ಶಿವರಾಮ ಕಾರಂತ, ಪಾರ್ತಿ ಸುಬ್ಬರನ್ನು ಎದುರು ತಂದು ನಿಲ್ಲಿಸುವ ನೇತ್ರಾವತಿ ಮಯ್ಯ ಜೀವನದಲ್ಲಿ ಸ್ವತಃ ಕಷ್ಟ ಉಂಡು ಇತರರಿಗೆ ಸುಖವನ್ನು ನೀಡಿದ ಜೀವ. ಇಳಿ ವಯಸ್ಸಿನಲ್ಲೂ ಒಬ್ಬರೇ ಇರುವ ಅವರಿಗೆ ಜೀವದಂತೆ ಪ್ರೀತಿ ಗೌರವ ತೋರುವ ಅಸಂಖ್ಯ ಕನ್ನಡಿಗ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳ ಬಳಗ ದೊಡ್ಡದಿದೆ. ಅವರಿಗೆ ಹುಷಾರಿಲ್ಲದಾಗ ಮನೆಯಲ್ಲೇ ಇಟ್ಟುಕೊಂಡು ಸೇವೆ ಮಾಡಿದ ಕನ್ನಡದ ವೈದ್ಯ ದಂಪತಿಗಳಿದ್ದಾರೆ. ನಾವು ಇಂಟರ್ ನೆಟ್ಟಿನಲ್ಲಿ ತುದಿ ಬೆರಳಲ್ಲೇ ಬಿಲ್ ಪಾವತಿಸಿಕೊಂಡು ಕೂತಲ್ಲೆ ಮಣಮಣಿಸಿದರೆ ಮಯ್ಯ ಅಮ್ಮ ಬೇರೆಯವರಿಗೆ ಹೊರೆಯಾಗುವುದು ಯಾಕೆ ಎನ್ನುತ್ತ ಈ ವಯಸ್ಸಲ್ಲೂ ಒಬ್ಬರೇ ಹೋಗಿ ಲೈಟು, ನೀರಿನ ಬಿಲ್ಲು ಕಟ್ಟಿ ಬರುತ್ತಾರೆ. ಸೈಕಲ್ ರಿಕ್ಷಾದವನ ಮೊಬೈಲ್ ನಂಬರಿಗೆ ಮಾಡಿದರೆ ಅವ ಬಂದು ಕರೆದೊಯ್ದು ಮತ್ತೆ ಮರಳಿ ಮನೆಗೆ ತಲುಪಿಸಿ ಹೋಗುತ್ತಾನಂತೆ. ಇದ್ದಾಗ ಹೀಗಾದರೆ ಇಲ್ಲದ ಕಾಲಕ್ಕೂ ಅವರು ಸಮಾಜಕ್ಕೆ ಅಮೂಲ್ಯವಾದುದನ್ನು ಕೊಟ್ಟು ಹೋಗುವ ಎಲ್ಲ ವ್ಯವಸ್ಥೆಯನ್ನೂ ಮಾಡಿಕೊಂಡಿದ್ದಾರೆ. ದೆಹಲಿಯ ಏಮ್ಸ್ (All India Institute of Medical Science) ಗೆ ತಮ್ಮ ದೇಹವನ್ನು ದಾನಮಾಡಿದ್ದಾರೆ. ಪುಟ್ಟ ಗೌರಮ್ಮನಂತೆ ಪುಟ್ಟ ಆಕೃತಿಯ ಮಯ್ಯನವರಲ್ಲಿ ಅಸಾಮಾನ್ಯವಾದುದನ್ನು ಸಹಜವಾಗಿ ತೃಣಮೂಲವೂ ಹಿಂಜರಿಯದೇ, ಆಡಂಬರಿಸದೇ ಮಾಡಿಬಿಡುವ ಅದಮ್ಯ ಜೀವನೋತ್ಸಾಹಕ್ಕೆ ಬೇರೆ ಶಬ್ದಗಳಿಲ್ಲ. ಅವರ ಸಂಸ್ಕಾರ, ಹುಟ್ಟಿ –ಬೆಳೆದ ಮಣ್ಣಿನ ಗುಣ ಹಾಗಿದೆ.

ಇತ್ತೀಚೆಗೆ ಕಾರ್ಯಕ್ರಮವೊಂದರಲ್ಲಿ ಅವರ ಪಕ್ಕದಲ್ಲಿ ಕೂತು ಮಾತಾಡಿದ್ದೇ ಮಾತಾಡಿದ್ದು. ತಮ್ಮ ಬಾಲ್ಯದ ನೆನಪುಗಳನ್ನು ಹೇಳಿಕೊಳ್ಳುತ್ತಿದ್ದ ಮಯ್ಯ ಅಮ್ಮನಿಗೆ ಬಿಡದೆ ಎರಡು ದಿನ ಫೋನಿನಲ್ಲೇ ಇನ್ನಷ್ಟು ಮತ್ತಷ್ಟು ಅದು ಹೇಳಿ, ಇದು ಹೇಳಿ ಎಂದು ಪೀಡಿಸಿ ಬರೆದುಕೊಂಡೆ. ಮೈ ಮನಗಳ ಸುಳಿಯಲ್ಲಿ ಮಯ್ಯ ಅವರ ಜೀವನ ದರ್ಶನದೇ ಗುಂಗು, ಅದೇ ತಾನ. ಅವರೇ ಹೇಳಿದ ಕತೆಯೊಂದನ್ನು ಪೋಣಿಸುತ್ತ ಈಗ ತಾನೆ ಅರಳುತ್ತಿರುವ ಹಿತವಾದ ಬೆಳಗನ್ನು ನೋಡುತ್ತ ಅವರು ಪಾರ್ತಿ ಸುಬ್ಬನ ಬಗ್ಗೆ ಬರೆದಿದ್ದೇನೆ, ಸಿಕ್ಕಾಗ ಕೊಡ್ತೀನಿ ಅಂದದ್ದನ್ನೇ ನೆನೆಯುತ್ತ ಬಿಸಿಲಕೋಲ ಹಿಂದೆ ಪುಟಿಯುವ ಮನಸ್ಸನ್ನು ಹಿಡಿಯುತ್ತ ಹಾಗೇ ಕೂತಿದ್ದೇನೆ...

❑ ರೇಣುಕಾ ನಿಡಗುಂದಿ

## 'ದೆಹಲಿ ತುಳು ಸಿರಿ'ಯ ಅಧ್ಯಕ್ಷರಾಗಿ ಡಾ.ವೈ.ಅವನೀಂದ್ರನಾಥ್ ರಾವ್



ದೆಹಲಿಯಲ್ಲಿ ಫೆಬ್ರವರಿ 24ರಂದು ನಡೆದ 'ದೆಹಲಿ ತುಳು ಸಿರಿ' ಮಹಾ ಸಮಾವೇಶದ ಹಿನ್ನೆಲೆಯಲ್ಲಿ ರಾಜಧಾನಿಯಲ್ಲಿ ತುಳು ಚಟುವಟಿಕೆಗಳನ್ನು ಮುಂದುವರಿಸಿಕೊಂಡು ಹೋಗುವ ಉದ್ದೇಶದಿಂದ 'ದೆಹಲಿ ತುಳು ಸಿರಿ' ಸಂಘಟನೆಯನ್ನು ಸ್ಥಾಪಿಸಲಾಗಿದ್ದು, ಡಾ.ವೈ.ಅವನೀಂದ್ರನಾಥ್ ರಾವ್ ಅವರನ್ನು ಅಧ್ಯಕ್ಷರಾಗಿ ಆಯ್ಕೆ ಮಾಡಲಾಗಿದೆ.

ಉಪಾಧ್ಯಕ್ಷರಾಗಿ ಬಾಲಕೃಷ್ಣ ನಾಯ್ಕ್ ಡಿ. ಮತ್ತು ನೈನಾ ಪೂಜಾರಿ, ಪ್ರಧಾನ ಕಾರ್ಯದರ್ಶಿಯಾಗಿ ಅಲೋಕ್ ರೈ, ಜಂಟೀ ಕಾರ್ಯದರ್ಶಿಯಾಗಿ ರವಿರಾಜ್ ಶೆಟ್ಟಿ ಮತ್ತು ಪ್ರದೀಪ್ ಬಿ. ಹಾಗೂ ಖಜಾಂಚಿಯಾಗಿ ದಯಾನಂದ ಬಂಗೇರ ಆಯ್ಕೆಯಾದರು.

ಸಮಿತಿಯ ಸದಸ್ಯರಾಗಿ ಡಾ.ಸಾಯಿಪ್ರಶಾಂತಿ ಶೆಟ್ಟಿ, ವಿಲ್‌ಫ್ರೆಡ್ ಡಿಸೋಜ, ಬಾಲಕೃಷ್ಣ ಸನಿಲ್, ಪ್ರದೀಪ್ ಪೂಜಾರಿ, ಅಶ್ಫಕ್ ಅಹಮದ್, ಮಿಥುನ್ ಶೆಟ್ಟಿ, ಸುಜಿತ್ ಶೆಟ್ಟಿ, ವಂದನಾ ರೈ, ಪೂರ್ಣಿಮಾ ಗೌಡ, ದಿಶಾಂತ್ ಶೆಟ್ಟಿ, ರವೀಂದ್ರ ಬೆಳ್ಳೆ ಆಯ್ಕೆಯಾದರು. ಡಾ.ಪುರುಷೋತ್ತಮ ಬಿಳಿಮಲೆ, ವಸಂತ ಶೆಟ್ಟಿ ಬೆಳ್ಳಾರೆ, ಸೋಮಯ್ಯ ಕಲ್ಲಾಡಿ, ಎಸ್.ಕೃಷ್ಣಭಟ್, ಕೆ.ಎಸ್.ಜಿ.ಶೆಟ್ಟಿ, ಕೆ.ಆರ್.ರಾಮಮೂರ್ತಿ ಹಾಗೂ ಬಾಬುರಾಜ್ ಪೂಜಾರಿ ಅವರು ವಿಶೇಷ ಆಹ್ವಾನಿತರಾಗಿರುತ್ತಾರೆ.


# Saujanya Printing Press

A HOUSE OF QUALITY PRINTING

D-47, Okhla Industrial Area, Phase-I,
New Delhi - 110 020
Phone : 40520770, 26815778
Mobile : 9811104398, 9811604398
e-mail : saujanyapp2010@gmail.com / hpgp2006@gmail.com

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ
ಬಹುವರ್ಣದ ಸುಸಜ್ಜಿತ ಮುದ್ರಣಾಲಯ

ಸೌಜನ್ಯ ಪ್ರಿಂಟಿಂಗ್ ಪ್ರೆಸ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್

ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.

ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ

# ಮನುಬಳಿಗಾರ್ ಅವರ 'ಅಪ್ಪ' ಕೃತಿ ಬಿಡುಗಡೆ

'ಸಮಗ್ರತೆ'ಯನ್ನು ಮೈಗೂಡಿಸಿಕೊಂಡಿರುವ 'ಬಳಿಗಾರ್ ಕುಟುಂಬ' ನಾಡಿಗೇ ಆದರ್ಶ ಎಂದು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ. ಚಂದ್ರಶೇಖರ ಕಂಬಾರ ಬಣ್ಣಿಸಿದ್ದಾರೆ. ಐಬಿಎಚ್ ಪ್ರಕಾಶನ ಹಾಗೂ ಅಭಿನವ ಪ್ರಕಾಶನ ಪ್ರಕಟಿಸಿದ ಮನು ಬಳಿಗಾರ್ ಅವರ 'ಅಪ್ಪ' (ಜೀವನ ಚರಿತ್ರೆ) ಹಾಗೂ ಸಂಸ್ಕೃತಿ ವಿಹಾರ (ಲಲಿತ ಪ್ರಬಂಧಗಳು), ವೀ.ಪ. ಬಳಿಗಾರ್ ಅವರ 'ವೀ.ಪ. ಬಳಿಗಾರ್ ಕವನಗಳು', ರಿಷಿಕಾ ಗುಂಡಿ ಅವರ 'ದಿ. ವಿಂಗ್ಸ್ ಆಫ್ ಇಮ್ಯಾಜಿನೇಷನ್' (ಕವನಗಳು) ಮತ್ತು ಅನನ್ಯಾ ಬಳಿಗೇರ್ ಅವರ 'ದಿ ಅನ್ಡಿಸ್ಕವರ್ಡ್ ವರ್ಲ್ಡ್' (ಕಿರು ಕಾದಂಬರಿ) ಐದು ಕೃತಿಗಳನ್ನು ಇತ್ತೀಚೆಗೆ ಬೆಂಗಳೂರಿನ ಭಾರತೀಯ ವಿದ್ಯಾಭವನದಲ್ಲಿ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಮನು ಬಳಿಗಾರ್ ಬರೆದಿರುವ ತಮ್ಮ ತಂದೆಯ ಜೀವನ ಚರಿತ್ರೆ 'ಅಪ್ಪ' ಪುಸ್ತಕದ ವಿಷಯವನ್ನು ಉಲ್ಲೇಖಿಸಿದ ಕಂಬಾರ ಅವರು, ಬಳಿಗಾರ್ ಕುಟುಂಬ ಸಮಗ್ರತೆಯನ್ನು ಹೊಂದಿದ ಕುಟುಂಬ. ಇಂತಹ ಕುಟುಂಬವನ್ನು ಪುರಾತನ ಮತ್ತು ಜಾನಪದ ಕಥೆಗಳಲ್ಲಿ ನೋಡಬಹುದು. ಈ ಕುಟುಂಬದ ಮುಖ್ಯಸ್ಥ ಪರಮೇಶ್ವರಪ್ಪ ತಮ್ಮ ಒಂದು ಬದುಕಿನ ಜತೆಗೆ ಕಾಲದ ಸಂಕೇತವಾಗಿ ಬಾಳಿದರು. ಅವರ ಜೀವನ ಒಂದು ಕಾದಂಬರಿಗೆ ವಸ್ತುವಾಗಬಹುದು ಎಂದರು.

ಉತ್ತರ ಕರ್ನಾಟಕದ ವಿಶಿಷ್ಟ ಕುಟುಂಬ ಪದ್ಧತಿ, ಅಲ್ಲಿನ ಸಂಸ್ಕೃತಿ, ಆಚಾರ–ಸಂಪ್ರದಾಯಗಳನ್ನು ಅತ್ಯಂತ ಸಹಜ ಸ್ವಭಾವದಲ್ಲಿ ಬಳಿಗಾರ್ ಕುಟುಂಬ ಮೈಗೂಡಿಸಿಕೊಂಡಿತ್ತು. ಪರಮೇಶ್ವರಪ್ಪ ಒಂದು ಊರಿನ ಜವಾಬ್ದಾರಿ ತಾವೇ ಹೊತ್ತುಕೊಂಡು ಯಾವುದೇ ಲೋಪವಿಲ್ಲದೇ ನಡೆಸಿದರು. ತಮ್ಮ ನಡೆ–ನುಡಿಯನ್ನು ಮತ್ತೊಬ್ಬರು ಗಮನಿಸುತ್ತಾರೆ ಎಂದು ಹಗಲು–ರಾತ್ರಿ ಎಚ್ಚೆತ್ತುಕೊಂಡು ಬದುಕಿದರು. ಅವರ ಕುಟುಂಬದ ಎಲ್ಲ ಸದಸ್ಯರಲ್ಲೂ ಆ ಗುಣ ಇಂದಿಗೂ ಕಾಣಬಹುದು ಎಂದು ಕಂಬಾರ ಹೇಳಿದರು.

ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್ ಮಾತನಾಡಿ, ಮನು ಬಳಿಗಾರ್ ಅವರ 'ಅಪ್ಪ' ಒಬ್ಬ ತಂದೆಯ ಚರಿತ್ರೆಯಷ್ಟೆ ಅಲ್ಲ. ಅದು ಗ್ರಾಮದ ಸಂಸ್ಕೃತಿ, ಉತ್ತರ ಕರ್ನಾಟಕದ ಸಂಸ್ಕೃತಿಯ ಸಮಗ್ರ ನೋಟ. ಲೇಖನಗಳಲ್ಲಿ ಬಳಿಗಾರ ಕುಟುಂಬದ ಸ್ವಂತ ಗ್ರಾಮ ಶಿಗ್ಲಿಯ ಮಣ್ಣಿನ ವಾಸನೆ ಇದೆ. ಈ ಕುಟುಂಬದ ಸದಸ್ಯರು ಎಲ್ಲ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದಾರೆ. ಬಳಿಗಾರ್ ಸಹೋದರರ ಸಾಧನೆಯಲ್ಲಿ ತಂದೆ ಪರಮೇಶ್ವರಪ್ಪ ಅವರ ಜತೆಗೆ ತಾಯಿಯ ಕೊಡುಗೆಯೂ ಇದೆ ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಪುಂಡಲೀಕ ಹಾಲಂಬಿ ಮಾತನಾಡಿ, ಕನ್ನಡ ಶ್ರೀಮಂತ ಭಾಷೆ. ಆದರೆ, ಬಹುತೇಕ ಲೇಖಕರು ಭಾಷೆಯ ಬಗ್ಗೆ ಪ್ರೀತಿ ತೋರಿಸುತ್ತಿಲ್ಲ. ಆಂಗ್ಲ ಭಾಷೆಯ ಭ್ರಮೆಯಲ್ಲಿ ಪೋಷಕರು ಕನ್ನಡ ಭಾಷೆಯಿಂದ ದೂರಾಗಿದ್ದಾರೆ. ಕನ್ನಡೇತರರನ್ನು ಕನ್ನಡಿಗರನ್ನಾಗಿ ಮಾಡಬೇಕಾಗಿದೆ. ಕನ್ನಡ ಪ್ರಕಟಣೆಗಳನ್ನು ದುಡ್ಡು ಕೊಟ್ಟು ಓದಿ. ಇದರಿಂದ ಭಾಷೆ ಉಳಿಯುತ್ತದೆ. ಲೇಖಕರು, ಪ್ರಕಾಶಕರು ಬದುಕುತ್ತಾರೆ ಎಂದರು.




# ಮನಸೂರೆಗೊಂಡ ಧನಂಜಯ ಹೆಗಡೆಯವರ ಸಂಗೀತ

ದೆಹಲಿ ಕರ್ನಾಟಕ ಸಂಘ ಹಾಗೂ ಗೋಕರ್ಣ ಮಂಡಲ, ದೆಹಲಿ ಸಂಯುಕ್ತವಾಗಿ ಧನಂಜಯ ಹೆಗಡೆಯವರ ಗಾಯನ ಕಚೇರಿಯನ್ನು ಮಾರ್ಚ್3 ರ ಸಂಜೆ ಏರ್ಪಡಿಸಿತ್ತು.



ಧನಂಜಯ ಪ್ರಹರ ಆಧಾರಿತ ರಾಗ–ಭೀಮಪಲಾಸ್‌ದಲ್ಲಿ, ವಿಲಂಬಿತ ಏಕತಾಳದಲ್ಲಿ, ಅಬತೋ ಬಡಿ ಬೇರ .... ಬಂದಿಶನ್ನೂ ತಮ್ಮ ಗಂಭೀರ ಕಂಠದಲ್ಲಿ ವಿಸ್ತಾರವಾದ ಆಲಾಪಮಾಡಿ, ಲಯದ ವೇಗ ಹೆಚ್ಚಿಸುತ್ತಾ ತಾನ್–ಬೋಲುತಾನ್ ವಿಶಿಷ್ಟ ಸರಗಮಗಳೊಂದಿಗೆ ಹಾಡಿ ವಿಧವಿಧ ತಿಹಾಯಿ ಮಾಡಿದ್ದು ಅವರ ಸ್ವರ–ಲಯಗಳ ಪ್ರಬುದ್ಧತೆಗೆ ಸಾಕ್ಷಿಯಾಗಿತ್ತು. ಧೃತ್ ತೀನತಾಳದಲ್ಲಿ ಜಾಜಾರೇ ಅಪನೇ ಮಂದಿರವಾ...ಹಾಡಿನ ಪರಿ ಸಾಹಿತ್ಯ–ಸ್ವರ–ಭಾವಗಳ ಸುಂದರ ಸಂಗಮವಾಗಿ ಮೂಡಿ ಬಂತು.

ನಂತರ ಅಪರೂಪದ ಶರಣ ಸಾಹಿತ್ಯವನ್ನೊಳಗೊಂಡಿರುವ ಸರ್ಪಭೂಷಣ ಶಿವಯೋಗಿಗಳ ಬಿಡು ಬಾಹ್ಯದೊಳು ಡಂಭವಾ...ಬಹಳ ಅರ್ಥಪೂರ್ಣವಾಗಿ ಭಾವತುಂಬಿ ಹಾಡಿದರು. ಪುರಂದರ ದಾಸರ ಕೃತಿ–ಮೂರುತಿಯನೇ ನಿಲ್ಲಿಸೋ... ರಾಘವೇಂದ್ರ ಸ್ವಾಮಿಗಳ ಭಜನೆ...ಭೋಯತಿವರದೇಂದ್ರ...ರಾಗ ಭೈರವಿಯಲ್ಲಿ – ಚಕೋರಂಗೆ ಚಂದ್ರಮನಾ...ವಚನ ಹಾಡಿ ಶ್ರೋತೃಗಳ ಮನ ತಣಿಸಿದರು.

ಇವರಿಗೆ ತಬಲಾದಲ್ಲಿ ಪಂ.ಆಶಿಸ್‌ಸೇನ್ ಗುಪ್ತಾ, ತಾನ್‌ಪುರದಲ್ಲಿ ಭಾವನಾ ಹಾಗೂ ಹಾರ್ಮೋನಿಯಂ ಸಹವಾದನದಲ್ಲಿ ಶ್ರೀ ವಿನಯ್ ಮಿಶ್ರಾ ಉತ್ತಮ ಸಾಥ್ ನೀಡಿ ಕಾರ್ಯಕ್ರಮಕ್ಕೆ ಮೆರಗು ನೀಡಿದರು.

ಇದೇ ಸಂದರ್ಭದಲ್ಲಿ ಎರಡೂ ಸಂಸ್ಥೆಗಳ ಪರವಾಗಿ ಧನಂಜಯ ಹೆಗಡೆಯವರನ್ನು ಮಾಜಿ ಅಡಿಷನಲ್ ಸಾಲಿಸೆಟರ್ ಜನರಲ್ ಮತ್ತು ಸುಪ್ರೀಂ ಕೋರ್ಟ್‌ನ ಹಿರಿಯ ನ್ಯಾಯವಾದಿ ಶ್ರೀ ಕೆ.ಎನ್.ಭಟ್ ಅವರು ಸನ್ಮಾನಿಸಿದರು. ಡಾ.ವೆಂಕಟಾಚಲ ಹೆಗಡೆ, ಅಧ್ಯಕ್ಷರು ದೆಹಲಿ ಕರ್ನಾಟಕ ಸಂಘ ಇವರು ಎಲ್ಲರಿಗೂ ಕೃತಜ್ಞತೆ ಸಮರ್ಪಿಸಿದರು.



# ನನ್ನ ಹುಡುಗನಿಗೆ

## 'ಪ್ರಜಾವಾಣಿ' ಪ್ರೇಮ ಪತ್ರ ಸ್ಪರ್ಧೆಯಲ್ಲಿ ತೀರ್ಪುಗಾರರ ಮೆಚ್ಚುಗೆ ಪಡೆದ ಪತ್ರ

ಅಂದು ನಿನ್ನ ಪರಿಚಯ ಆಗಿದ್ದರೆ ನಾವು ಸ್ನೇಹಿತರೋ ಇಲ್ಲಾ ಪ್ರೇಮಿಗಳೋ ಆಗಿರುತ್ತಿದ್ದೇವೋ ಇಲ್ಲೋ ಗೊತ್ತಿಲ್ಲ. ನನ್ನ ಪುಟ್ಟ ಮನಸಿಗೆ ನೀನು ಬಹಳವೇ ಹಿಡಿಸಿಬಿಟ್ಟಿದ್ದೆ. ಹೆಸರೇ ಗೊತ್ತಿಲ್ಲದ ನೀನು. ನಿನ್ನ ಅತಾ-ಪತಾ ಪತ್ತೆ ಹಚ್ಚಿದ್ದೆನಾದರೂ ನನ್ನ ಬಗ್ಗೆ ಪಾಪ ನಿನಗೇನೂ ಗೊತ್ತಿಲ್ಲ. ಒಂದೇ ಓಣಿಯಲ್ಲಿ ಓಡಾಡುವ ನಾವಿಬ್ಬರೂ ಎಷ್ಟೋ ಸಲ ಎದುರುಬದುರಾದದ್ದಿದೆ. ನೀನು ನನ್ನನ್ನು ನೋಡಿರಬಹುದು. ನಾನಾಗ ಹೈಸ್ಕೂಲು ಹುಡುಗಿ. ನೀ ನನ್ನ ಗಮನಿಸಿದ್ದರೂ "ಇದೇನು ಹೈಸ್ಕೂಲು ಹುಡುಗಿ", ಎಂದುಕೊಂಡಿರುತ್ತಿ. ನನ್ನ ಜೀವದ ಗೆಳತಿ ಸಂಧ್ಯಾಗೆ ಗೊತ್ತು ನೀನೆಂದರೆ ಎಷ್ಟು ಜೀವ ಬಿಡುತ್ತಿದ್ದೆ ನಾನು ಅಂತಾ. ಇಬ್ಬರೂ ಯುನಿಫಾರ್ಮ್ ಹಾಕಿ ತಯಾರಾಗಿ ಗಾಳಿಚಿಟ್ಟೆ ಮೇಲೆ ಕುಳಿತು ನೀನು ಕಾಲೇಜಿನ ದಾರಿಯಾಗಿ ಮನೆಯೆದುರು ದಾಟುವುದನ್ನೆ ಕಾಯುತ್ತಿರುತ್ತಿದ್ದೆವು. ನೀನು ದಾಟಿದ್ದೇ ನಾನು ಅವ್ವನಿಗೆ –" ಹೋಗಿ ಬರ್ತೀನವ್ವಆಆಆಆಅ "ಎಂದು ಕೂಗಿ ....ರಸ್ತೆಗೆ ಓಡಿ ನಿನ್ನ ಹಿಂದೆ ಭೂಸಪ್ಪನ ಕೂಟಿನವರೆಗೂ ಓಡಿ ಓಡಿಯೇ ನಡೆಯುತ್ತಿದ್ದೆವು. ಅಬ್ಬಾ ಎಂಥಾ ಗಂಭೀರ ನೀನು. ಒಂಚೂರು ಆಚೆ-ಈಚೆ ನೋಡುತ್ತಿದ್ದಿಲ್ಲ. ಕೂಟಿನ ಕಾಮಣ್ಣರು ಏನೇನೋ ಅಂದು ಕಾಡಿಸುತ್ತಿದ್ದರೂ ಗಮನಿಸದೇ ನಿನ್ನನ್ನೇ ಒಂದು ಕಣ್ಣಲ್ಲಿ ಕೂಡಿಹಾಕುತ್ತ ಶಾಲೆಗೆ ಹೋಗುತ್ತಿದ್ದ ನೆನಪು ಇನ್ನೂ ಮಾಸಿಲ್ಲ. ಭೂಸಪ್ಪನ ಕೂಟಿಂದ ನನ್ನ ನಿನ್ನ ದಾರಿ ಬೇರೆಯಾಗುತ್ತಿದ್ದವು. ನಿನ್ನ ದಾರಿ ಕಾಲೇಜಿಗೆ ನನ್ನದು ಹೈಸ್ಕೂಲಿಗೆ. ಹೀಗೆ ಧಾರವಾಡದ ಜಿಟಿಜಿಟಿ ಮಳೆಗಾಲ, ಮಣ್ಣು ಕೆಸರಲ್ಲಿ ನಿನ್ನ ನೋಡುವುದಕ್ಕಾಗೇ ಓಡಲು ಹೋಗಿ ಚಪ್ಪಲಿ ಉಂಗುಷ್ಟ ಕಿತ್ತುಕೊಂಡು ಪಿನ್ನು ತುರುಕಿಸಿ ನಡೆದ ನೋವು ಮರೆತಿಲ್ಲ. ಮಳೆ ರೊಜ್ಜು-ರಾಡಿ ಸಿಡಿಸಿಕೊಂಡು ನೆನೆದುಕೊಂಡು ಬರುವಾಗಲೂ ನೀ ಕಾಣಿಸುತ್ತಿಯೇನೋ ಎಂದು ಕಣ್ಣು ಹುಡುಕುತ್ತಿದ್ದವು ಅದೇ ಭೂಸಪ್ಪನ ಕೂಟಿನ ಹತ್ತಿರ. ಸಂಜೆ ಬಾಗಿಲ ಕಸ ಗೂಡಿಸಿ, ಚಳಿನೀರು ಹೊಡೆದು ದೇವರಿಗೆ ದೀಪ ಹಚ್ಚಿಟ್ಟು, ಅವ್ವ ಒಪ್ಪಿಸಿದ ಕೆಲಸ ಮುಗಿಸಿ ಓದಲು ಪಡಸಾಲೆಯ ಅದೇ ನನ್ನ ಪುಟ್ಟ ಕಿಟಕಿಯ ಹತ್ತಿರವೇ ಕುಳಿತಿರುತ್ತಿದ್ದೆ. ಆ ಸಂಜೆಯ ನಸುಗತ್ತಲಲ್ಲೂ ನೀನು ಮನೆ ಮುಂದೆ ದಾಟಿಹೋದದ್ದೂ ನನಗೆ ತಿಳಿಯುತ್ತಿತ್ತು. ತಂಗಿಯರಿಗೂ ಗೊತ್ತಾಗಿ ಹೋಗಿತ್ತು ನಾನು ಜಿಂಕೆಯಂತೆ ಜಿಗಿದು ಅಂಗಳಕ್ಕೆ ಓಡುವುದು ಯಾರಿಗಾಗಿ ಎಂದು. ನಿನ್ನಷ್ಟೇ ನಿನ್ನ ನೆರಳೂ ನನಗೆ ಪರಿಚಿತ. ಎಲ್ಲಿಯಾದರೂ ನಾನು ಬೇರೆ ಮಾತಿನಲ್ಲಿ ಮುಳುಗಿ ನೀ ಅದೇ ದಾರಿಯಲ್ಲೇನಾದರೂ ಕಂಡುಬಿಟ್ಟರೆ ನನ್ನ ಗೆಳತಿ ಸಂಧ್ಯಾ ಪಕ್ಕೆ ತಿವಿದು "ಎಯ್ ನೋಡಲ..... ನಿನ್ ಹೀರೋ ಹೊಂಟಾನ್‌ಅ"...ಎಂದು ಎಚ್ಚರಿಸುತ್ತಿದ್ದಳು. ನೀನೆ ಸಿಕ್ಕಷ್ಟು ನನ್ನ ಮುಖ ಊರಗಲವಾಗುತ್ತಿತ್ತು ಅರಳಿ. ಏನಿತ್ತು ಆ ಹಪಹಪಿಯಲ್ಲಿ? ನಿನ್ನ ಒಂದು ಝಲಕು ನೋಡಲು ಚಿಟ್ಟೆಯಾಗುತ್ತಿದ್ದೆ. ಸುಮ್ಮನೆ ಗೆಜ್ಜೆಕಟ್ಟಿ ಕುಣಿಯುವ ಮನಸಿಗೆ ಏನೆನ್ನಲಿ? ಯಾವ ಹೆಸರಿಡಲಿ? ಆ ವಯಸ್ಸಿಗೆ ನನ್ನ ಮೋಹವನ್ನು ಏನೆಂದು ಹೆಸರಿಡಲಿ? ಪ್ರೀತಿಯೆನ್ನಲೇ? ಸುಮ್ಮನೇ ಹುಚ್ಚು ಮನಸ್ಸು ಅನ್ನಲೆ? ನಾನೇನು ನಿನ್ನ ಕ್ಲಾಸಮೇಟೂ ಅಲ್ಲ. ಅದೇನು ಪ್ರೀತಿ-ಪ್ರೇಮವೂ ಅಲ್ಲ! ನಾನಿನಗೆ ಇಷ್ಟವಾಗಬಹುದು, ಗುರುತು-ಪರಿಚಯ ಆದೀತು ಅನ್ನೂ ಹಂಗೂ ಇದ್ದಿಲ್ಲ. ಆಗ ನಾನು ಒಂಭತ್ತನೇ ಕ್ಲಾಸು. ನೀನು ಕಾಲೇಜು. ಪಿಯೂ ನೋ ಡಿಗ್ರಿನೋ ಅದೂ ಗೊತ್ತಿಲ್ಲ ನನಗೆ. ಒಟ್ಟಿನಲ್ಲಿ ನೀನೆಂದರೆ ನಂಗಿಷ್ಟ.

ಒಮ್ಮೆ ಅವ್ವ ಬರೆದ ಕಾಗದವನ್ನು ಕೆಂಪುಡಬ್ಬಿಗೆ ಹಾಕಿ ಬಾ ಅಂದಳು. ಸರಿ ನಾನು ಕಾಮನಕಟ್ಟಿವರೆಗೂ ಹೋಗಿ , ಪತ್ರವನ್ನು ಹಾಕಿ ಮರಳುವಾಗ ...ನಿಮ್ಮ ಮನೆ ಕಡೆ ಹೊರಳಿದೆ, ಅರೇ..ನೀನೆ! ಮನೆಯಲ್ಲಿ ಹಾಕಿಕೊಳ್ಳೋ ಹಾಫ್ ತೋಳಿನ ಬುಷ ಶರ್ಟು, ಎಂಥದ್ದೋ ಪ್ಯಾಂಟಿನಲ್ಲಿ, ಬಾಯಲ್ಲಿ ಏನನ್ನೋ ಮುಕ್ಕುತ್ತ , ಮೆಲುಕಾಡಿಸುತ್ತ ನೀನು ಹೊರಗೆ ಬರುವುದೂ ನಾನು ನೋಡುವುದೂ ಸರಿಹೋಗಿತ್ತು. ಒಂದೇ ಕ್ಷಣ....ಹಾಂ ಅದೇ ಕ್ಷಣ....ನನ್ನ ಜೀವಮಾನದಲ್ಲಿ ಮರೆಯಲಾರದಂತೆ ನೀ ನನ್ನೊಳಗೆ ಬಂದಿಯಾಗಿಬಿಟ್ಟೆ! ನಿನ್ನ ಕಣ್ಣು ನಿನ್ನನ್ನೇ ನೋಡುತ್ತಿರುವ ಕಣ್ಣುಗಳನ್ನು ಸಂಧಿಸಿ ಮತ್ತೆ ಬೇರೆಯಾದವು. ನನ್ನ ಕಾಲು ನೆಲದಲ್ಲೇ ಹೂತಂತೆ..ಜಳಜಳ ಬೆವತಂತೆ ..ಗಾಭರಿಯಲ್ಲಿ ದುಡುದುಡು ನಡೆಯತೊಡಗಿದೆ. ಚೌರಿಬಸಪ್ಪನ ಗುಡಿದಾಟಿ ನಮ್ಮ ಮನೆಯ ಮುಂದಿನ ಹರಿಕಲ್ಲಿಗೆ ಬಂದಾಗಲೇ ನಾನು ನಿಂತಿದ್ದು...ಎದುರು ಮನೆಯ ಕಾಕು ಏನೋ ಕೇಳುತ್ತಿದ್ದಳು ಒದರಿ. ನನಗೆ ಈ ಲೋಕದ ಯಾವ ಸದ್ದೂ ಕೇಳಿಸುತ್ತಿರಲಿಲ್ಲ...ನಾನೆಲ್ಲೋ ಕಳೆದುಹೋಗಿ, ಮನಸ್ಸು ನಿಮ್ಮನೆ ಅಂಗಳದಲ್ಲೇ ಜಾರಿಹೋಗಿತ್ತು. ಇನ್ನೇನು ಕಲ್ಲು ಇಳಿದು ಮನೆ ಕಡೇ ಹೆಜ್ಜೆ ಹಾಕಬೇಕು...ನೀನು ಸೈಕಲ್ ತುಳಿದುಕೊಂಡು...ಮೆಲ್ಲನೆ ಮುಗುಳ್ನಗು ತುಳುಕಿಸುತ್ತಾ...ಮನೆಯೆದುರಿನಿಂದ ಸರಿದುಹೋದೆ..... ಮತ್ತೊಮ್ಮೆ ಒಬ್ಬರನ್ನೊಬ್ಬರು ನೋಡಿದೆವು. ಸೈಕಲ್ ಮರೆಯಾದರೂ ನೀನು ಮಾತ್ರ ಕಣ್ಣಿಂದ..ಈ ಹೃದಯದಿಂದ ಮರೆಯಾಗಲೇ ಇಲ್ಲ. ಖರೇನಅ ನೀನು ನನ್ನ ಹಿಂದೆಯೇ ಬಂದುಬಿಟ್ಟಿದ್ದೆ. ಈ ಘಟನೆಗೆ ಮೂವತ್ತು ವರ್ಷಗಳೀಗ. ಈಗ ನೀನು ಐವತ್ತರ ಹುಡುಗ, ನಾನು ನಲವತ್ತೈದರ ಹುಡುಗಿ. ಬದುಕಿನ ಅಸಂಖ್ಯ ಚಳಿ, ಮಳೆ,ಬೇಸಿಗೆ, ಚೈತ್ರ, ವಸಂತ, ಗ್ರೀಷ್ಮ, ಶ್ರಾವಣ, ಶರ್ದೃತು, ನೋವು-ನಲಿವು, ಸಿಹಿ-ಕಹಿ, ಎಲ್ಲವನ್ನೂ ಅನುಭವಿಸುತ್ತಲೇ ದಕ್ಕಿದ್ದನ್ನು ಜೋಳಿಗೆಗೆ ಹಾಕ್ಕೊಂಡು ಬಾಳು ಸವೆದುಹೋಯಿತು. ಹೆಜ್ಜೆ ಸವೆದು ದಾರಿ ಮುಂದೆ ನಡೆದರೂ ಅಂದು ಮನದಲ್ಲಿ ನೆಟ್ಟುಹೋದ ನಿನ್ನ ನೋಟ ನನ್ನೊಳಗೆ ಬೆಚ್ಚಗೆ ಸ್ಥಾಯಿಯಾಗಿ ಉಳಿದುಬಿಟ್ಟಿತು. ನಿನ್ನ ನೆನಪಿನ ಗುಬ್ಬಚ್ಚಿಗೂಡಲ್ಲಿ ನನ್ನ ಬತ್ತದ ಜೀವನಪ್ರೀತಿಯ ಸೆಲೆ ಹರಿಯುತ್ತಿತ್ತು, ಸೆಳೆಯುತ್ತಿತ್ತು ಆಗಾಗ. ಹೆಸರಿಲ್ಲದ ರೂಪು. ಬಯಕೆಗಳನ್ನೇ ಬಿತ್ತದ ಮುಗ್ಧ ಭಾವ, ಆಸೆಗಳೇ ಮೂಡದ ಆ ಆರ್ದ್ರ ನೋಟ ಯಾಕೆ ನನ್ನನ್ನು ಈ ಜೀವಪೂರ್ತಿ ಕಾಡಿತೋ ಗೊತ್ತಿಲ್ಲ ಗೆಳೆಯ. ನಿನ್ನ ಮರೆಯಲೇ ಇಲ್ಲ ನಾನು. ಇಲ್ಲ! ಮರೆವೆ ಎನ್ನುವುದು ನನ್ನ ಬಳಿ ಸುಳಿಯಲಿಲ್ಲ. ಪ್ರತಿಸಾರಿ ತವರಿಗೆ ಹೋದಾಗೆಲ್ಲ ನಿನ್ನನ್ನು ಹುಡುಕಲು ಯತ್ನಿಸುತ್ತಿದ್ದೆ. ಏನೆಂದು ಹೇಳಲಿ? ಯಾರೆಂದು ಹುಡಕಲಿ? ಕೇಳಿದವರು ಹುಚ್ಚೀ ಎಂದು ನಗಲಾರರೇ?

ಅಂತೂ ಹುಡುಕಿಯೇ ಬಿಟ್ಟೆ. ಮೂವತ್ತು ವರ್ಷಗಳ ನಂತರ ಬೆಳಕೊಂದು ಮೂಡಿತು. ನಿನಗೂ ಅಚ್ಚರಿ, ಹೀಗೊಂದು ಜೀವ ಈ ಭೂಮಿಯ ಮೇಲೆ ನಿನ್ನನ್ನೇ ಧ್ಯಾನಿಸುತ್ತ, ಅರಸುತ್ತ, ಮನದಲ್ಲೇ ಬಚ್ಚಿಟ್ಟುಕೊಂಡು ಇರಬಹುದೆನ್ನುವ ಕಲ್ಪನೆಯ ಪುಳಕವೇ ನಿನ್ನನ್ನು ಮೌನವಾಗಿಸಿತು. ಆ ಕ್ಷಣದ ಸಂತಸವನ್ನು ಹಿಡಿದಿಡಲು ನನ್ನಲ್ಲೂ ಶಬ್ದಗಳಿಲ್ಲ. ನೆನಪಿಸಿಕೊಟ್ಟೆ- ಆ ಸಂಜೆ.. ಸೈಕಲ್ಲು..ನಿನ್ನ ಮನೆ ಹತ್ತಿರದ ಪೋಸ್ಟ ಡಬ್ಬಿ. ಎಲ್ಲ. ನಿನಗೇ ನೆನಪಿರದ ನಿನ್ನ ಮರೂನ್ ಕಲರ್ ಗೆರೆ ಗೆರೆ ಶರ್ಟು, ಕಂದು ಬಣ್ಣದ ಪ್ಯಾಂಟು, ಶಾಂಪೂ ಮಾಡಿದ ಕೂದಲ ಹೊಳಪು ಎಲ್ಲವೂ ಎಲ್ಲವೂ ಮೊನ್ನೆ ಮೊನ್ನಿನಂತೆ ನಿಚ್ಚಳವಾಗಿದೆ ನನ್ನ ಮನದಂಗಳದಲ್ಲಿ. ಅದನ್ನೆಲ್ಲ ಒಂದೊಂದಾಗಿ ನೆನೆಪಿಸಿಕೊಟ್ಟೆ...ಅಚ್ಚರಿ -ಸಂಭ್ರಮಾಶ್ಚರ್ಯದಿಂದಲೇ ನನ್ನೊಳಗಿನ ಭಾವಕ್ಕೆ ದನಿಯಾದ, ಹಿತವಾದ, ಮಾತಾದ ನಿನಗೊಂದು ಹೂಮುತ್ತು. ಸಾವಿರ ಸಾವಿರ ಮೈಲುಗಳಾಚೆಗಿನ ನನ್ನ ದನಿ ನಿನ್ನೆದೆಗೆ ಇಳಿಯುವ ಭಾವಕ್ಕೆ ಮನ ನವಿಲಾಗುತ್ತದೆ. ನಿನ್ನಿಂದಲೇ ಶುರುವಾದ ಕನಸೊಂದು ಬದುಕಿದ, ಈ ತನಕ ನಿನ್ನನ್ನೇ ಪ್ರೀತಿಸಿದ ಬದುಕಿಗೆ ಒಮ್ಮೆಯಾದರೂ ನನಸಾಗಿ ಬಾ ಹುಡುಗಾ.

❑ ರೇಣುಕಾ ನಿಡಗುಂದಿ

### ಉಚಿತ ವೈದ್ಯಕೀಯ ತಪಾಸಣೆ

ಮಾರ್ಚ್ 31 ರ ಭಾನುವಾರದಂದು ಡಾ. ಭೀಮಭಟ್ ಅವರಿಂದ ಉಚಿತ ವೈದ್ಯಕೀಯ ತಪಾಸಣೆ ನಡೆಯಲಿದೆ. ದೆಹಲಿ ಕನ್ನಡಿಗರು ಈ ವೈದ್ಯಕೀಯ ಸೇವೆಯನ್ನು ಸದುಪಯೋಗಪಡಿಸಿಕೊಳ್ಳಬೇಕಾಗಿ ವಿನಂತಿ.

# ರಾಷ್ಟ್ರದ ರಾಜಧಾನಿಯಲ್ಲಿ 5ನೇ ಭಾರತ ಕಲಾ ಮೇಳ

ಪ್ರತಿ ವರ್ಷದಂತೆಯೇ ಈ ಬಾರಿಯು ನವದೆಹಲಿಯಲ್ಲಿ 31ನೇ ಜನವರಿಯಿಂದ ಫೆಬ್ರವರಿ 3ರವರೆಗೂ ನಡೆದ 5ನೇ ಭಾರತ ಕಲಾ ಮೇಳ ಹಿರಿಯ ಕಿರಿಯ ಎಲ್ಲಾ ರೀತಿಯ ಕಲಾಸಕ್ತರನ್ನು ಆಕರ್ಷಿಸಿ ತನ್ನತ್ತ ಸೆಳೆಯಿತೆಂದರೆ ಅತಿಶಯೋಕ್ತಿಯೇನಲ್ಲ. ಕಳೆದ ನಾಲ್ಕು ಬಾರಿಯ ಕಲಾ ಮೇಳಕ್ಕೆ ಹೋಲಿಸಿದರೆ ಈ ಬಾರಿಯ ಮೇಳವನ್ನು ವ್ಯವಸ್ಥಿತವಾಗಿ ಆಯೋಜಿಸಿಲಾಗಿತ್ತು. ವಿಶಾಲವಾದ ಮಳಿಗೆಗಳಲ್ಲಿ ವೀಕ್ಷಣೆಗೆ ಸಾಕಷ್ಟು ಸ್ಥಳಾವಕಾಶವುಳ್ಳ ಭವ್ಯವಾಗಿ ನಿರ್ಮಿಸಲ್ಪಟ್ಟ ಮೇಳದ ಒಳಾಂಗದಲ್ಲಿನ ಮಳಿಗೆಗಳಲ್ಲಿ ಪ್ರದರ್ಶಿಸಿರುವ ವರ್ಣರಂಜಿತ ಕೃತಿಗಳನ್ನು ವೀಕ್ಷಿಸುವುದೇ ಒಂದು ಸಂಭ್ರಮದ ಅನುಭವ.



ಪ್ರಸಿದ್ಧ ಹಿರಿಯ ಕಲಾವಿದರನೇಕರ ಮೂಲ ಕಲಾಕೃತಿಗಳನ್ನು ವೀಕ್ಷಿಸುವ, ಎಲ್ಲಾ ರೀತಿಯ ಕಲಾವಿದರುಗಳನ್ನು ಭೇಟಿ ಮಾಡುವ ಅವಕಾಶ ಮತ್ತು ಅವರವರ ಆಸಕ್ತಿಗೆ ತಕ್ಕಂತೆ ಜ್ಞಾನಾರ್ಜನೆಯ ಭಂಡಾರವಾಗಿತ್ತೆಂದರೆ ತಪ್ಪಾಗಲಾರದು.

ಕಲಾ ಮಾರುಕಟ್ಟೆಯು ಮಂದಗತಿಯಲ್ಲಿರುವಂತಹ ಈ ದಿನಗಳಲ್ಲಿಯೂ ಸಾಕಷ್ಟು ವಿಜೃಂಭಣೆಯಿಂದ ಮೇಳ ನಡೆಸಿದ ವ್ಯವಸ್ಥಾಪಕರನ್ನು ಹಾಗೂ ಭಾಗವಹಿಸಿದ ಕಲಾ ಗ್ಯಾಲರಿಗಳನ್ನು ಮೆಚ್ಚಲೇಬೇಕು. ನಾಲ್ಕು ದಿನಗಳ ಮೇಳದಲ್ಲಿ ತುಂಬಿದ್ದ ಜನಸಮೂಹವೇ ಅದಕ್ಕೆ ಸಾಕ್ಷಿ ಎನ್ನಬಹುದು. ಎಲ್ಲಾ ಪ್ರಮುಖ ಕೃತಿಗಳನ್ನು ವಿವರಿಸಲು ಅಸಾಧ್ಯವಾದರೂ ಕೆಲವು ನೆನಪಿನ ಬುತ್ತಿಯಂತೆ ತುಂಬಿ ಬಂದ ತುಣುಕುಗಳಿಲ್ಲಿವೆ.

ದೆಹಲಿಯ ಖ್ಯಾತ ಗ್ಯಾಲರಿಯಾದ 'ಡೆಲ್ಲಿ ಆರ್ಟ್ ಗ್ಯಾಲರಿ'ಯಲ್ಲಿ ಸಂಗ್ರಹದ ಸಾಕಷ್ಟು ಹಿರಿಯ ಭಾರತೀಯ ಆಧುನಿಕ ಕಲಾ ಕೃತಿಗಳ ವೀಕ್ಷಣೆಯ ಅವಕಾಶವು ಸುಂದರ ಅನುಭವ. ಮತ್ತೊಂದು ದೆಹಲಿಯದೇ ಆದ 'ವಹಿದ ಗ್ಯಾಲರಿ'ಯಲ್ಲಿ ಪ್ರದರ್ಶಿಸಲ್ಪಟ್ಟ 'ರಾಮೇಶ್ವರ ಬ್ರೂಟ' ರವರ ಬ್ಲಾಕ್ ಅಂಡ್ ವೈಟ್ ಕೃತಿಯು ವಿಶೇಷ ಗಮನ ಸೆಳೆಯುತ್ತಿತ್ತು.

ಮುಂಬಯಿನ 'ಪ್ರಿಯಶ್ರೀ ಗ್ಯಾಲರಿ'ಯು ಅಕ್ಬರ್ ಪದಮಸೇ ರವರ ಅತ್ಯುತ್ತಮ ಕಲಾಕೃತಿಗಳನ್ನು ಪ್ರದರ್ಶಿಸಿದ್ದು, ದೆಹಲಿಯ ಮತ್ತೊಂದು ಗ್ಯಾಲರಿಯಾದ 'ಸೆವೆನ್ ಆರ್ಟ್ ಲಿಮಿಟೆಡ್'ರಲ್ಲಿ ಪ್ರದರ್ಶನಗೊಂಡ ಮಾರ್ತಾಂಡ ಕೋಶ್ಲಾರವರ ಬ್ರಿಕ್ ಪೌಡರ್ ಡಸ್ಟ್‌ನಿಂದ ಎಂ.ಡಿ.ಎಫ್ ಬೋರ್ಡಿನಲ್ಲಿ ಮಿಶ್ರ ಮಾಧ್ಯಮದಲ್ಲಿ ರಚಿಸಿದ 5 ದೊಡ್ಡನೆಯ ಪ್ಯಾನಲ್‌ಗಳು ವಿಶೇಷವಾಗಿತ್ತು.

ಗುರುಗಾಂವ್ ನ ಖ್ಯಾತ ಗ್ಯಾಲರಿ 'ಆರ್ಟ್ ಅಲೈವ್'ನಲ್ಲಿ ಪ್ರದರ್ಶನಗೊಂಡ 'ಮನು ಪರೇಕ್' ರವರ ವುಡ್ ಮ್ಯೂರಲ್ ಸಹ ಆಕರ್ಷಕವಾಗಿತ್ತು. ಸ್ಪೇನ್ ದೇಶದ ಗ್ಯಾಲರಿಯಲ್ಲಿ ಮೊನ್ಟೆಸೆ ವಾಲ್ಡ್‌ಸ್ ರವರ ಬಿರಿಸಿನ ಸ್ಟ್ರೋಕ್‌ಗಳಿಂದ ಆಕರ್ಷಕ ಪ್ರಕರವರ್ಣಗಳಿಂದ ರಚಿಸಲ್ಪಟ್ಟ ಬೃಹದಾಕಾರದ ಪೋಟ್ರೇಟ್‌ಗಳು ಕೆಲವರ ಮೆಚ್ಚುಗೆಯನ್ನು ಗಳಿಸಿದವು.

ಅಮ್ಸೆರ್ ಡಾಮ್‌ನ ವಿಲ್ಲಾ ಆರ್ಟ್ ಗ್ಯಾಲರಿಯಲ್ಲಿ ಪ್ರದರ್ಶನಗೊಂಡ ಕಲಾಕೃತಿಯೊಂದು ಸರಳತೆಯ ಮತ್ತು ಕಲಾವಿದನ ಚಿಂತನೆಯ ವ್ಯಾಪ್ತಿಯ ವಿಸ್ತಾರವನ್ನು ಸೂಚಿಸುವಂತೆ ಬಿಂಬಿತವಾಗಿತ್ತು.

ಮತ್ತೊಂದು ಮುಂಬಯಿ ಗ್ಯಾಲರಿ ವೋಲ್ಫ್‌ನಲ್ಲಿನ ರಣಬೀರ್ ಕ್ಲೇಕ್‌ರವರ 'ಲಾಂಗ್ ಸ್ಲೀಪ್ ಆಫ್‌ದ ಸ್ಟೋರಿ ಟೆಲ್ಲರ್' ಎಂಬ ಭವ್ಯ ಕೃತಿಯು ಸಹ ಕೆಲವರ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿತ್ತು.

ಈ ಎಲ್ಲಾ ರೀತಿಯ ವರ್ಣರಂಜಿತ ಕಲಾ ಕೃತಿಗಳನ್ನು ವೀಕ್ಷಿಸುತ್ತಾ ಸಹ ಕಲಾವಿದರುಗಳ ಒಡನಾಟ ಇವೆಲ್ಲವೂ ನೆನಪಿನಲ್ಲಿ ಉಳಿಯುವ ಕ್ಷಣಗಳೆಂದರೆ ತಪ್ಪಾಗಲಾರದು. ಎಲ್ಲಾ ರೀತಿಯಲ್ಲಿಯೂ ಈ ಬಾರಿಯ 5ನೇ ಭಾರತ ಕಲಾ ಮೇಳದಲ್ಲಿ ಕಲಾರಸಿಕರು ಅತ್ಯುತ್ತಮ ಕಲಾನುಭವದ ಬುತ್ತಿಹೊತ್ತು ಹೊರ ಬಂದಿದ್ದಾರೆ ಎನ್ನಬಹುದು.

❑ **ಕಲಾವಿದ ಸತ್ಯ ಶಿವಕುಮಾರ್**
**ಬೆಂಗಳೂರು**

# ಏಪ್ರಿಲ್ 6,7ರಂದು 30ನೇ ರಾಷ್ಟ್ರೀಯ ಕನ್ನಡ ಸಮ್ಮೇಳನ

ಏಪ್ರಿಲ್ 6 ಮತ್ತು 7ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ 30ನೇ ರಾಷ್ಟ್ರೀಯ ಕನ್ನಡ ಸಮ್ಮೇಳನ ನಡೆಯಲಿದೆ.

'ದೆಹಲಿ ಕನ್ನಡಿಗ' ಪತ್ರಿಕೆ ಏರ್ಪಡಿಸಿರುವ ಈ ಸಮ್ಮೇಳನವನ್ನು ಧರ್ಮಸ್ಥಳದ ಧರ್ಮಾಧಿಕಾರಿ ಪದ್ಮಭೂಷಣ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರು ಉದ್ಘಾಟಿಸಲಿದ್ದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಕೆ.ಸುಧಾರಾವ್ ಅವರು ಅಧ್ಯಕ್ಷತೆ ವಹಿಸಲಿರುವರು. ರಾಣಿ ಚೆನ್ನಮ್ಮ ವಿ.ವಿ.ಯ ಕುಲಪತಿ ಪ್ರೊ.ಬಿ.ಆರ್.ಅನಂತನ್ ಅವರು ಸ್ಮರಣ ಸಂಚಿಕೆ ಬಿಡುಗಡೆ ಮಾಡಲಿರುವರು.

ಸಮ್ಮೇಳನದ ವಿವಿಧ ಕಾರ್ಯಕ್ರಮಗಳನ್ನು ಅಬಕಾರಿ ಇಲಾಖೆಯ ಆಯುಕ್ತ ಡಾ.ಸಿ.ಸೋಮಶೇಖರ್, ಖ್ಯಾತ ಗಾಯಕ ಡಾ.ಶಿವಮೊಗ್ಗ ಸುಬ್ಬಣ್ಣ, ದಿಲ್ಲಿ ವಿ.ವಿ.ಯ ವಿಶ್ರಾಂತ ಪ್ರಾಧ್ಯಾಪಕಿ ಡಾ.ವಿನೋದಾ ಬಾಯಿ, ದ.ಕ.ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ಪ್ರದೀಪ್ ಕುಮಾರ್ ಕಲ್ಕೂರ್, ಕೇಂದ್ರದ ಮಾಜಿ ಕಾರ್ಯದರ್ಶಿ ಡಾ.ಪಿ.ಡಿ.ಶೆಣೈ, ಆಕಾಶವಾಣಿ ಉಪಮಹಾನಿರ್ದೇಶಕ ಡಾ.ಕೆ.ವಾಗೀಶ್, ಅಮರ ಭಾಷಾ ಚಿಂತನ ಪತ್ರಿಕೆ ಸಂಪಾದಕ ಜೀರಿಗೆ ಲೋಕೇಶ್, ಕರ್ನಾಟಕ ಬ್ಯಾಂಕಿನ ಉಪಮಹಾ ಪ್ರಬಂಧಕ ಕೆ.ಜಿ.ರಮೇಶ್ ರಾವ್ ಅವರು ಉದ್ಘಾಟಿಸಲಿರುವರು.

ಸಮ್ಮೇಳನದಲ್ಲಿ ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಎಂ.ನರೇಂದ್ರ ಅವರಿಗೆ 'ಶ್ರೇಷ್ಠ ಬ್ಯಾಂಕರ್', ಶೈಕ್ಷಣಿಕ ಯೋಜನೆ ಮತ್ತು ಆಡಳಿತ ರಾಷ್ಟ್ರೀಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಆರ್.ಗೋವಿಂದ್ ಅವರಿಗೆ 'ಶ್ರೇಷ್ಠ ಹೊರನಾಡ ಕನ್ನಡಿಗ', ಖ್ಯಾತ ವೈದ್ಯೆ, ಲೇಖಕಿ ಡಾ. ಆರ್.ರತಿದೇವಿ ಅವರಿಗೆ 'ಶ್ರೇಷ್ಠ ಸಾಮಾಜಿಕ ಕಾರ್ಯಕರ್ತೆ', ಕರ್ನಾಟಕ ಸರಕಾರದ ದಿಲ್ಲಿ ಪ್ರತಿನಿಧಿ ಬೈಕೆರೆ ನಾಗೇಶ್ ಅವರಿಗೆ 'ಶ್ರೇಷ್ಠ ದಿಲ್ಲಿ ಕನ್ನಡಿಗ' ಪ್ರಶಸ್ತಿಗಳನ್ನು ನೀಡಲಾಗುವುದು.

ಸಮ್ಮೇಳನದಲ್ಲಿ ಕನ್ನಡಕ್ಕೆ ಸಂಬಂಧಿಸಿದಂತೆ ವಿಚಾರ ಸಂಕಿರಣಗಳು, ಕವಿಗೋಷ್ಠಿ, ಮಹಿಳಾ ಉತ್ಸವ, ಸಂಗೀತ, ನೃತ್ಯ, ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು ದೇಶದಾದ್ಯಂತದಿಂದ ಕನ್ನಡಿಗರು ಭಾಗವಹಿಸಲಿರುವರು.

ಸಮ್ಮೇಳನಕ್ಕೆ ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಭಾಗವಹಿಸಬೇಕೆಂದು ಸಮ್ಮೇಳನ ಸಂಚಾಲಕ ಬಾ.ಸಾಮಗ ಅವರು ವಿನಂತಿಸಿಕೊಂಡಿದ್ದಾರೆ.

## ದೆಹಲಿ ಪೋಲೀಸ್ ಕನ್ನಡಿಗರ ಕಲ್ಯಾಣ ಸಮಿತಿಯ ವನವಿಹಾರ

ಫೆಬ್ರವರಿ 17ರಂದು ದೆಹಲಿ ಪೋಲೀಸ್ ಕಲ್ಯಾಣ ಸಮಿತಿಯವರಿಂದಸೆಕ್ಟರ್ 16, ರೋಹಿಣಿಯಲ್ಲಿ ವನವಿಹಾರ ಹಮ್ಮಿಕೊಳ್ಳಲಾಗಿತ್ತು. ಸಂಘದ ವತಿಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದು ಮಕ್ಕಳಿಗೆ ಹಾಗೂ ಮಹಿಳೆಯರಿಗೆ ಆಟೋಟ ಸ್ಪರ್ಧೆಗಳನ್ನು ನಡೆಸಲಾಯಿತು. ಕನ್ನಡ ಚಲನಚಿತ್ರಗಳ ಮಧುರ ಹಾಡುಗಳ ಮಧ್ಯದಲ್ಲಿ ಬಗೆಬಗೆಯ ಭೋಜನವನ್ನು ಸವಿಯಲಾಯಿತು. ಹಾಗೆ ಕಾರ್ಯಕ್ರಮದ ಕೊನೆಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀಯುತ ವಿಜಯ್ ಕುಮಾರ್‌ರವರು ಆಟೋಟ ಸ್ಪರ್ಧೆಗಳ ವಿಜೇತರಾದವರಿಗೆ ಬಹುಮಾನ ವಿತರಣೆ ಮಾಡಿದರು. ಕೊನೆಯಲ್ಲಿ ತಂಬೋಲ ಆಡುವುದರ ಮುಖಾಂತರ ವನವಿಹಾರದ ಕಾರ್ಯಕ್ರಮವನ್ನು ಮುಕ್ತಾಯ ಮಾಡಲಾಯಿತು.

ಎಚ್.ಜಿ.ಶಿವರಾಮ್



## ಗುರ್‌ಗಾಂನ ಲೀಸರ್ ಪಾರ್ಕ್‌ನಲ್ಲಿ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್‌ನ ವಾರ್ಷಿಕ ಪಿಕ್‌ನಿಕ್



ಫೆಬ್ರವರಿ 9ರಂದು ಸೂರಜ್‌ಕುಂಡ್ ಮೇಳದಲ್ಲಿ ಕರ್ನಾಟಕ ದಿನಾಚರಣೆಯಂದು ನಾಡಗೀತೆ ಹಾಡಿದ ಸಂಘದ ಕಲಾವಿದರು



Delhi Karnataka Sangha's Abhimatha Monthly,
March - 2013, Price Rs.1/- RNI Regn. No. 53405/91, DL-SW-1/4016/13-15
Printout Date : March 8th / 9th, Postal Date :10th / 11th, Total Pages-16



Editor: Smt.Usha Bharatadri, Printed & Published by C.M. Nagaraja General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615 and printed at Saujanya Printing Press
C-95, Okhla Industrial Area, Phase-I, New Delhi-110020, Tel: 26815778, 40520770